

ಸಂಪುಟ 24 ಸಂಚಿಕೆ 47
ನವೆಂಬರ್ 24. 2002 ಬೆಲೆ ರೂ. 3.00

ಐಕ್ಯರಂಗ

ದುಡಿಯುವ ಜನರ ಪ್ರಾಣ ಮಿತ್ರ

ಅಕ್ಟೋಬರ್ ಮಹಾನ್‌ಕ್ರಾಂತಿ ತೋರುವ ದಾರಿದೀಪ










ಗುಜರಾತ್ ಚುನಾವಣೆ ಫ್ಯಾಸಿಸ್ಟರ ಕಸರತ್ತು



ಕಾವೇರಿ : ಜಯಲಲಿತಾಗೆ ಬಿಮಾರಿ! ಪ್ರಧಾನಿ ಬೇಜವಾಬ್ದಾರಿ!!

ಭಾರತ ಉಳಿಸಲು ಚಿಂತನ - ಮಂಥನ


ಕೊಡಗಿನ ಕಲಿಯ ಭೇಟಿ

ವಿಮೋಚನಾ ಸಮರದಲ್ಲಿ ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

4





ಹಿಂದಿನ ಸಂಚಿಕೆಯಲ್ಲಿ ಮಾನವೀಯ ಮೌಲ್ಯಗಳನ್ನು ಮಾಂಸ-ರಕ್ತಗಳಲ್ಲಿ ತುಂಬಿ ಜಾಟ್ ರೈತರು ಯಾವ ರೀತಿ ಬ್ಯಾರಕ್‌ಗಳಲ್ಲಿ ಕ್ರೂರವಾದ ಅಮಾನವೀಯ ಜೀವಿಗಳಾಗುತ್ತಿದ್ದರು, ಸೈನಿಕರು ತಮ್ಮ ಕಾಮದಾಹಕ್ಕಾಗಿ ಜಾಡಮಾಲಿಗಳ ಮೇಲಿನ ಅತ್ಯಾಚಾರ, ಸಲಿಂಗರತಿ ಆಗಾಗ ದನ, ನಾಯಿ, ಆಡುಗಳ ಬಳಕೆ, ತನ್ನಹಳ್ಳಿಯಲ್ಲೇ ಸಾಮ್ರಾಜ್ಯಶಾಹಿಯನ್ನು ದ್ವೇಷಿಸುವುದನ್ನು ಕಲಿತ ಜಯಪಾಲ್ ಸಿಂಗ್, ಅವರಲ್ಲಿ ಕ್ರಾಂತಿಕಾರಿ ಮೂರ್ತಿ ರೂಪ ತಳೆದ ಬಗೆ ಮತ್ತು 35ವರ್ಷಕ್ಕೂಹೆಚ್ಚು ಕಾಲ ಬ್ರಿಟಿಷರ ವಿಧೇಯನಾಗಿ ಸೇವೆ ಸಲ್ಲಿಸಿದ ಜಯಪಾಲ್ ಸಿಂಗರ ತಂದೆ..... ಈ ಬಗ್ಗೆ ಓದಿರುವಿರಿ ಮುಂದೆ ಓದಿ

ಕನ್ನಡಕ್ಕೆ - ವಿಶ್ವ ಕುಂದಾಪುರ

ಎರಡನೇ ಮಹಾಯುದ್ಧ ಬಂತು. ಅದರ ಜತೆ, 15 ವರ್ಷಕ್ಕೂ ಹೆಚ್ಚು ಕಾಲ ಬ್ಯಾರಕ್ ಹುಡುಗನಾಗಿ ಗುಲಾಮನಾಗಿದ್ದ ಬ್ಯಾರಕ್‌ಗಳಿಗೆ ನಾನೂ ಮರಳಿದೆ. ಆದರೆ ಈ ಬಾರಿ ನನ್ನ ಪಾತ್ರ ಬೇರೆಯಾಗಿತ್ತು ಕೆಳ ಹಂತದ ಸೈನಿಕರನ್ನು ಗುಲಾಮರನ್ನಾಗಿ ನಡೆಸಿಕೊಳ್ಳುವ ಅಧಿಕಾರಿಯಾಗಿದ್ದೆ!

ತಮ್ಮ ಬಾಡಿಗೆ ಬಂಟರ ಹಿಂಡುಗಳನ್ನು ನೋಡಿಕೊಳ್ಳಲು ರಾಜ ಹಾಗೂ ಸಾಮ್ರಾಟರಿಂದ ಅಧಿಕಾರ ಪಡೆದ ಕಮಿಷನ್ಡ್ ಅಧಿಕಾರಿಯಾಗಿದ್ದೆ ನಾನೀಗ.

'ಸೂರ್ಯ ಮುಳುಗದ ಸಾಮ್ರಾಜ್ಯ'ದ ಸಾಮ್ರಾಟರು ಹಾಗೂ ಭಾರತದಲ್ಲಿನ ಅವರ ಪ್ರತಿನಿಧಿಗಳು ದೊಡ್ಡ ತಪ್ಪು ಮಾಡಿದ್ದರು. ಪಾಪ, ಅದು ಅವರಿಗೆ ಹೇಗೆ ತಾನು ಗೊತ್ತಾಗಿರುತ್ತದೆ, ಅಲ್ಲವೆ?

ಮಿಲಿಟರಿ ಕಾಲೇಜಿನಿಂದ ನಿಯೋಜಿತನಾದ ಮೇಲೆ ಆಗ್ರಾದಲ್ಲಿರುವ ತಂದೆಯನ್ನು ಭೇಟಿ ಮಾಡಿದೆ. ಆಗ ಅಲ್ಲಿ ಅವರು ಬೆಟಾಲಿಯಾ ಹೈದರಾಬಾದ್ ಗುಂಪಿನ ರೆಜಿಮೆಂಟಲ್ ತರಬೇತಿ ಕೇಂದ್ರದಲ್ಲಿ (ಅನಂತರ ಇದು ಕಲಮಾಂವ್ ರೆಜಿಮೆಂಟ್ ಆಯಿತು) ಸುಬೇದಾರ್ ಮೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದರು.

ಅಪ್ಪನಿಗೆ ನನ್ನ ಬಗ್ಗೆ ಹೆಮ್ಮೆಯಾಯಿತು. ಸೈನ್ಯದ ಶೈಲಿಯಲ್ಲಿ ಸೆಲ್ಯೂಟ್ ಮಾಡಿದರು. ನಾನು ಸೇನೆಯಲ್ಲಿ ಅಪ್ಪನ ಸ್ಥಾನಕ್ಕಿಂತ ಮೇಲಿನ ಹುದ್ದೆಯಲ್ಲಿದ್ದೆ.

"ಕ್ಯಾಪ್ಟನ್ ತಿಮ್ಮಯ್ಯ ಮತ್ತು ಕ್ಯಾಪ್ಟನ್ ಮಜೀದ್‌ರನ್ನು ಭೇಟಿಯಾಗು" ಎಂದು ತಂದೆ ನನಗೆ ಆದೇಶ ನೀಡಿದರು. "ಸುಬೇದಾರ್ ಮೇಜರ್ ಸಾಹಿಬ್, ನೀನು ಹಿರಿಯ ಅಧಿಕಾರಿಯೊಬ್ಬನಿಗೆ ಆದೇಶ ನೀಡುವಂತಿಲ್ಲ. ಅಟೆನ್ಷನ್" ಎಂದು ನಾನು ತಂದೆ ಜತೆ ಹಾಸ್ಯವಾಡಿದೆ. ಕ್ಯಾಪ್ಟನ್ ತಿಮ್ಮಯ್ಯ ಹಾಗೂ ಮಜೀದರನ್ನು ಭೇಟಿಯಾಗಲು ಅವರ ಜತೆ ತೆರಳಿದೆ.

ಕೊಡಗಿನ ಕಲಿಯ ಭೇಟಿ

ಕ್ಯಾಪ್ಟನ್ ತಿಮ್ಮಯ್ಯ ಕೊಡಗಿನ ಕಲಿ. ಆಗ ಅವರು ಭಾರತೀಯ ಸೇನೆಯ ಮುಖ್ಯಸ್ಥರಾಗಿದ್ದರು. (ಚೀಫ್ ಆಫ್ ಸ್ಟಾಫ್) ಅವರು ಎಲ್ಲಾ ಅರ್ಥದಲ್ಲಿ ರಾಷ್ಟ್ರೀಯ ಹೀರೋ ಆಗಿದ್ದರು. ತಿಮ್ಮಯ್ಯ ಕೆಳದರ್ಜೆಯ ಅಧಿಕಾರಿಯಾಗಿದ್ದಾಗ ಬನಾರಸ್ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸೆಟೆದು ನಿಂತು ಅವರನ್ನು ಸ್ವಾಗತಿಸಿದ್ದೆ. ಹೃತ್ಪೂರ್ವಕ ಗೌರವಕ್ಕೆ ಪಾತ್ರನಾಗಿದ್ದ ಅವರನ್ನು ಒಬ್ಬ ಅಧಿಕಾರಿ ನೆಲೆಯಲ್ಲಿ ನಾನೀಗ ಭೇಟಿ ಮಾಡಿದೆ.

ನಾನವರಿಗೆ ಸೆಲ್ಯೂಟ್ ಮಾಡಿದೆ. ಎಲ್ಲರೂ ಅವರನ್ನು ಪ್ರೀತಿಯಿಂದ 'ತಿಮ್ಮಿ' ಎಂದು ಕರೆಯುತ್ತಿದ್ದೆವು. ಎದ್ದುಬಂದು ನನ್ನ ಕೈ ಕುಲುಕಿದರು. ಕುಳಿತುಕೊಳ್ಳಲು ಸೂಚಿಸಿದರು. ಸಿಗರೇಟ್ ನೀಡಿದರು.

"ಈಗ ನಿಮಗೆ ಸಂತೋಷವೇ ಸಾಹಿಬ್? ಅಭಿನಂದನೆಗಳು" ಎಂದು 'ತಿಮ್ಮಿ' ನನ್ನ ತಂದೆಯನ್ನು ಅಭಿನಂದಿಸಿದರು.

"ಮತ್ತೆ ನೀನು ತರುಣನೇ, ನೀನೀಗ ಒಬ್ಬ ಅಧಿಕಾರಿ. ಹುಡುಗಾಟಿಕೆ ಬೇಡ. ಸದಾ ಒಳ್ಳೆಯ ಹುಡುಗನಾಗಿರು" ಎಂದು ತುಟಿ ಮೇಲೆ ತುಂಟ ನಗೆ ಬೀರುತ್ತಾ ಭಾರತೀಯ ಸೇನೆಯ ಮಹಾಸೇನಾನಿ ನನಗೆ ಸಲಹೆ ಮಾಡಿದರು. 'ತಿಮ್ಮಿ' ಕಡುಕೋಪಗೊಂಡಾಗಲೂ ಆ ಕಿರು ನಗೆ ಮಾಯವಾಗುತ್ತಿರಲಿಲ್ಲ. ಕ್ಯಾಪ್ಟನ್ ತಿಮ್ಮಯ್ಯ ನನ್ನನ್ನು ಅಡಿಯಿಂದ ಮುಡಿಯವರೆಗೆ ಅಳೆದು ತಂದೆಗೆ ಈ ರೀತಿ ಆಶ್ವಾಸನೆ ನೀಡಿದರು.

"ಬಹೋರಂಗ್‌ಲಾಲ್! ನೀನೇನೂ ಚಿಂತೆ ಮಾಡಬೇಡ. ಇವನೊಬ್ಬ ಉತ್ತಮ ಅಧಿಕಾರಿಯಾಗುತ್ತಾನೆ".

ಎಡವಿದ ಭಾವಿ ಕಮಾಂಡರ್ ಇನ್ ಚೀಫ್!

ಭಾರತೀಯ ಸೇನೆಯ ಭಾವಿ ಕಮಾಂಡರ್ ಇನ್ ಚೀಫ್ (ಸಿ-ಇನ್-ಸಿ) ಕೂಡ ಎಡವಿದರು! ನಾನು ಸೈನ್ಯದ ನಿಯಮಗಳಿಗೆ ಅನುಗುಣವಾಗಿ ಒಬ್ಬ ಉತ್ತಮ ಅಧಿಕಾರಿಯಾಗಲು ಸೇನೆ ಸೇರಲಿಲ್ಲ ಎನ್ನುವುದು ಮುಂದಿನ ವರ್ಷಗಳು ಸಾಬೀತು ಮಾಡಿದವು. ಮುಂದೆ ಪಾಕಿಸ್ತಾನ ಸೇನೆಯಲ್ಲಿ ಮೇಜರ್ ಜನರಲ್ ಹುದ್ದೆಗೇರಿದ ಮಜೀದ್ ಕೂಡ ನನ್ನನ್ನು ಆತ್ಮೀಯವಾಗಿ ಬರಮಾಡಿಕೊಂಡರು. ರಾತ್ರಿ ಮೆಸ್‌ಗೆ ಬರುವಂತೆ ಆಹ್ವಾನಿಸಿದರು. ರಾತ್ರಿ ಊಟಕ್ಕಾಗಿ ಪ್ರಥಮ ಬಾರಿಗೆ ಹಾಲ್ ಪ್ರವೇಶಿಸಿದಾಗ ಹೊಳೆಯುವ ವಿಶೇಷ ಪೋಷಾಕು ತೊಟ್ಟು ಸದ್ದಿಲ್ಲದೆ ಸುಳಿದಾಡುತ್ತಿದ್ದ ಬೇಕರ್‌ಗಳನ್ನು ಕಂಡೆ. ನಾನು ಬ್ಯಾರಕ್ ಬಾಯ್ ಆಗಿದ್ದಾಗ ಟೆನ್ನಿಸ್ ಕೋರ್ಟ್‌ನ ಬೇಲಿಯ ಹಿಂದಿನಿಂದ ಭಯಮಿಶ್ರಿತನಾಗಿ ಅವರನ್ನು ನೋಡುತ್ತಿದ್ದುದು ನೆನಪಾಯಿತು.

ಮೆತ್ತನೆಯ ಗಾದಿಯೊಂದರಲ್ಲಿ ಕುಳಿತು ನಾವು ಮಾತಿಗೆ ತೊಡಗಿದೆವು.

"ಬ್ರಿಟಿಷರನ್ನು ಯಾವತ್ತೂ ನಂಬಬೇಡ. ಅವರು ನಮ್ಮನ್ನು ದ್ವೇಷಿಸುತ್ತಾರೆ. ನಾವು ಅವರನ್ನು ದ್ವೇಷಿಸಬೇಕು"- ಮಜೀದ್ ಇದ್ದಕ್ಕಿದ್ದಂತೆ ಸಲಹೆ ಮಂಡಿಸಿದ.

"ಅವರನ್ನು ಪ್ರತಿರೋಧಿಸಿದ್ದಕ್ಕೆ ಇದುವರೆಗೆ ನನ್ನನ್ನು ಮೂರು ಬಾರಿ ಕೋರ್ಟ್ ಮಾರ್ಷಲ್‌ಗೆ ಒಳಪಡಿಸಲಾಗಿದೆ. ತಮ್ಮ ಪತ್ನಿಯರು ಹಾಗೂ ಪುತ್ರಿಯರ ಜತೆ ನಾವು ಬೆರೆಯುವುದನ್ನು ಅವರು ಇಷ್ಟಪಡುವುದಿಲ್ಲ"- ಮಜಿದ್ ಹೇಳಲು ಮುಂದುವರಿಸಿದ.

ಅದಕ್ಕೆ ನಾನೆಂದೆ "ಅವರು ಆಳುವವರು. ನಾವು ಆಳಿಸಿಕೊಳ್ಳುವವರು. ಆ ಭಾವನೆ ಇದ್ದೇ ಇರುತ್ತದೆ. ಅದನ್ನು ತೊಡೆದುಹಾಕಬೇಕಾದರೆ ನಾವು ಪ್ರಕ್ರಿಯೆಯನ್ನೇ ಉಲ್ಟಾಪಲ್ಟಾ ಮಾಡಬೇಕು. ಯುದ್ಧ ನಮ್ಮನ್ನು ಹಾಗೆಯೇ ಬಿಡುವುದಿಲ್ಲ".

ನನಗೆ ಬಹಳ ಖುಷಿಯಾಗಿತ್ತು. ನೊರೆ ತುಂಬಿದ ಸ್ಕಾಚ್ ಗಂಟಲಲ್ಲಿ ಇಳಿಯುತ್ತಿತ್ತು. ಯುದ್ಧ, ಅದು ತರಬಹುದಾದ ರಾಜಕೀಯ ಬದಲಾವಣೆಗಳು, ಹುಡುಗಿಯರು ಹಾಗೂ ಕಂಟೋನ್ಮೆಂಟ್‌ಗಳಲ್ಲಿ ಲಾಸ್ಯವಾಡುತ್ತಿದ್ದ ವೇಶ್ಯಾವಾಟಿಕೆ, ಸೈನಿಕರ(ಯಾಂಕಿ) ಠೇಂಕಾರ ಮೊದಲಾದ ವಿಷಯಗಳ ಬಗ್ಗೆ ಹರಟೆ ಕೊಚ್ಚಿದೆವು. ಸೈನಿಕರು ಬ್ರಿಟೀಷರನ್ನು ದ್ವೇಷಿಸುತ್ತಿದ್ದಾರೆ ಎಂದು ಮಜೀದ್ ಮಾಹಿತಿ ನೀಡಿದರು.

ನಾವಿಬ್ಬರೂ ಹಾಕಿ ಆಟದಲ್ಲಿ ಆಸಕ್ತಿ ಉಳ್ಳವರು. 1936ರಲ್ಲಿ ನಾವಿಬ್ಬರೂ ಬನಾರಸ್ ಜಿಲ್ಲಾ ಹಾಕಿ ಇಲೆವೆನ್ ತಂಡದ ಪರವಾಗಿ ಆಡಿದ್ದೆವು.

ಪಾಕಿಸ್ತಾನ ಸೇನೆಯ ಮೇಜರ್ ಜನರಲ್ ಆದ ಮಜೀದ್‌ನನ್ನು ಇರಾನಿನ ಶಾ ರನ್ನು ಕೊಲ್ಲಲು ಷಡ್ಯಂತ್ರ ಹೂಡಿದ ಆರೋಪದ ಮೇಲೆ ಪಾಕಿಸ್ತಾನದ ಸರಕಾರ ಬಂಧಿಸಿತು ಎನ್ನುವುದನ್ನು ಕಳೆದ ವರ್ಷವೋ ಅದಕ್ಕೂ ಮುಂಚೆಯೋ ಪತ್ರಿಕೆಯಲ್ಲಿ ಓದಿದ್ದೆ. ನನಗೆ ತುಂಬಾ ಆಶ್ಚರ್ಯವಾಯಿತು.

ನಮ್ಮ ದೇಶದಲ್ಲಿರುವ ಬ್ರಿಟೀಷರನ್ನು ನಾನು ದ್ವೇಷಿಸುತ್ತಿದ್ದೆ. ಆದರೆ, ಭಾರತೀಯ ಮತ್ತು ಬ್ರಿಟೀಷ್ ಅಧಿಕಾರಿಗಳ ಮಧ್ಯೆ ದ್ವೇಷ ಆಳವಾಗಿ ಬೇರೂರಿದೆ ಎನ್ನುವುದು ಅದೇ ಮೊದಲ ಬಾರಿಗೆ ನನಗೆ ಗೊತ್ತಾಯಿತು. ಮೇಲ್ನೋಟಕ್ಕೆ ಎಲ್ಲರೂ ಚೆನ್ನಾಗಿಯೇ ಇರುತ್ತಿದ್ದರು. ನಗುತ್ತಿದ್ದರು, ಹಾಸ್ಯ ಮಾಡುತ್ತಿದ್ದರು, ಒಟ್ಟಿಗೆ ಸುರಾಪಾನ ಮಾಡುತ್ತಿದ್ದರು. ಆದರೆ ವೈರತ್ವದ ಬೆಂಕಿ ಅವರ ಹೃದಯಗಳಲ್ಲಿ ಧಗಧಗಿಸುತ್ತಿತ್ತು. ಭಾರತೀಯ ಜನರ ಮೇಲೆ ದೌರ್ಜನ್ಯ ಎಸಗುವುದರಲ್ಲಿ ಅವರು ಖಂಡಿತಕ್ಕೂ ಒಂದಾಗಿರಲಿಲ್ಲ ಎನ್ನುವುದು ಸ್ಪಷ್ಟವಾಗಿತ್ತು.

ಒಂದು ಆಶಾಕಿರಣ ನನ್ನ ಹೃದಯದಲ್ಲಿ ಕುಡಿಯೊಡೆಯಿತು. ಅದು ಬೆಳೆಯಿತು. ಆನಂತರ ಫಲ ನೀಡಿತು.

ಒಂದು ಅಪರ ರಾತ್ರಿಯಲ್ಲಿ ಆಗ್ರಾದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಲ್ಲಿ ಗೆಳೆಯನೊಬ್ಬನಿಗಾಗಿ ಕಾಯುತ್ತಾ ನಿಂತಿದ್ದೆ. ನನ್ನ ಕಟ್ಟುಮಸ್ತಾದ ದೇಹ, ಸೌಂದರ್ಯ, ನಿಲುವು - ಭಾವಭಂಗಿ ವಯಸ್ಸಾದ ಬ್ರಿಟೀಷ್ ಮಹಿಳೆಯೊಬ್ಬಳನ್ನು ಆಕರ್ಷಿಸಿತು.

'ಹೋಯ್ ಲೆಫ್ಟಿನೆಂಟ್, ಏಕಾಂಗಿತನ ಕಾಡುತ್ತಿದೆಯೋ' ಎಂದು ಕೇಳಿದವಳೇ ನನ್ನನ್ನು ಆಲಂಗಿಸಿಕೊಂಡಳು. ಕೆಳದರ್ಜೆಯ ಬ್ರಿಟೀಷ್ ಸೈನಿಕನೊಬ್ಬ ಅವಳನ್ನು ತಿವಿದು, "ಲೂಸಿ, ಹುಚ್ಚಿಯಂತೆ ವರ್ತಿಸಬೇಡ. ಆತ ಒಬ್ಬ ಭಾರತೀಯ ಬಾಸ್ಟರ್ಡ್ " ಎಂದು ನನ್ನನ್ನು ತುಚ್ಛವಾಗಿ ಬೈದ.

ನನಗೆ ಆ ಮಹಿಳೆ ಬಗ್ಗೆಯೇನೂ ಆಸಕ್ತಿಯಿರಲಿಲ್ಲ. ಆದರೆ ಆ ಸೈನಿಕನ ಬಗ್ಗೆ ಖಂಡಿತವಾಗಿಯೂ ಕುತೂಹಲ ಮೂಡಿತು. ಹಳ್ಳಿಯಲ್ಲಿದ್ದಾಗ ಬಿಸಿಲಿನ ಝಳಕ್ಕೆ ಕೋಪಗೊಂಡು ಎಮ್ಮೆಗೆ ಹೊಡೆಯುತ್ತಿದ್ದಾಗಿನ ಭಾವನೆ ಅನುಭವಕ್ಕೆ ಬಂತು. ದೇಶದ ನಾನಿದ್ದ ಭಾಗದಲ್ಲಿ ಮರಳುಮಿಶ್ರಿತ ಬಿರುಗಾಳಿ ಸರ್ವಸಾಮಾನ್ಯ. ಅದರಿಂದಾಗುತ್ತಿದ್ದ ಅನಾಹುತವೂ ಮನಸ್ಸಿನಲ್ಲಿ ಸುಳಿಯಿತು.

ನನ್ನ ಸಿಟ್ಟು ನೆತ್ತಿಗೇರಿತ್ತು. ಆ ಸಾಮ್ರಾಜ್ಯಶಾಹಿ ಬಂಟ ಸೈನಿಕನ ಮೇಲೆ ಎರಗಿದೆ. ಮುಷ್ಟಿಯಿಂದ ಗುದ್ದಿದೆ. ಆತ ರಕ್ತ ಸುರಿಸುತ್ತಾ ಪ್ರಜ್ಞಾಹೀನನಾಗಿ ಬಿದ್ದ.

ಇದರಿಂದ ನನಗೆ ತೃಪ್ತಿಯಾದಂತೆನಿಸಿತು. ವೈರಿ ಪಾಳಯದಲ್ಲೇ ನನ್ನ ಸಂಘರ್ಷ ಆರಂಭವಾಗಿತ್ತು.!

ಯುದ್ಧ ಭಯಾನಕವಾದುದು. ಬಾಡಿಗೆ ಬಂದಿದ್ದ ಸೇನೆಯೊಂದರ ಯೋಧರಾಗಿ ಅದನ್ನು ನಾವು ಅರಿತುಕೊಂಡಷ್ಟು ಚೆನ್ನಾಗಿ ಬೇರಾರೂ ಅರ್ಥ ಮಾಡಿಕೊಳ್ಳಲಾರರು. ಬಾಡಿಗೆ ಸೈನ್ಯವೊಂದರ ಸೈನಿಕರಿಗೆ ಅವರ ಮಾಲಿಕರು ಮಾಡುವ ಅವಮಾನ ಯುದ್ಧದ ನೋವಿಗಿಂತ ಹೆಚ್ಚು ಯಾತನಾಮಯವಾದುದು. ನಾನಿಲ್ಲಿ ಭಾರತೀಯ ಇತರ ದರ್ಜೆಯವರು (ಇಂಡಿಯನ್ ಅದರ ರ್‍ಯಾಂಕ್ಸ್) ಹಾಗೂ ಸಾಮ್ರಾಜ್ಯಶಾಹಿಗಳು ತಮ್ಮ ಸೇನೆಯಲ್ಲಿ ಅವರಿಗೆ ಕೊಡುತ್ತಿದ್ದ ಹಿಂಸೆಗಳ ಬಗ್ಗೆ ಹೇಳುತ್ತಿಲ್ಲ. ಬ್ರಿಟೀಷ್ ಅಧಿಕಾರಿಗಳ ಜತೆ ಕಾನೂನಿನಲ್ಲಿ ಸಮಾನ ಸ್ಥಾನಮಾನ ಅನುಭವಿಸುತ್ತಿದ್ದ ಸಾವಿರಾರು ಜನರ ಬಗ್ಗೆ ನಾನಿಲ್ಲಿ ಮಾತನಾಡುತ್ತಿದ್ದೇನೆ. ನಾವು ಅಧಿಕಾರಿಗಳು. ಬ್ರಿಟೀಷ್ ಅದರ ರ್‍ಯಾಂಕ್‌ನವರು ಪರೇಡ್‌ನಲ್ಲಿಯೂ ಹೊರಗಡೆಯೂ ನಮಗೆ ಸೆಲ್ಯೂಟ್ ಮಾಡಿ ಮಾತನಾಡುವ ಸಂದರ್ಭದಲ್ಲೆಲ್ಲ 'ಸರ್' ಎಂದೇ ಸಂಭೋಧಿಸುತ್ತಿದ್ದರು. ಆದರೆ ಸಮಾನತೆಯ ಈ ಔಪಚಾರಿಕ ಪ್ರದರ್ಶನದ ಕೆಳಗೆ, ಅಧಿಕಾರಿಗಳಾಗಿ ನಮ್ಮದು ಕೇವಲ ಸೋಗಿನ ನಟನೆ ಎಂದು ಸತತವಾಗಿ ನಮ್ಮನ್ನು ನೆನಪಿಸುವಂಥ ಸಾಮ್ರಾಜ್ಯಶಾಹಿಯ ಹೇಯ ಮುಖ ಇದೆ ಎನ್ನುವುದನ್ನು ಮರೆಯಬಾರದು.

ಆದರೆ ಬ್ರಿಟೀಷ್ ಸಾಮ್ರಾಜ್ಯಶಾಹಿಗಳು ಒಂದು ತಪ್ಪು ಮಾಡಿದರು. ಅವರಿಗೆ ಅದು ಅನಿವಾರ್ಯವಾಗಿತ್ತು. ಯುದ್ಧ ಕಾರ್ಯಗಳಿಗೆ ಅಪಾರ ಪ್ರಮಾಣದ ಇಂಧನ ಬೇಕು. ಹೇರಳವಾಗಿದ್ದ, ಹಸಿವಿನಿಂದ ಬೆಂದ ಲಕ್ಷಾಂತರ ಭಾರತೀಯರು ಅದನ್ನು ಒದಗಿಸಿದರು. ಬೃಹತ್ ಸೇನೆಯನ್ನು ರಚಿಸಲಾಯಿತು. ಶಾಂತಿ ಕಾಲದಲ್ಲಿ ಕೇವಲ ಕೆಲವು ಲಕ್ಷದಷ್ಟಿದ್ದ ಭಾರತೀಯ ಸೈನಿಕರ ಸಂಖ್ಯೆ ಯುದ್ಧದ ವೇಳೆ ಸುಮಾರು 25 ಲಕ್ಷದಷ್ಟಾಯಿತು. ಸೇನೆಯಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸಲು ಸಾವಿರಾರು ವಿದ್ಯಾವಂತ ಯುವಜನರು ಬೇಕಾಯಿತು. ಬ್ರಿಟೀಷ್ ಅಧಿಕಾರಿಗಳ ಕೊರತೆಯಿತ್ತು.

(ಮುಂದುವರಿಯುವುದು)

ಕಾವೇರಿ : ಜಯಲಲಿತಾಗೆ ಛೀಮಾರಿ! ಪ್ರಧಾನಮಂತ್ರಿಗಳದ್ದು ಬೇಜವಾಬ್ದಾರಿ!!

ಕಾವೇರಿ ನದಿ ಪ್ರಾಧಿಕಾರದ ನಿರ್ದೇಶವನ್ನು ಪಾಲಿಸಬೇಕೆಂದು ಆದೇಶಿಸಿದ ಸುಪ್ರೀಂಕೋರ್ಟ್ ಸೂಚನೆಯಂತೆ ಕರ್ನಾಟಕವು ನವೆಂಬರ್ 6 ರವರೆಗೆ 9000 ಕ್ಯೂಸೆಕ್ಸ್, ನಂತರ 15 ರವರೆಗೆ 6000 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಕೃಷ್ಣ ಮತ್ತಿತರರ ಮೇಲಿನ ನ್ಯಾಯಾಂಗ ನಿಂದನೆಯ ವಿಚಾರಣೆಯನ್ನು ನವೆಂಬರ್ 15 ರಂದು ನಡೆಸಲು ನಿರ್ಧರಿಸಲಾಗಿತ್ತು. ಆದರೀಗ ನಿಂದನೆಯ ಪ್ರಕರಣವನ್ನು ನವೆಂಬರ್ 22 ಕ್ಕೆ ಮುಂದೂಡಿದೆ. ಮುಖ್ಯವಾಗಿ ಕಾವೇರಿ ನದಿ ಪ್ರಾಧಿಕಾರ ಮತ್ತು ಪ್ರಧಾನಿ ಬಗ್ಗೆ ಜಯಲಲಿತಾ ಬರೆದಿದ್ದ 'ವ್ಯಂಗೋಕ್ತಿ' ಪತ್ರವನ್ನು ತೀವ್ರವಾಗಿ ಟೀಕಿಸಿ ಅಸಮಾಧಾನ ವ್ಯಕ್ತಪಡಿಸಿ ಅದನ್ನು ನಾಲ್ಕುದಿನಗಳಲ್ಲಿ ಹಿಂತೆಗೆದುಕೊಳ್ಳುವಂತೆ ಪೀಠ ತಾಕೀತು ಮಾಡಿದೆ. ಕಾವೇರಿ ವಿವಾದದಲ್ಲಿ ಜಯಲಲಿತಾ ಭಾರತ ಗಣತಂತ್ರದ ಒಂದು ರಾಜ್ಯದ ಮುಖ್ಯಮಂತ್ರಿ ಎಂಬ ಜವಾಬ್ದಾರಿತನವನ್ನು ಮರೆತು ಜನತೆಯ ಸಂಬಂಧಗಳಿಗೆ, ರಾಜ್ಯಗಳ ಹಿತಾಸಕ್ತಿಗಳಿಗೆ ಧಕ್ಕೆಯಾಗುವಂತೆ ಸಂಯಮ ಕಳೆದುಕೊಂಡ ವರ್ತನೆಯನ್ನು ತೋರಿದ್ದರು.



ಇನ್ನೊಂದು ಮುಖ್ಯವಾದ ವಿಚಾರವೆಂದರೆ ಈ ಹದಿನೈದು ದಿನಗಳಲ್ಲಿ ಕಾವೇರಿ ನದಿ ಪ್ರಾದಿಕಾರದ ಸಭೆಯನ್ನು ಯಾಕೆ ಕರೆಯಲಿಲ್ಲ ಎಂದು ಕೇಂದ್ರ ಸರ್ಕಾರದ ವಕೀಲರನ್ನು ಪ್ರಶ್ನಿಸಿದೆ. ಸರಿಯಾದ ವಿವರಣೆ ನೀಡಲು ವಿಫಲರಾದ ಸಾಲಿಸಿಟರ್ ಜನರಲ್‌ಗೆ ಸಭೆ ದಿನಾಂಕ ಈಗಲಾದರೂ ಹೇಳಿ ಎಂದು ಕೋರ್ಟು ಕೇಳಿದೆ.

ಇಡೀ ವಿವಾದ ಭುಗಿಲೆದ್ದು ತೀವ್ರತರವಾದ ದ್ವೇಷಮಯ ವಾತಾವರಣ ನಿರ್ಮಾಣಗೊಂಡಾಗ, ಒಕ್ಕೂಟದ ಎರಡು ಪ್ರಮುಖ ರಾಜ್ಯಗಳು ಸಂಘರ್ಷಕ್ಕೆ ಇಳಿಯುತ್ತಿರುವಾಗ ಭಾರತದ ಪ್ರಧಾನಮಂತ್ರಿ ವಾಜಪೇಯಿಯವರು (ಅವರೇ ಅಧ್ಯಕ್ಷರು) ಕೂಡಲೇ ಮಧ್ಯಪ್ರವೇಶಿಸಿ, ಸಂಘರ್ಷ ತಪ್ಪಿಸಿ, ಒಮ್ಮತದ ಸೂಕ್ತ ಸೂತ್ರ ರೂಪಿಸಲು ಪೂರ್ಣವಾಗಿ ವಿಫಲರಾಗಿದ್ದಾರೆ. ಅಲ್ಲದೇ ಸಂವಿಧಾನಾತ್ಮಕ ಸಂಸ್ಥೆಗಳೊಂದಿಗೆ ಸಂಘರ್ಷ ಏರ್ಪಡುತ್ತಿರುವುದಕ್ಕೆ ಪ್ರಜ್ಞಾಪೂರ್ವಕವಾಗಿ ಬಿಟ್ಟಿದ್ದಾರೆ. ಇದರಲ್ಲಿ ರಾಜಕೀಯ ದುರ್ಲಾಭ ಹೊಡೆಯಲು ಮುಂದಾಗಿದ್ದಾರೆ. ಇಷ್ಟೆಲ್ಲಾ ರಾದ್ಧಾಂತವಾದರೂ ಈಗಲೂ ಸಭೆ ಕರೆಯದೆ ಇರುವುದು ಸರಿಯಲ್ಲ. ಕೊನೆಗೆ ಸುಪ್ರೀಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡು ಸಭೆ ಸೇರಿಸುವಂತಹ ಸ್ಥಿತಿ ಒದಗಿಸಿದರೆ ಈ ಮುತ್ಸದ್ದಿ ಪ್ರಧಾನಿಯಾಗಿರುವುದಕ್ಕೆ ಏನು ಅರ್ಥ? ಈಗಲಾದರೂ ಪ್ರಧಾನಿ ಮುಂದಾಗಬೇಕು.

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಬಾಬಾಬುಡನ್ ಗಿರಿಗೆ ಬೆನ್ನು ಬಿದ್ದವರು

ಕೋಮುಸಾಮರಸ್ಯದ ಜನ ಸಂಸ್ಕೃತಿ-ಪರಂಪರೆಯನ್ನು ಧ್ವಂಸಗೊಳಿಸಲು ಟೊಂಕಕಟ್ಟಿ ನಿಂತಿರುವ ಭಜರಂಗದಳ, ವಿಶ್ವಹಿಂದೂ ಪರಿಷತ್, ಬಾಬಾಬುಡನ್ ಗಿರಿಯಲ್ಲಿ ಇಲ್ಲ-ಸಲ್ಲದ ಹಲವಾರು ಕಾರ್ಯಕ್ರಮ ಗಳನ್ನು ರೂಪಿಸಿ ಕಾರ್ಯಾಚರಣೆಗೆ ಇಳಿಯುತ್ತಿದೆ. ಕಳೆದೆರೆಡು ವಾರದ ಹಿಂದೆ 'ದತ್ತಮಾಲೆ'ಯ ಹೆಸರಲ್ಲಿ ಪ್ರಶಾಂತ ಗಿರಿಸಾಲಿಗೆ ಈ ಪಡೆಗಳು ಲಗ್ಗೆ ಹಾಕಿದ್ದವು. ರಾಜ್ಯದ ವಿವಿಧ ಜಿಲ್ಲೆಗಳಿಂದ ಈ ಭಕ್ತರನ್ನು ಅಣಿನೆರೆಸಿದ್ದರು. ಅಯ್ಯಪ್ಪ ಸ್ವಾಮಿಯ ಮಾದರಿಯಲ್ಲಿ ಮಾಲೆ ಹಾಕಿ ಇರುಮುಡಿ ಗಂಟು ಹೊತ್ತು ಒಂದೆರೆಡು ಕಿ.ಮಿ. ಕಾಲುನಡಿಗೆಯಲ್ಲಿ ಸಾಗಿ, ಬಾಬಾಬುಡನ್ ಸ್ವಾಮಿ ದತ್ತ ಪೀಠದ ಗುಹೆಗೆ ಹೋಗಿ ಬಂದಿದ್ದು ಮೊಟ್ಟಮೊದಲ ಬಾರಿಯಾಗಿದೆ. ಹಿಂದೆ ಇಲ್ಲಿ ಇಂತಹ ಆಚರಣೆಯೇ ಇಲ್ಲಿರಲಿಲ್ಲ, ಈ ಮೂಲಕ ಹಿಂದೂ-ಮುಸ್ಲಿಂರು ಸೇರಿ ಪೂಜೆ ಸಲ್ಲಿಸುತ್ತಿದ್ದ ಆ ದರ್ಗಾಪೀಠವನ್ನು ಪೂರ್ಣವಾಗಿ 'ಖಾವೀಮಯ'ಗೊಳಿಸಿ ಬಲವಂತದ ಅಧಿಕಾರದ ಸ್ಥಾಪನೆ ಮಾಡುವುದು ಅವರ ತಂತ್ರ.

ಸರ್ಕಾರದ ಆಡಳಿತ ಯಂತ್ರವು ಬಜರಂಗ ದಳದ ಪುಂಡಾಟಿಕೆ ಗ್ರಹಿಸಿ ಬಿಗಿ ಬಂದೋಬಸ್ತು ಮಾಡಿದ್ದೇನೋ ನಿಜ. ಆದರೆ ಈ ಚೆಡ್ಡಿ ಪಡೆಗಳ ಕಾರ್ಯಕ್ರಮವನ್ನು ಸರ್ಕಾರದ ಅಧಿಕಾರಿಗಳ ಮೂಲಕ ಜಾರಿ ಮಾಡಿಸಿದ್ದು, ಮುಂದಿನ ದಿನಗಳಲ್ಲಿ ಅಪಾಯಕಾರಿ ಬೆಳವಣಿಗೆಗೆ ಕಾರಣವಾಗಬಲ್ಲದು. ಕಾಂಗ್ರೆಸ್ ಸರ್ಕಾರದ ಗೃಹಸಚಿವರಿಗೆ ವಿವರಿಸಿದರೆ ಕಿಂಚಿತ್ತೂ ಕ್ರಮವಹಿಸಿ ತಡೆಯುತ್ತಿಲ್ಲ. ಚೆಡ್ಡಿ ಪಡೆಗಳ ಕೃತ್ಯಗಳಿಂದ ಕೋಮುವಿಭಜನೆ ಬಂದರೆ ಲಾಭ ಸಿಕ್ಕೀತೆ ಎಂದು ಆಡಳಿತ ಪಕ್ಷ ಕಾಯುತ್ತಿದೆ. ಬಾಬ್ರಿ ಮಸೀದಿಯ ಧ್ವಂಸವನ್ನು ನೋಡುತ್ತಲೇ ಬಿಟ್ಟ ಇದೇ ಕಾಂಗ್ರೆಸ್ ಬಾಬಾ ಬುಡನ್‌ಗಿರಿಯನ್ನು ಅಂತಹ ಕಣವಾಗಿ ಪರಿವರ್ತನೆಯಾಗುವ ಸೂಚನೆಯಿದ್ದೂ ಸರ್ಕಾರಿ ಸೇವೆ ಸಲ್ಲಿಸುವ ಕಾಂಗ್ರೆಸ್ ಭಾರತ ಕಮ್ಯುನಿಸ್ಟ್ ಪಕ್ಷದೊಂದಿಗೆ ಚಿಕ್ಕಮಗಳೂರಿನಲ್ಲಿ ಸೇರಿ 'ಭಯೋತ್ಪಾದನೆ ಅಳಿಸಲು, ಕೋಮುಸೌಹಾರ್ದತೆ ಉಳಿಸಲು' ಜಂಟಿ ಸಮಾವೇಶ ನಡೆಸಿದ್ದು ಒಂದು ವಿಚಿತ್ರವೇ ಸರಿ. 'ನೆಂಟರ ಮೇಲೆ ಇಷ್ಟ, ಅಕ್ಕಿಯ ಮೇಲೆ ಆಸೆ'. ಹೇಗಿದೆ ಕಾಂಗ್ರೆಸ್ ಧರ್ಮನಿರಪೇಕ್ಷತೆ?

ಈ ದತ್ತ ಮಾಲೆಯಲ್ಲಿ ಪಾಲ್ಗೊಂಡ ಕೆಲ ಖಾವಿಪಡೆಯ ಪುಂಡರು ಅಂದು ಖ್ಯಾತ ಸಿನಿಮಾ ನಟ ಶಿವರಾಜಕುಮಾರ್‌ರವರ ಮೇಲೆ ಕಲ್ಲಿನ ಧಾಳಿ ನಡೆಸಿದ್ದು ವರದಿಯಾಗಿದೆ. ಖಾವಿ ಧರಿಸಿದ್ದ ಈ ಸದ್ಭಕ್ತರು, ಕಂಠಪೂರ್ತಿ ಕುಡಿದು ಈ ಆಕ್ರಮಣ ನಡೆಸಿದ್ದನ್ನು ಸ್ವತಃ ಶಿವರಾಜಕುಮಾರ್, ಇತರರು ಹೇಳಿದ್ದಾರೆ. ಖಾವಿಪಡೆಗಳ ನಿಜ ಭಕ್ತಿ(ಅಜೆಂಡಾ) ಕಂಠಮಟ್ಟ ಕುಡಿದಾಗ ಹೇಗೆ ಓಲಾಡುತ್ತದೆ ಎಂಬುದು, ಅವರ ನೈತಿಕ ಅಧಃಪತನ, ಕಪಟ ಭಕ್ತಿ ಬಯಲಾದ ಒಂದು ಖಂಡನೀಯ ಪ್ರಸಂಗವಾಗಿದೆ.

ಇಂತಹ ದಾಂಧಲೆಕೋರರು ಡಿಸೆಂಬರ್ 18-21 ರವರೆಗಿನ ದತ್ತಜಯಂತಿ ಕಾರ್ಯಕ್ರಮಕ್ಕೆ ಸಜ್ಜಾಗುತ್ತಿರುವುದು ಮುಂದೆ ಎಂತಹ ಸ್ಥಿತಿ ನಿರ್ಮಾಣ ಆಗಬಹುದು ಎಂಬ ಆತಂಕ ಹುಟ್ಟುಹಾಕಿದೆ. ಈ ಶಕ್ತಿಗಳ ಆಟಗಳನ್ನು ಜನತೆ ಅರಿಯಬೇಕು.

ಬಿಡುಗಡೆಯಾಗದ ನಾಗಪ್ಪ ಲಾಭ ಹೊಡೆಯಲು ತುದಿಗಾಲಲ್ಲಿ ಬಿಜೆಪಿ

ಅಪಹರಣವಾಗಿ 80 ದಿನಗಳು ದಾಟಿದವು. ಆದರೆ ಮಾಜಿ ಸಚಿವ ನಾಗಪ್ಪನವರ ಸುಳಿವಿಲ್ಲ. ವೀರಪ್ಪನ್‌ನಿಂದ ಬಿಡುಗಡೆಯಾಗಿ ಕಾಡಿನಿಂದ ನಾಡಿಗೆ ಬರುವುದು ಕಗ್ಗಂಟಿನ ಪ್ರಶ್ನೆಯಾಗಿಯೇ ಉಳಿದಿದೆ. ನರಹಂತಕ ಈಗಾಗಲೇ ನಾಲ್ಕು ಕ್ಯಾಸೆಟ್‌ಗಳ ಮೂಲಕ ತನ್ನ ಬೇಡಿಕಗಳ ಪಟ್ಟಿಯನ್ನು ಕಳಿಸಿದ್ದಾನೆ. ಬೇಕಾದ 'ಉತ್ತರ'ವಿಲ್ಲದೇ ವ್ಯಗ್ರನಾಗಿದ್ದಾನಂತೆ.

ಇತ್ತ ಕೃಷ್ಣರವರು ನಾಗಪ್ಪನವರನ್ನು ಬಿಡಿಸುವ ದಿಸೆಯಲ್ಲಿ ನಿಖರವಾದ ಯಾವ ಮಾರ್ಗವನ್ನೂ ಆಯ್ಕೆ ಮಾಡದೇ ನೆನೆಗುದಿಗೆ ಬಿಟ್ಟಿದ್ದಾರೆ. ಅತ್ತ ಸಂಧಾನದ ಮಾರ್ಗವನ್ನು ಅನುಸರಿಸದೇ ಅಥವಾ ಸಶಸ್ತ್ರ ಪಡೆಗಳ ಕಾರ್ಯಾಚರಣೆಗೂ ಇಳಿಯದೆ

ಪುಟ 5 ಕ್ಕೆ



ಅರ್ಥಹೀನ ಪ್ರತ್ಯೇಕ ರಾಜ್ಯದ ಕೂಗು

ನವೆಂಬರ್ 1 ರಂದು ಕಲಬುರ್ಗಿಯಲ್ಲಿ ಹೈ.ಕ. ಹೋರಾಟ ಸಮಿತಿಯು ಹೈದಾರಾಬಾದ್-ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂದು ಬೇಡಿಕೆ ಮಂಡಿಸಿದ್ದಲ್ಲದೇ ಸ್ವತಂತ್ರವಾದ ಬಾವುಟವನ್ನು ಹಾರಿಸಿದ್ದು ಆತಂಕಕಾರಿ ಬೆಳವಣಿಗೆ. ಒಂದು ವರ್ಷದ ಗಡುವನ್ನು ಸರ್ಕಾರಕ್ಕೆ ನೀಡಿರುವುದಾಗಿ ಸಮಿತಿಯ ಅಧ್ಯಕ್ಷ ಮಾಜಿ ಸಚಿವ ವಿಶ್ವನಾಥ ರೆಡ್ಡಿ ಮುದ್ನಾಳ್ ಹೇಳಿದ್ದಾರೆ. ಯಾವ ಸರ್ಕಾರಕ್ಕೆ ಎಂಬುದು ಗೊತ್ತಾಗಿಲ್ಲ!

ಈ ಪ್ರದೇಶ ಅಭಿವೃದ್ಧಿ ಆಗಿಲ್ಲ, ತಾರತಮ್ಯ ಅನುಸರಿಸಲಾಗುತ್ತಿದೆ ಎಂಬುದು ಮುಖ್ಯ ವಾದ. ನಿಜ, ಈ ಪ್ರದೇಶ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದಿದೆ. ಪ್ರಾದೇಶಿಕ ಅಸಮತೋಲನವು ವಾಸ್ತವವೇ. ಈ ಪ್ರದೇಶ ಅಭಿವೃದ್ಧಿ ಆಗಲೇಬೇಕು ಎಂಬಲ್ಲಿ ಎರಡು ಮಾತಿಲ್ಲ. ಆದರೆ ಇಂತಹ ಅಭಿವೃದ್ಧಿ ಸಾಧಿತವಾಗುವುದು ಪ್ರತ್ಯೇಕ ರಾಜ್ಯ ರಚನೆಯಿಂದಲೇ? ಎಂಬ ಪ್ರಶ್ನೆ. ಹೀಗೆ ಅಸಮತೋಲನ, ಅನಭಿವೃದ್ಧಿಯಿಂದ ನರಳುತ್ತಿರುವ ಹಲವಾರು ಪ್ರದೇಶಗಳು ಕರ್ನಾಟಕದಲ್ಲಿ ಬೇಕಾದಷ್ಟಿವೆ. ದೇಶದಲ್ಲಿಯೂ ಅಗಣಿತ. ಇದಕ್ಕೆ ಕಾರಣ ದೇಶ ಸ್ವಾತಂತ್ರ್ಯ ಹೊಂದಿದ ನಂತರ ಅನುಸರಿಸುತ್ತಾ ಬರಲಾಗುತ್ತಿರುವ ಭೂಮಾಲೀಕ, ಬಂಡವಾಳಶಾಹಿ ಬೆಳವಣಿಗೆಯ ಪಥದಿಂದ. ಅದೂ ಉದಾರೀಕರಣ-ಜಾಗತೀಕರಣದ ಈ ದಿನಗಳಲ್ಲಿ ಇಂತಹ ಅನಭಿವೃದ್ಧಿ ಉಲ್ಬಣಗೊಳ್ಳಲಿದೆ. ಇಂತಹ ಪಥವನ್ನು ಬದಲಿಸದೇ, ಪರ್ಯಾಯವಾಗಿ ಜನಪರ ಆರ್ಥಿಕ-ರಾಜಕೀಯ ಕ್ರಮವಹಿಸದೇ (ಸಮಗ್ರ ಭೂ ಸುಧಾರಣೆ ಇತ್ಯಾದಿ) ಅಭಿವೃದ್ಧಿ ಅಸಾಧ್ಯ. ಆದರೆ ಅಭಿವೃದ್ಧಿಗಾಗಿ ಹೋರಾಡುತ್ತಿರುವ ನಾಯಕರಿಗೆ ಈ ಮೂಲಭೂತ ಬದಲಾವಣೆ ಬೇಕಿಲ್ಲ. ಅದರತ್ತ ಇಣುಕಲು ಮಾಜಿ ಸಚಿವ ವೈಜನಾಥ ಪಾಟೀಲ್ ಆದಿಯಾಗಿ ಯಾರೂ ಸಿದ್ಧವಿಲ್ಲ. ಅಭಿವೃದ್ಧಿಗಾಗಿ ಪ್ರತ್ಯೇಕತೆಯ ಒಂದು ಘೋಷಣೆ ಸಾಕು ಎಂದರೆ ಇಂದಿನ ಅಧಃಪತನದ ಸ್ಥಿತಿಯೇ ಮುಂದುವರಿಯಬೇಕು. ಆದರೆ ಈ ಪ್ರದೇಶದ ಯಜಮಾನಿಕೆ ತಮ್ಮಲ್ಲಿರಬೇಕು ಎಂಬುದಷ್ಟೇ ಆಗುತ್ತದೆ. ಮೇಲಾಗಿ ಮುದ್ನಾಳ್, ವೈಜನಾಥ ಪಾಟೀಲ, ವೀರೇಂದ್ರ ಪಾಟೀಲ್‌ರಂಥವರು ಅಧಿಕಾರದಲ್ಲಿದ್ದಾಗ ಈ ಪ್ರಶ್ನೆಯತ್ತ ಕಿಂಚಿತ್ತೂ ತಲೆ ಕೆಡಿಸಿಕೊಂಡವರೇನಲ್ಲ. ಆದ್ದರಿಂದ ಹೈದ್ರಾಬಾದ್-ಕರ್ನಾಟಕ ಅಥವಾ ಉತ್ತರ ಕರ್ನಾಟಕ, ಕೊಡಗು ಗಳಂತಹ ಕಡೆ ಆಳುವ ವರ್ಗದ ನೀತಿಗಳಿಗೆದುರಾಗಿ ಹುಟ್ಟುವ ಜನರ ಅತೃಪ್ತಿ ಅಥವಾ ಪ್ರಜಾಸತ್ತಾತ್ಮಕ ಎಚ್ಚರವನ್ನು ಹಾದಿ ತಪ್ಪಿಸುವುದಷ್ಟೇ ಇದರಿಂದ ಸಾಧ್ಯವಾದೀತು. ಕರ್ನಾಟಕ ಹಾಗೇ ಭಾರತದ ಸಮಗ್ರ ಅಭಿವೃದ್ಧಿಯಲ್ಲಿಯೇ ಪ್ರಾದೇಶಿಕ ಅಭಿವೃದ್ಧಿಯೂ ಅಡಗಿದೆ. ಅವರ ಸಾಧನೆಗೆ ಹೋರಾಡುತ್ತಲೇ ಆ ದಿಕ್ಕಿನಲ್ಲಿ ಇಡಿ ನಾಡಿನ ಎಲ್ಲಾ ಜನರನ್ನು ಬೆಸೆದು ಅದರ ಭಾಗವಾಗಿ ದುಡಿವ ವರ್ಗದ ಹೋರಾಟವಾಗಿ ಚಿಮ್ಮಬೇಕು. ಈ ಪ್ರತ್ಯೇಕತೆಯ ಮಾತು ಬಹಳ ರಂಜನೀಯವಾಗಿ ಕೆಲವರಿಗೆ ಕಾಣುತ್ತಿದೆ. ಉದಯವಾಗಲಿ ಚೆಲುವ ಕನ್ನಡ ನಾಡು ಎಂದು ಏಕೀಕರಣಕ್ಕಾಗಿ ಸೆಣಸಿದ ತ್ಯಾಗದ ಹೋರಾಟ ನೆನಪಿಸಿ, ಭಾಷಾವಾರು ಪ್ರಾಂತ್ಯದ ಗಟ್ಟಿನವನ್ನು ಉಳಿಸಿ ಬೆಳೆಸುವ ದಿನದಂದೇ ಇಂತಹ ಅಪಸ್ವರ ಅಪಾಯಕಾರಿ. ಮೇಲಾಗಿ ರಾಜ್ಯಗಳನ್ನು ಒಡೆಯಲು ಬಿಜೆಪಿ ಸರ್ಕಾರ ಕಾತುರವಾಗಿರುವಾಗ. ಆದ್ದರಿಂದ ಕನ್ನಡ ನಾಡನ್ನು, ಜನರ ಒಗ್ಗಟ್ಟು ಒಡೆಯುವ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕು.

ಜನಪರ ಅಭಿವೃದ್ಧಿ, ಉದ್ಯೋಗ, ಕೋಮುಸೌಹಾರ್ದತೆಗಾಗಿ

ಡಿ.ವೈ.ಎಫ್.ಐ 7ನೇ ರಾಜ್ಯ ಸಮ್ಮೇಳನ

ಭರದ ಸಿದ್ಧತೆ


ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ)ನ 7ನೇ ರಾಜ್ಯ ಸಮ್ಮೇಳನವು 'ಭತ್ತದ ಕಣಜ'ವೆಂದೇ ಖ್ಯಾತಿ ಪಡೆದ ರಾಯಚೂರು ನಗರದಲ್ಲಿ ನಡೆಯಲಿದೆ.

"ಜನಪರ ಅಭಿವೃದ್ಧಿ, ಉದ್ಯೋಗ, ಕೋಮು ಸೌಹಾರ್ದತೆಗಾಗಿ" ಎಂಬ ಘೋಷಣೆಯೊಂದಿಗೆ ನವೆಂಬರ್ 25 ರಿಂದ 27, 2002 ರವರೆಗೆ ನಡೆಯುವ ಈ ಸಮ್ಮೇಳನದಲ್ಲಿ ದೇಶದ, ನಾಡಿನ ಹೆಸರಾಂತ ಮುಖಂಡರುಗಳು ಪಾಲ್ಗೊಳ್ಳಲಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಆಯ್ಕೆಯಾದ 400 ಪ್ರತಿನಿಧಿಗಳು ಒಟ್ಟು ಕಲಾಪಗಳಲ್ಲಿ ಭಾಗವಹಿಸುವರು.

ನವೆಂಬರ್ 25ರ ಮಧ್ಯಾಹ್ನ 1 ಗಂಟೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸುವ ಸಹಸ್ರಾರು ಯುವಜನರು ರಾಯಚೂರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಿದ್ದು, ಅಂದು ಮಧ್ಯಾಹ್ನ 4 ಗಂಟೆಗೆ ಮಹಿಳಾ ಸಮಾಜ ಮೈದಾನದಲ್ಲಿ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ಮುಖ್ಯ ಭಾಷಣಕಾರರಾಗಿ ಡಿ.ವೈ.ಎಫ್.ಐನ ಮಾಜಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳು ಹಾಗೂ ಪ್ರಸ್ತುತ ಪ.ಬಂಗಾಳ ಎಡರಂಗ ಸರ್ಕಾರದ ಯುವಜನ ಮತ್ತು ಕ್ರೀಡಾ ಸಚಿವರಾದ, ಮಹಮ್ಮದ್ ಸಲೀಂ, ಡಿವೈಎಫ್ಐ ಕೇಂದ್ರ ಸಮಿತಿ ಮುಖಂಡರಾದ ಬಾಲಗೋಪಾಲ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್, ಡಿ.ವೈ.ಎಫ್.ಐ ರಾಜ್ಯ ಅಧ್ಯಕ್ಷರಾದ ಶಾಂತಾರಾಂ ನಾಯಕ್ ಬಹಿರಂಗಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸ್ವಾಗತ ಸಮಿತಿಯ ಗೌರವಾಧ್ಯಕ್ಷರು ಮಾಜಿ ಶಾಸಕರಾದ ಶ್ರೀ ಎಂ. ನಾಗಪ್ಪ ವಹಿಸುವರು.

ನವಂಬರ್-26 ರ ಬೆಳಿಗ್ಗೆ ಪ್ರತಿನಿಧಿ ಅಧಿವೇಶನದ ಉದ್ಘಾಟನೆಯನ್ನು ರಾಜ್ಯ

ನವೆಂಬರ್ 25 ರಿಂದ 27ರವರೆಗೆ ರಾಯಚೂರಿನಲ್ಲಿ 25 ರಂದು ಬೃಹತ್ ಯುವಜನರ ರ್‍ಯಾಲಿ



ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಹೆಚ್.ಜಿ. ಬಾಲಕೃಷ್ಣರವರು ಉದ್ಘಾಟಿಸುವರು. 27ರ ಸಂಜೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಡಿವೈಎಫ್ಐನ ಅಖಿಲ ಭಾರತ ಅಧ್ಯಕ್ಷರೂ ಹಾಗೂ ಲೋಕಸಭಾ ಸದಸ್ಯರೂ ಆದ ಎನ್.ಎನ್. ಕೃಷ್ಣದಾಸ್, ಪ್ರ. ಕಾರ್ಯದರ್ಶಿ ತಪಸ್‌ಸಿನ್ಹಾ ಭಾಗವಹಿಸಲಿದ್ದಾರೆ.

ಮೂರು ದಿನಗಳ ಕಾಲ ನಡೆಯುವ ಯುವಜನರ ಸಮ್ಮೇಳನವು ಮುಖ್ಯವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಸಾಂಸ್ಕೃತಿಕ ಅದಃಪತನ, ಪ್ರಾದೇಶಿಕ ಅಸಮಾನತೆ, ಜಾತಿ ಹಾಗೂ ಕೋಮುವಾದದ ಪ್ರಶ್ನೆಗಳು, ಯುವಜನರಲ್ಲಿ ಹೆಚ್ಚುತ್ತಿರುವ ಅಪರಾಧೀಕರಣ, ಶಿಕ್ಷಣದ ಪ್ರಶ್ನೆಗಳು, ಅಭಿವೃದ್ಧಿ ಹಾಗೂ ಉದ್ಯೋಗಾವಕಾಶಗಳ ಸೃಷ್ಠಿ, ದಲಿತರ ಪ್ರಶ್ನೆ, ಮಹಿಳಾ ಸಮಸ್ಯೆ, ಜೊತೆಯಲ್ಲಿ ಜಾಗತೀಕರಣದ ದುಷ್ಪರಿಣಾಮಗಳು, ಕೃಷಿ, ಕೈಗಾರಿಕಾಬಿಕ್ಕಟ್ಟು, ಸೇರಿದಂತೆ ಹಲವು ಪ್ರಶ್ನೆಗಳ ಬಗ್ಗೆ ಗಂಬೀರ ಚಿಂತನೆ, ಚರ್ಚೆ ನಡೆಸಿ, ಮುಂದಿನ ಮೂರು ವರ್ಷಗಳಿಗೆ ವಿವಿಧ ಹಂತದ ಯುವಜನಾಂದೋಲನದ ಕಾರ್ಯಕ್ರಮಗಳನ್ನು ರೂಪಿಸಲಿದೆ.

"ಏಕತೆಯೆಡೆಗೆ ಯುವಜನರ ನಡಿಗೆ" ಮಂಗಳೂರಿನಿಂದ ರಾಯಚೂರಿಗೆ ಯುವಜನರ ಜಾಥಾ.

ಹೆಚ್ಚುತ್ತಿರುವ ಅಪರಾಧೀಕರಣ ಮತ್ತು ಕೋಮುವಾದಿ ಸವಾಲುಗಳ ಬಗ್ಗೆ ಜನಜಾಗೃತಿ ಮೂಡಿಸಲು ಹಾಗೂ ಶಾಂತಿ, ಸಹಬಾಳ್ವೆ ನೆಮ್ಮದಿಯ ಬದುಕಿನ ಸಾಮರಸ್ಯದ ಸಂದೇಶದೊಂದಿಗೆ ನವೆಂಬರ್ 20 ರಿಂದ 25ರವರೆಗೆ ಮಂಗಳೂರಿನಿಂದ ರಾಯಚೂರಿಗೆ 'ಏಕತೆಯೆಡೆಗೆ ಯುವಜನರ ನಡಿಗೆ" ಎಂಬ ಯುವಜನರ ಜಾಥಾವನ್ನು ಡಿವೈಎಫ್ಐ ರಾಜ್ಯ ಸಮಿತಿಯು ಸಂಘಟಿಸಿದೆ.

ಇತ್ತೀಚೆಗೆ ಕೋಮುವಾದಿ ಶಕ್ತಿಗಳಿಂದ ಹತ್ಯೆಯಾದ ಶ್ರೀನಿವಾಸ್ ಬಜಾಲ್ ನೆನಪಿನಲ್ಲಿ ನಡೆಸಲಾಗುತ್ತಿರುವ ಈ ಜಾಥಾವು ನವೆಂಬರ್ 20ರ ಸಂಜೆ ಮಂಗಳೂರಿನ ಬಜಾಲ್ ನಿಂದ ಉದ್ಘಾಟನೆಗೊಂಡು ಉಡುಪಿ, ಉತ್ತರ ಕನ್ನಡ, ಹಾವೇರಿ, ಧಾರವಾಡ, ಗದಗ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ, ಹಾಡು ಬೀದಿ ನಾಟಕ, ಪುಸ್ತಕ ಪ್ರದರ್ಶನ, ಮಾರಾಟ, ಕರಪತ್ರ ಹಂಚಿಕೆ, ಬೀದಿ ನಾಟಗಳ ಮೂಲಕ ಸಂಚರಿಸಿ ಕೋಮುವಾದದ ಅಪಾಯಗಳ ಬಗ್ಗೆ ಯುವಜನರಲ್ಲಿ ಜಾಗೃತಿ ಮೂಡಿಸಲಿದೆ.

"ಅಭಿವೃದ್ಧಿಯೆಡೆಗೆ ಯುವಜನರ ನಡಿಗೆ" ಕೋಲಾರದಿಂದ ರಾಯಚೂರಿಗೆ ಯುವಜನರ ಜಾಥಾ.

ಜಾಗತೀಕರಣ - ಉದಾರೀಕರಣ ನೀತಿಗಳು ನಮ್ಮ ದೇಶದ ಕೃಷಿ, ಕೈಗಾರಿಕಾ ಕ್ಷೇತ್ರದಲ್ಲಿ ತೀವ್ರತೆರನಾದ ಬಿಕ್ಕಟ್ಟನ್ನು ಉಂಟುಮಾಡಿದೆ. ಇದರಿಂದ ನಿರುದ್ಯೋಗ ತೀವ್ರಗೊಂಡಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಪರ ಮತ್ತು ಯುವಜನರಿಗೆ ಉದ್ಯೋಗಗಳನ್ನು ಸೃಷ್ಟಿಸುವಂತಹ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿ ನವೆಂಬರ್ 20 ರಿಂದ 25ರ ವರೆಗೆ ಕೋಲಾರದಿಂದ ರಾಯಚೂರಿನವರೆಗೆ "ಅಭಿವೃದ್ಧಿಯೆಡೆಗೆ ಯುವಜನರ ನಡಿಗೆ' ಎಂಬ ಯುವಜನರ ಜಾಥಾವನ್ನು ಸಂಘಟಿಸಲಾಗುತ್ತಿದೆ.

ರಾಜ್ಯದ ಕೃಷಿ-ಕೈಗಾರಿಕಾ ಅಭಿವೃದ್ಧಿಗೆ ಮಹಾನ್ ಕೊಡುಗೆ ನೀಡಿದ ಡಾ। ಸರ್.ಎಂ. ವಿಶ್ವೇಶ್ವರಯ್ಯನವರ ನೆನಪಿನಲ್ಲಿ ನಡೆಸಲಿರುವ ಈ ಜಾಥಾ ನವೆಂಬರ್ 20ರ ಬೆಳಿಗ್ಗೆ ಕೋಲಾರದಿಂದ ಉದ್ಘಾಟನೆಗೊಂಡು ಬೆಂಗಳೂರು, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ರಾಯಚೂರು, ಜಿಲ್ಲೆಗಳಲ್ಲಿ ಸಂಚರಿಸಿ ಬೀದಿ ಸಭೆಗಳು, ಪುಸ್ತಕ ಪ್ರದರ್ಶನ ಮಾರಾಟ ಹಾಗೂ ಹಾಡು ಇತ್ಯಾದಿ ಕಾರ್ಯಕ್ರಮಗಳನ್ನು ಮತ್ತು ಬಹಿರಂಗ ಸಭೆಗಳನ್ನು ನಡೆಸಿ ಜನಜಾಗೃತಿ ಮೂಡಿಸಲಿದೆ. ಈ ಎರಡೂ ಯುವಜನ ಜಾಥಾಗಳು ನವೆಂಬರ್ 25ರ ಮಧ್ಯಾಹ್ನ ರಾಯಚೂರಿನಲ್ಲಿ ನಡೆಯುವ ಯುವಜನ ರ್‍ಯಾಲಿಯಲ್ಲಿ ಸಮಾರೋಪಗೊಳ್ಳಲಿವೆ.

ಜನತೆಯತ್ತ ಯುವಜನರ ಟ್ರಾಕ್ಟರ್ ಜಾಥಾ

ಡಿವೈಎಫ್ಐ ನ 7ನೇ ರಾಜ್ಯ ಸಮ್ಮೇಳನ ನಡೆಯುತ್ತಿದೆ. ಇದರ ಭಾಗವಾಗಿ ರಾಯಚೂರಿನಲ್ಲಿ ನಡೆಯುತ್ತಿರುವ ಈ ಯುವ ಸಮ್ಮೇಳನದ ಆಶಯಗಳನ್ನು ಜಿಲ್ಲೆಯ ಜನತೆಗೆ ಮುಟ್ಟಿಸುವ ಸಲುವಾಗಿ ರಾಯಚೂರು ಡಿ.ವೈ.ಎಫ್.ಐನ ಜಿಲ್ಲಾ ಸಮಿತಿ ಅಕ್ಟೋಬರ್ 28ರಿಂದ ನವೆಂಬರ್ 2 ರವರೆಗೆ ರಾಯಚೂರು ಕೊಪ್ಪಳ ಜಿಲ್ಲೆಗಳಲ್ಲಿ ಟ್ರಾಕ್ಟರ್ ಜಾಥಾ ನಡೆಸಿತು.

21 ಕಾರ್ಯಕರ್ತರಿದ್ದ ಆರು ದಿನಗಳವರೆಗೆ ನಡೆದ ಜಾಥಾವನ್ನು ರಾಯಚೂರಿನ ಗಂಜ್ ವೃತ್ತದಲ್ಲಿ ಸಮ್ಮೇಳನದ ಸ್ವಾಗತ ಸಮಿತಿ ಕಾಯ'ರ್ಧ'ಕ್ಷ'ರಾದ' ಕೆ.ಸತ್ಯನಾರಾಯಣರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರ್ಯದರ್ಶಿ ವಿಠ್ಠಲ ಭಂಡಾರಿ, ಶರಣಬಸವ, ಬಿ.ಲಿಂಗಪ್ಪ, ಕರಿಯಪ್ಪ ಅಚ್ಕೊಳ್ಳಿ. ಜೆ.ಸುರೇಶ್, ವೀರಭದ್ರ, ಶ್ಯಾಮಸುಂದರ, ಹೆಚ್ ಶರ್ಫುದ್ದೀನ್ ಪೊತ್ನಾಳ, ಸಿ.ಎಸ್.ನಾಡಗೌಡ, ಮಲ್ಲಿಕಾರ್ಜುನ ಹರವಿ ಮುಂತಾದವರು ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ವೈ.ಈರಣ್ಣ ವಹಿಸಿದ್ದರು.

ರಾಯಚೂರಿನಿಂದ ಪ್ರಾರಂಭಗೊಂಡ ಜಾಥಾ ಶಕ್ತಿನಗರದಲ್ಲಿ ಮುಕ್ತಾಯಗೊಂಡಿತ್ತು. ಅಧ್ಯಕ್ಷತೆ ಹೆಚ್.ಶರ್ಫುದ್ದೀನ್ ಪೋತ್ನಾಳ ಮುಖ್ಯ ಅತಿಥಿಗಳಾಗಿ ಎಲ್.ಐ.ಸಿ ನೌಕರರ ಸಂಘದ ಚನ್ನಬಸಯ್ಯ ಸಿ.ಎಸ್.ನಾಡಗೌಡ ಭಾಗವಹಿಸಿದರು.

ಜಾಥಾದಲ್ಲಿ ಭಾಗವಹಿಸಿದವರು ನಡುವೆ ಗೋಡೆಬರಹ , ಪೋಸ್ಟರ್ ಅಂಟಿಸುವ, ಕೂಪನ ಮಾರಾಟ ಮಾಡುವ ತಂಡ, ಮತ್ತು ಹಾಡುವ ತಂಡಗಳನ್ನು ರಚಿಸಿತ್ತು.

ಬಹಿರಂಗ ಸಭೆಗಳು

ಎಲ್ಲಾ ಕಡೆ ಬಹಿರಂಗ ಸಭೆಗಳು ನಡೆದಿವೆ ಎಲ್ಲಾ ಕಡೆ 50-200 ಜನ ಸೇರುತ್ತಿದ್ದರು. ಜಾಲಹಳ್ಳಿಯಲ್ಲಿ 500 ಜನ ಬಳಗಾನೂರ 300 ಜನ ಸೇರಿದ್ದರು. ಸಿಂಧನೂರಿನಲ್ಲಿ ಜಾಥಾವನ್ನು ವಾದ್ಯಗಳಿಂದ ಬರಮಾಡಿಕೊಂಡರು. ಹಟ್ಟಿ, ಜಾಲಹಳ್ಳಿಯಲ್ಲಿ ಅದ್ದೂರಿಯಿಂದ ಸ್ವಾಗತ ಮಾಡಲಾಯಿತು. ಸಿಂಧನೂರ, ಹಟ್ಟಿ, ಜಾಲಹಳ್ಳಿಯಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಬಹಿರಂಗ ಸಭೆ ಸ್ಥಳಕ್ಕೆ ಬರಲಾಗುತ್ತಿತ್ತು. ಜಾಲಹಳ್ಳಿ ಸ್ಥಳೀಯರಾದ ವಿರುಪಾಕ್ಷಪ್ಪ ಗೌಡ, ಪೊತ್ನಾಳದಲ್ಲಿ ವೀರಭದ್ರಯ್ಯ ಸ್ವಾಮಿ ಸಿಂಧನೂರಿನಲ್ಲಿ ಶರಣೆಗೌಡ ಜಾಥಾದಲ್ಲಿ ಶುಭ ಕೋರಿ ಮಾತನಾಡಿದರು. ಮಿತ್ರ ಸಂಘಟನೆಯವರಾದ ಮಲ್ಲಯ್ಯ ಜಾಲಹಳ್ಳಿ, ಪಿ.ಗಿರಿಯಮ್ಮ ಆರ್.ಕೆ.ದೇಸಾಯಿ, ಶೇಕ್ಷಾಖಾದ್ರಿ ಹೆಚ್.ವಿ.ಗುಡಿ ಮತ್ತು ಡಿ.ವೈ.ಎಫ್.ಐ ಹೆಚ್ ಶರ್ಫುದ್ದೀನ್ ಪೊತ್ನಾಳ, ಸಿ.ಎಸ್.ನಾಡಗೌಡ ಜಾಲಹಳ್ಳಿ, ಮಲ್ಲಿಕಾರ್ಜುನ ಹರವಿ, ಸೋಮಶೇಖರ್ ಜಾಥಾದ ಉದ್ದಕ್ಕೂ ಮಾತನಾಡಿ ಸಮ್ಮೇಳನದ ಸಂದೇಶ ಮುಟ್ಟಿಸುತ್ತಿದ್ದರು.



ಒಟ್ಟಿನಲ್ಲಿ ಈ ಜಾಥಾ ಸ್ಫೂರ್ತಿದಾಯಕವಾಗಿ ಡಿ.ವೈ.ಎಫ್.ಐ ಸಂಘಟನೆ ಉಭಯ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಪ್ರಚಾರವಾಗಿ ಗೋಡೆ ಬರಹ, ಪೋಸ್ಟರ್‌ಗಳಿಂದ ಕಂಗೊಳಿಸಿ ಜಿಲ್ಲೆಯ ಜನತೆಯಲ್ಲಿ ಜನಜನಿತವಾಗಿ ಮಾಡಲು ಈ ಜಾಥಾದಿಂದ ಸಾಧ್ಯವಾಗಿದೆ ಮತ್ತು ಸಮ್ಮೇಳನದ ಸಂದೇಶ ಹಳ್ಳಿ ಹಳ್ಳಿಗೂ ತಲುಪಿಸಲು ಈ ಜಾಥಾದಿಂದ ಸಾಧ್ಯವಾಗಿದೆ.

ವರದಿ : ಸಿ.ಎಸ್.ನಾಡಗೌಡ

'ಭಾರತೀಯ ಪರಂಪರೆ ಮತ್ತು ಕೋಮುಸೌಹಾರ್ದತೆ' - ವಿಚಾರಸಂಕಿರಣ

ಡಿವೈಎಫ್ಐ ನ 7ನೇ ರಾಜ್ಯ ಸಮ್ಮೇಳನ ಅಂಗವಾಗಿ ರಾಯಚೂರು ಜಿಲ್ಲೆಯ ಮುದಗಲ್‌ನಲ್ಲಿ ನವೆಂಬರ್ 12ರಂದು 'ಪ್ರಸಕ್ತ ಪರಿಸ್ಥಿತಿಯಲ್ಲಿ ಯುವಜನರ ಪಾತ್ರ' ಮತ್ತು 'ಭಾರತೀಯ ಪರಂಪರೆ ಮತ್ತು ಕೋಮುಸೌಹಾರ್ದತೆ' ವಿಷಯಗಳ ಮೇಲೆ ರಾಜ್ಯ ಸಮ್ಮೇಳನದ ಸಿದ್ಧತಾ ಸಮಿತಿ ನೇತೃತ್ವದಲ್ಲಿ ವಿಚಾರ ಸಂಕಿರಣವೊಂದು ನಡೆಯಿತು.

ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐನ ರಾಜ್ಯ ಉಪಾಧ್ಯಕ್ಷರಾದ ಎಸ್.ವೈ.ಗುರುಶಾಂತ್ ಭಾಗವಹಿಸಿ 'ಪ್ರಸ್ತುತ ಪರಿಸ್ಥಿತಿಯಲ್ಲಿ ಯುವಜನರ ಪಾತ್ರ ಕುರಿತು ಮಾತನಾಡಿದರು. ಮತ್ತೊಬ್ಬ ಮುಖ್ಯ ಅತಿಥಿಗಳಾದ ಅಬ್ದುಲ್ ಕರಿಂ ಸಾಬ ಕೌತಾಳರವರು ಕೋಮು ಸೌಹಾರ್ದತೆ ಮತ್ತು ಯುವಜನರ ಕುರಿತು ಮಾತನಾಡಿದರು. ಶರಣಪ್ಪ ನಾಗಲಾಪೂರ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಗುರಪ್ಪ ಕುಮಚಗಿ ಅಶೋಕಗೌಡ ಪಾಟೀಲ ಮತ್ತು ಮಲ್ಲಯ್ಯ ಜಾಲಹಳ್ಳಿ ಭಾಗವಹಿಸಿದ್ದರು. ಅನಿಲ್‌ಕುಮಾರ್ ನಿರೂಪಿಸಿದರೆ, ರಾಮಚಂದ್ರ ಕುಲಕರ್ಣಿ ಸ್ವಾಗತಿಸಿ, ಸೋಮಶೇಖರ್ ನಾಗಲಾಪೂರ ವಂದನೆ ಸಲ್ಲಿಸಿದರು.

ದೇಶದ ಜಾತ್ಯಾತೀತ ಚೌಕಟ್ಟನ್ನು ರಕ್ಷಿಸಲು ಸಾಧ್ಯವಾದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಸಾಧ್ಯವಿದೆ.ಜಾತ್ಯಾತೀತತೆಮತ್ತುಪ್ರಜಾಪ್ರಭುತ್ವವನ್ನು ರಕ್ಷಿಸಿದಲ್ಲಿ ದೇಶದ ಐಕ್ಯತೆ ಉಳಿಸಲು ಸಾಧ್ಯವಿದೆ. ಆದ್ದರಿಂದ ಗುಜರಾತ್‌ನಲ್ಲಿ ಡಿಸೆಂಬರ್ 12 ರಂದು ನಡೆಯುವ ಚುನಾವಣೆ ಬರಿ ಒಂದು ಪಕ್ಷವನ್ನು ಅಧಿಕಾರಕ್ಕೇರಿಸುವ ಚಾಲನೆ ಮಾತ್ರವಲ್ಲ, ದೇಶದ ಐಕ್ಯತೆಯನ್ನುಸಾರುವಪ್ರವರ್ಧಮಾನಹೋರಾಟ.

ರಾಷ್ಟ್ರೀಯ ಮಹತ್ವ

ಈ ಹಿನ್ನೆಲೆಯಲ್ಲಿ ಗುಜರಾತ್ ಚುನಾವಣೆ ರಾಷ್ಟ್ರೀಯ ಮಹತ್ವವನ್ನು ಪಡೆದಿದೆ. ಇತ್ತೀಚೆಗಷ್ಟೆ ನಡೆದ ಕಾಶ್ಮೀರ ಚುನಾವಣೆ ಅಂತರರಾಷ್ಟ್ರೀಯ ಮಹತ್ವವನ್ನುಪಡೆದಿದ್ದರೆ,ಗುಜರಾತಿನಲ್ಲಿನಡೆಯುವ ಚುನಾವಣೆದೇಶದಜಾತ್ಯಾತೀತಮತ್ತುಕೋಮುವಾದಿ ಶಕ್ತಿಗಳ ನಡುವಣ ನೇರ ಹಣಾಹಣಿಯಾಗಲಿದೆ. ಮುಂದಿನ ವರ್ಷ ಸಾಧಾರಣ 10 ರಾಜ್ಯಗಳಿಗೆ ನಡೆಯುವ ವಿಧಾನಸಭಾ ಚುನಾವಣೆ ಹಾಗೂ ಆನಂತರದಲ್ಲಿನಡೆಯುವ(2004ರಲ್ಲಿ)ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ (ಅದಕ್ಕಿಂತಲೂ ಮೊದಲು ವಾಜಪೇಯಿ ಸರಕಾರ ಉರುಳದಿದ್ದಲ್ಲಿ) ಗುಜರಾತ್ ಚುನಾವಣೆ ಕೇಂದ್ರಸ್ಥಾನ ಪಡೆದಿದೆ.

ಸೋಲಿನ ಮೇಲೆ ಸೋಲು

ಇತ್ತೀಚೆಗೆ ನಡೆದ ಜಮ್ಮು ಮತ್ತು ಕಾಶ್ಮೀರ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋತಿದೆ. ತಾನು ಪ್ರಬಲವಾಗಿದ್ದ ಜಮ್ಮು ಪ್ರದೇಶದಲ್ಲಿ ಕೂಡಾ ಹೇಳ ಹೆಸರಿಲ್ಲದೆ ಸೋತಿತು. ಹಿಂದಿನ ವಿಧಾನಸಭೆಯಲ್ಲಿದ್ದ ತನ್ನೆಲ್ಲಾ 8 ಸೀಟುಗಳನ್ನು ಕಳೆದುಕೊಂಡು ಹೊಸ ಒಂದು ಸ್ಥಾನವನ್ನು ಕೆಲವೇ ಮತಗಳ ಅಂತರದಿಂದ ಪಡೆಯಿತು. ಸ್ವಾತಂತ್ರ್ಯ ನಂತರ ಚುನಾವಣೆಯಲ್ಲಿ ಎಂದೂ ಸೋಲದ ನ್ಯಾಶನಲ್ ಕಾನ್‌ಫರೆನ್ಸ್, ಬಿಜೆಪಿಯೊಂದಿಗೆ ಮಾಡಿಕೊಂಡ ಮೈತ್ರಿಯಿಂದಾಗಿ ಮಣ್ಣು ಮುಕ್ಕಿತು.

ಅದಕ್ಕೂ ಮೊದಲು ಉತ್ತರ ಪ್ರದೇಶ, ಉತ್ತರಾಂಚಲ, ಪಂಜಾಬ್, ಮಣಿಪುರ ಮತ್ತು ಪಾಂಡಿಚೇರಿಗಳಿಗೆನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತುಮೈತ್ರಿ ಪಕ್ಷಗಳು ಸೋತಿದ್ದವು. ಅದರ ನಂತರ ನಡೆದ ಗೋವಾ ಚುನಾವಣೆಯಲ್ಲೂ ಸಹ ಬಿಜೆಪಿ ಸೋಲನ್ನು ಅನುಭವಿಸಿತ್ತು. ಆದರೆ ಕೆಲವು ಪಕ್ಷೇತರ ಶಾಸಕರ ಪಕ್ಷಾಂತರದಿಂದ ಅಧಿಕಾರ ನಡೆಸುತ್ತಿದೆ.

ಸೋಲಿನ ಸರಮಾಲೆಯ ಹಿನ್ನೆಲೆಯಲ್ಲಿ ಗುಜರಾತನ್ನು ಒಂದು ಪ್ರಯೋಗ ಶಾಲೆಯನ್ನಾಗಿ ಮಾಡಲುಬಿಜೆಪಿಹೊರಟಿದೆ.ಸೋಮನಾಥದಿಂದ ಅಯೋಧ್ಯೆವರೆಗಿನ ರಥಯಾತ್ರೆ, ಬಾಬ್ರಿ ಮಸೀದಿ ಕೆಡವಿದ್ದು, ಇದರಿಂದ ಉಂಟಾದ ಕೋಮು ಧೃವೀಕರಣದಿಂದ ಮುಗ್ಧ ಜನರ ಹೆಣಗಳ ಮೇಲೆ ತನ್ನಮತಬ್ಯಾಂಕ್‌ನ್ನುಹೆಚ್ಚಿಸಿಕೊಂಡಬಿಜೆಪಿ,ರಕ್ತದ ರುಚಿಕಂಡತೋಳನಂತಾಗಿದೆ.ಅದನ್ನೇಗುಜರಾತಿನಲ್ಲಿ ಮಾಡಹೊರಟಿದೆ.

ಗಾಂಧಿಯನಾಡೆಂದುಖ್ಯಾತಿಪಡೆದಗುಜರಾತ್. ಕೋಮುಪಡೆಗಳಬೀಡುಎಂದುಅಪಖ್ಯಾತಿಪಡೆದಿದೆ. ಸ್ವಾತಂತ್ರ್ಯ ನಂತರ (ಅಥವಾ ಗಾಂಧಿಯನ್ನು ಕೊಂದನಂತರ) ಅತಿಹೆಚ್ಚು ಕೋಮುಗಲಭೆಗಳು ಗುಜರಾತಿನಲ್ಲಿನಡೆದಿವೆ.ಗಾಂಧಿಶತಮಾನೋತ್ಸವ ದಿನಾಚರಣೆಯವರ್ಷ(1969)ದಂದುಗುಜರಾತಿನ ಅಹ್ಮದಾಬಾದ್‌ಹಿಂದೆಂದೂಕಂಡರಿಯದಕೋಮು ಗಲಭೆಗೆ ತುತ್ತಾಯಿತು.

ಕಾಂಗ್ರೆಸ್ ವಿರುದ್ಧ ಅತೃಪ್ತಿ

ಗುಜರಾತಿನಲ್ಲಿ ಮತ್ತು ಕೇಂದ್ರದಲ್ಲಿ ಆಡಳಿತ ನಡೆಸಿದಕಾಂಗ್ರೆಸ್‌ಸರಕಾರಅನುಸರಿಸಿದನೀತಿಯಿಂದ ಬೇಸತ್ತಜನ 70ರ ದಶಕದಲ್ಲಿನಡೆದ ಜಯಪ್ರಕಾಶ್ ನಾರಾಯಣ್ ಅವರ ನೇತೃತ್ವದಲ್ಲಿ ಗುಜರಾತ್ ಚಳುವಳಿಯಲ್ಲಿ ಭಾಗವಹಿಸಿದರು. ಆದರೆ ರಾಜಕೀಯವಾಗಿ ಜನರ ಈ ಅತೃಪ್ತಿಯನ್ನು ಅಂದಿನ ಜನ ಸಂಘ ಮತ್ತು ಇಂದಿನ ಬಿಜೆಪಿ ತನ್ನದಾಗಿಸಿಕೊಂಡವು. ಕಾಂಗ್ರೆಸ್ಸಿಗೆ ವಿರುದ್ಧವಾದ ಮೂರನೇ ಶಕ್ತಿಯೊಂದುಅಲ್ಲಿಬೆಳೆದು ಬರಲಿಲ್ಲ. ಇದು ಅಲ್ಲಿನ ದುರಂತ.

ಮಾತ್ರವಲ್ಲ, ಕೋಮುವಾದಿಗಳ ವಿರುದ್ಧ ಕಾಂಗ್ರೆಸ್‌ರಾಜಕೀಯವಾಗಿಹೋರಾಟನಡೆಸಲಿಲ್ಲ. ಪ್ರತಿ ಹಂತದಲ್ಲೂ ಅವರೊಂದಿಗೆ ರಾಜಿ ಮಾಡಿಕೊಂಡಿತೇಹೊರತು,ಜನರನ್ನುಒಗ್ಗೂಡಿಸಲು, ಜಾಗೃತಗೊಳಿಸಲುಯಾವುದೇಪ್ರಯತ್ನಮಾಡಲಿಲ್ಲ.

ಗೋಧ್ರಾಘಟನೆಮತ್ತುಅದರನಂತರಭುಗಿಲೆದ್ದ ಮುಸ್ಲಿಮರಮಾರಣಹೋಮಕೋಮುವಿಭಜನೆಗೆ ದಾರಿಮಾಡಿತು. ಇತ್ತೀಚೆಗೆ ಚುನಾವಣಾ ಆಯೋಗ ನಡೆಸಿದಮತದಾರರಪಟ್ಟಿಪರಿಷ್ಕರಣೆನಡೆಸುವಾಗ ಕಂಡುಬಂದ ಅಂಶ ನಿಜಕ್ಕೂ ದಿಗಿಲು ಹುಟ್ಟಿಸುವಂತದ್ದು. 4 ಲಕ್ಷಕ್ಕೂ ಹೆಚ್ಚು ಮತದಾರರು (ಮುಸ್ಲಿಂರು ಎಂದು ಬೇರೆ ಹೇಳಬೇಕಾಗಿಲ್ಲ) ತಮ್ಮ ಮೊದಲಿನ ವಿಳಾಸದಲ್ಲಿ ಇದ್ದಿರಲಿಲ್ಲ. ಅದರಲ್ಲಿ ಒಂದುವರೆ ಲಕ್ಷದಷ್ಟು ಮತದಾರರು ಮಾತ್ರ ಬೇರೆ ವಿಳಾಸದಲ್ಲಿಇದ್ದರೆಂದುದೃಢಪಟ್ಟಿದೆ.ಉಳಿದವರೆಲ್ಲಿ? ಊರು ಬಿಟ್ಟು ಹೋದರೆ? ಅಥವಾ... ಇದು ಗುಜರಾತಿನಭೀಕರಪರಿಸ್ಥಿತಿ.ಬಿಜೆಪಿಗೆದ್ದಲ್ಲೇಆದರೆ ಅಲ್ಲಿ ನಡೆಸಿದ ಪ್ರಯೋಗವನ್ನು ದೇಶದ ಇತರೆಡೆ ಹಬ್ಬಿಸುವ ಸಾಧ್ಯತೆ ಇದೆ. ಆದ್ದರಿಂದ ಗುಜರಾತಿನಲ್ಲಿ ಕೋಮುಶಕ್ತಿಯ ನೇತಾರನಾದ ಬಿಜೆಪಿಯನ್ನು ಸೋಲಿಸುವುದು ಅತಿ ಅಗತ್ಯ.

ಕೋಮುಗಲಭೆನಡೆಯುತ್ತಿರುವಾಗಲೇಅಂದರೆ ಏಪ್ರಿಲ್, 2002ರಲ್ಲಿ ಅಸೆಂಬ್ಲಿಯನ್ನು ವಿಸರ್ಜಿಸಿ ಹೊಸಚುನಾವಣೆನಡೆಸಬೇಕೆಂದುಬಿಜೆಪಿಬಯಸಿತ್ತು. ಆದರೆಬಿಜೆಪಿವಿರುದ್ಧಜನರುನಡೆಸಿದ ಪ್ರತಿಭಟನೆಯಿಂದ ಅದು ಸಾಧ್ಯವಾಗಲಿಲ್ಲ.

ನಂತರ ಮೇ ತಿಂಗಳಲ್ಲಿ ಅಸೆಂಬ್ಲಿಯನ್ನು ವಿಸರ್ಜಿಸಿದಾಗ ಕೋಮು ವಿಭಜನೆಯ ಲಾಭ ಪಡೆದುಕೊಳ್ಳಲು ಆದಷ್ಟೂ ಬೇಗನೆ ಚುನಾವಣೆ ನಡೆಸಿಕೋಮುವಿಭಜನೆಯಲಾಭಪಡೆದುಕೊಳ್ಳಲು ಹವಣಿಸಿತ್ತು. ಆದರೆ ಚುನಾವಣಾ ಆಯೋಗದದೃಢ ಮತ್ತು ಕ್ರಮಬದ್ಧ ನಿಲುವಿನಿಂದ ಅದು ಸಾಧ್ಯವಾಗಲಿಲ್ಲ.

ವಿ.ಹೆಚ್.ಪಿ ವಿಷ ಯಾತ್ರೆ

ನರಹಂತಕ ನರೇಂದ್ರ ಮೋದಿ ನಡೆಸಿದ ಗೌರವ ಯಾತ್ರೆಯಬಳಿಕವಿಶ್ವಹಿಂದೂಪರಿಷತ್‌ನಪ್ರವೀಣ್ ತೊಗಾಡಿಯಾ ನೇತೃತ್ವದಲ್ಲಿ ಇನ್ನೊಂದು ಯಾತ್ರೆ ನಡೆಸಲುತಯಾರಿನಡೆಯುತ್ತಿದೆ.ಆದರೆಚುನಾವಣಾ ಆಯೋಗ ಈ ಯಾತ್ರೆಯನ್ನು 'ಬ್ಯಾನ್' ಮಾಡಿದೆ. 'ಗೌರವ ಯಾತ್ರೆ'ಯ ಸಂದರ್ಭದಲ್ಲಿ ದೇಶಕ್ಕೇ ಅಗೌರವತರುವಮುಸ್ಲಿಂವಿರೋಧಿ,ಕೋಮುಭಾವನೆ ಕೆರಳಿಸುವಭಾಷಣವನ್ನುಬಿಗಿಯಲಾಯಿತು.ಇದೀಗ ಚುನಾವಣಾ ಆಯೋಗದ ಮಧ್ಯಪ್ರವೇಶ ತಪ್ಪಿಸಲು ಸಂಘ ಪರಿವಾರದ ಇನ್ನೊಂದು ಸಂಘಟನೆ ವಿಶ್ವಹಿಂದೂ ಪರಿಷತ್ತಿನ ಮೂಲಕ ಮತ್ತೊಂದು ಯಾತ್ರೆಯನ್ನು ಆರಂಭಿಸಲಾಗುತ್ತಿದೆ. ಈ ಯಾತ್ರೆಯನ್ನು ಚುನಾವಣಾ ಆಯೋಗ ಬ್ಯಾನ್ ಮಾಡಿದಾಗಬಿಜೆಪಿಅದನ್ನುತೀವ್ರವಾಗಿಖಂಡಿಸಿತು. ಆದರೆಪ್ರಧಾನಿವಾಜಪೇಯಿಚುನಾವಣಾಆಯೋಗದ ನಿಲುವನ್ನು ಸ್ವಾಗತಿಸಿದರು. ಇದು ಫ್ಯಾಸಿಸ್ಟರ ದ್ವಂದ್ವ ನೀತಿಗೆ ಸಾಕ್ಷಿ. ಒಂದೇ ಪಕ್ಷದಲ್ಲಿದ್ದುಕೊಂಡು ಬೇರೆ ಬೇರೆ ಮುಖಂಡರು ವಿರೋಧಾಭಾಸದ ಹೇಳಿಕೆ ನೀಡುವುದು ಪರ ಮತ್ತು ವಿರೋಧ ಅಭಿಪ್ರಾಯ ಉಳ್ಳ ಮುಗ್ಧ ಜನರನ್ನು ಒಂದೇ ವೇದಿಕೆಗೆ ತರುವ ಕುತಂತ್ರ.

ಜಾತ್ಯಾತೀತ ಶಕ್ತಿಗಳ ಐಕ್ಯತೆ :


ಇಂತಹ ಸನ್ನಿವೇಶದಲ್ಲಿ ಗುಜರಾತಿನಲ್ಲಿ ಬಿಜೆಪಿಯನ್ನುಸೋಲಿಸುವುದು ಎಲ್ಲಾಜಾತ್ಯಾತೀತ ಶಕ್ತಿಗಳ ಕರ್ತವ್ಯ. ಕೋಮುವಾದಿ ಪಕ್ಷದವಿರುದ್ಧನೇರಸ್ಪರ್ಧೆಅಗತ್ಯ. ಗುಜರಾತಿನಲ್ಲಿಯೂ ವಿಶೇಷ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಜಾತ್ಯಾತೀತಶಕ್ತಿಗಳ ಮತಹರಿದ ಹ೦ಚಿಹ೦ೋಗ೦ದ೦ತೆ ನೋಡಿಕೊಳ್ಳಬೇಕು. 3ನೇ ಶಕ್ತಿ ದುರ್ಬಲವಾಗಿರುವ ಈ ರಾಜ್ಯದಲ್ಲಿ, ಬಿಜೆಪಿ ಪರ್ಯಾಯವಾಗಿರುವ ಕಾಂಗ್ರೆಸ್ ಪಕ್ಷ ಮುತುವರ್ಜಿ ವಹಿಸಿ, ಇತರೆ ಜಾತ್ಯಾತೀತ ಪಕ್ಷಗಳನ್ನು, ಶಕ್ತಿಗಳನ್ನು ಒಂದುಗೂಡಿಸಲು ಪ್ರಯತ್ನಿಸಬೇಕು. ಆದರೆ ಕೆಲವೊಂದು ಕಾಂಗ್ರೆಸ್ ನಾಯಕರು ನೀಡುತ್ತಿರುವ ಹೇಳಿಕೆ ಇದಕ್ಕೆ ಪೂರಕವಾಗಿಲ್ಲ.ತಾವೊಬ್ಬರೆಗೆದ್ದುಬಿಡುತ್ತೇವೆಂದ ಕನಸು ಕಾಣುತ್ತಿದ್ದಾರೆ. ಅದೇ ಸಂದರ್ಭದಲ್ಲಿ ಕೆಲವೊಂದುಪ್ರತಿಪಕ್ಷಗಳುತಮ್ಮಪ್ರಭಾವಕ್ಕಿಂತಲೂ ಮಿಗಿಲಾಗಿ ಸ್ಥಾನಗಳು ಬೇಕೆಂದು ವಾದಿಸುತ್ತಿದ್ದಾರೆ. ಇದರಿಂದ ಜಾತ್ಯಾತೀತ ಪಕ್ಷಗಳ ಮತಗಳು ಹಂಚಿಹೋದರೆ, ಕೋಮುವಾದಿ ಪಕ್ಷಕ್ಕೆ ಲಾಭವಾಗುತ್ತದೆ.ಎಲ್ಲಾಪಕ್ಷಗಳೂಸಮಯೋಚಿತ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.


ಮುಂದಿನ ಮಹಾನ್ ಭಾರತದ ಕನಸು ಕಾಣಬೇಕಾದರೆ,ಇಂದಿನಜಾತ್ಯಾತೀತಭಾರತವನ್ನು ಉಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 12 ರಂದು ನಡೆಯುವ ಚುನಾವಣೆಯಲ್ಲಿ ಕೋಮುವಾದಿಬಿಜೆಪಿಯನ್ನುಸೋಲಿಸಲೇಬೇಕು.


ಗುಜರಾತ್ ಚುನಾವಣೆ

ಫ್ಯಾಸಿಸ್ಟರನ್ನು ಮಣ್ಣು ಮುಕ್ಕಿಸಲು ನೇರ ಸ್ಪರ್ಧೆ

ಒಂದರ ನಂತರ ಮತ್ತೊಂದರಂತೆ ಸೋಲನ್ನಪ್ಪುತ್ತಾ ಸಾಗಿರುವ ಬಿಜೆಪಿ ಗುಜರಾತ್‌ನಲ್ಲಿ ಫ್ಯಾಸಿಸ್ಟ್ ಅಜೆಂಡಾದ ಮೂಲಕ ಹೊಸ ಪ್ರಯೋಗ ಮಾಡಲು ಹೊರಟಿದೆ. ಭಾರತ ಉಳಿಯಬೇಕಾದರೆ ಈ ದುಷ್ಪಯೋಜನೆಯನ್ನು ಸೋಲಿಸಲೇಬೇಕು. ಫ್ಯಾಸಿಸ್ಟರು ಮಣ್ಣು ಮುಕ್ಕಲೇಬೇಕು. ಅದಕ್ಕಾಗಿ ಇಂದಿನ ತುರ್ತು ಅಗತ್ಯ ದುಷ್ಟಕೂಟವನ್ನು ಸೋಲಿಸುವ ನೇರ ಸ್ಪರ್ಧೆಯ ನಿರ್ಧಾರ.


ಮೋದಿ




ತೊಗಾಡಿಯ

ಬಿಡುಗಡೆಯಾಗದ ನಾಗಪ್ಪ.......

ಪುಟ 3 ರಿಂದ

ಗೊಂದಲ ಸೃಷ್ಟಿಸಿದ್ದಾರೆ. ಕಾವೇರಿ ವಿವಾದದ ಲ್ಲಾಗಲೀ, ನಾಗಪ್ಪನವರ ಅಪಹರಣದಲ್ಲಾಗಲೀ ಕೃಷ್ಣರವರು ಒಂದು ದೃಢವಾದ ತೀರ್ಮಾನಕ್ಕೆ ಬದ್ಧರಾಗದೇ ಒತ್ತಡ ಬಂದತ್ತ ವಾಲುವ ಪ್ರವೃತ್ತಿ ತೋರ್ದಿದ್ದಾರೆ.

ನಾಗಪ್ಪನವರ ಬಿಡುಗಡೆಗೆ ಸರ್ಕಾರ ಗಮನ ನೀಡುತ್ತಲೇ ಇಲ್ಲವೆಂದು ಅವರ ಅಭಿಮಾನಿಗಳು ವ್ಯಗ್ರರಾಗಿದ್ದಾರೆ. ಚಳುವಳಿಗೂ ಇಳಿದಿದ್ದಾರೆ, ದಾಂಧಲೆಯೂ ಆಗಿದೆ, ಕುಟುಂಬದವರೂ ಆತಂಕಿತರಾಗಿ ಜಯಲಲಿತಾ, ವಾಜಪೇಯಿಯವರನ್ನು ಭೇಟಿ ಮಾಡಿ ಸಹಾಯ ಯಾಚಿಸಿದ್ದಾರೆ. ನಾಗಪ್ಪನವರ ಅಪಹರಣವನ್ನು ಜಾತೀಯ ನೆಲೆಗಟ್ಟಿನಲ್ಲಿ ವ್ಯಾಖ್ಯಾನಿಸುವ ಯತ್ನ ನಡೆದಿದೆ. ಸರ್ಕಾರದ ಮೇಲೆ ಒತ್ತಡ ತರಲು ಮಠಾಧೀಶರ ಸಮಾವೇಶ ಸಂಘಟಿಸಲು ಯತ್ನಿಸಲಾಗುತ್ತಿದೆ.


ಬಹಳ ಮುಖ್ಯವಾಗಿ ಬಿಜೆಪಿಯು ಇದರ ಲಾಭ ಹೊಡೆಯಲು ಸಕ್ರಿಯವಾಗಿದೆ. ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ತಮ್ಮ ಗೃಹದಲ್ಲಿ ಎಲ್ಲಾ ವಿರೋಧ ಪಕ್ಷಗಳ ಸಭೆಯೊಂದನ್ನು ಕರೆದು ಆ ಮೂಲಕ ಜಂಟಿಯಾಗಿ ಕೃಷ್ಣ ಸರ್ಕಾರದ ವಿರುದ್ಧ ಚಳುವಳಿ ಮಾಡಲು ಮುಂದಾಗಿದ್ದಾರೆ. ಒಂದೆಡೆ ಕೃಷ್ಣರ ಸರ್ಕಾರದ ಮೇಲಿನ ಅತೃಪ್ತಿ ಬಳಸುವುದು, ಇನ್ನೊಂದೆಡೆ ಲಿಂಗಾಯತರ ಒಲವು ಗಳಿಸಲು ಯತ್ನಿಸುವುದು ಅವರ ಲೆಕ್ಕಾಚಾರ ಇಂತಹ ಯೋಜನೆಗೆ ಜನತಾದಳ(ಯು), ತಟಸ್ಥ ಜನತಾದಳದ ರಮೇಶ್ ಕುಮಾರ್, ವಾಟಾಳ್, ಕಾವೇರಿ ಹೋರಾಟ ಸಮಿತಿಯ ಮಾದೇಗೌಡ ಮುಂತಾದವರು ಭಾಗವಹಿಸಿದ್ದಾರೆ. ಕ್ರಿಯಾ ಸಮಿತಿಯಲ್ಲಿ ಜೆಡಿ(ಯು)ನ ಬೈರೇಗೌಡ, ಎಂ.ಪಿ.ಪ್ರಕಾಶ್ ಸಹ ಇದ್ದಾರೆ. ಈ ಸಭೆಗೆ ಸಿಪಿಐ(ಎಂ),ಜೆಡಿ(ಎಸ್) ಹೋಗಿಲ್ಲ.

ಈಚೆಗೆ ಬೊಮ್ಮಾಯಿಯವರ ಸಮ್ಮುಖದ ಜನತಾದಳದ ವಿಲೀನದ ಸಮಾಲೋಚನೆ ಸಭೆಗೆ ಎಂ.ಪಿ.ಪ್ರಕಾಶ್ ಹಾಜರಿರಲಿಲ್ಲ. ಮೇಲಾಗಿ ಈ ಸಭೆಗೆ ಮೊದಲು ವಿಲೀನಕ್ಕೆ ದೇವೇಗೌಡರೇ ಅಡ್ಡಿ ಎಂದು ಹೇಳಿಕೆಯನ್ನು ಪ್ರಕಾಶ್ ನೀಡಿರುವುದು ಕೇವಲ ಆಕಸ್ಮಿಕವಿರಲಾರದೇ ಎನ್ನಿಸುತ್ತದೆ.

ಅಕ್ಟೋಬರ್ ಮಹಾನ್ ಕ್ರಾಂತಿ ತೋರಿದ

ಜಗತ್ತನ್ನೇ ತಲ್ಲಣಗೊಳಿಸಿದ ಅಕ್ಟೋಬರ್ ಮಹಾನ್ ಕ್ರಾಂತಿ ಘಟಿಸಿ 85 ವರುಷಗಳೀಗ. ವಿಶ್ವದ ಕೋಟ್ಯಾಂತರ ದಮನಿತರಲ್ಲಿ ಸ್ಫೂರ್ತಿ ತುಂಬಿತು. ವಸಾಹತುಶಾಹಿಯ ವಿರುದ್ಧದ ಹೋರಾಟಗಾರರು ಹೊಸ ಮಜಲಿನಲ್ಲಿ ಯಶಸ್ಸು ಕಂಡವು. ಕಾರ್ಮಿಕವರ್ಗದ ಕ್ರಾಂತಿಕಾರಿ ಅಧಿನಾಯಕತ್ವದಲ್ಲಿ ಸಮಾಜವಾದಿ ಸೋವಿಯತ್ ರಶಿಯಾ ಹಿಂದೆಂದೂ ಕಾಣದ, ಯಾರೂ ಸರಿಗಟ್ಟಲಾಗದ ಅಗಾಧ ಸಾಧನೆ ಗೈಯ್ದಿತು. ಜಗತ್ತನ್ನೇ ನುಂಗಬಯಸುವ ಹಿಟ್ಲರನ ಫ್ಯಾಸಿಸ್ಟ್ ಆಕ್ರಮಣವನ್ನು ಪುಡಿಗಟ್ಟಿ ಅಜೇಯ ಶಕ್ತಿಯಾಯಿತು. ಆದರೆ ಸಾಮ್ರಾಜ್ಯಶಾಹಿಗಳ ಪಿತೂರಿ, ಮಾರ್ಕ್ಸ್‌ವಾದ-ಲೆನಿನ್ ವಾದ ಅನ್ವಯದಲ್ಲಿನ ವಿಕೃತಿಯಿಂದಾಗಿ ಸೋವಿಯತ್ ವ್ಯವಸ್ಥೆ ಕುಸಿಯಿತು. ಇದರಿಂದ ಜಾಗತಿಕ ಅಧಿಪತ್ಯ ಸಾಧಿಸುವ ಅಮೆರಿಕನ್ ಸಾಮ್ರಾಜ್ಯಶಾಹಿ ಕನಸು, ತೀವ್ರಗೊಳ್ಳುತ್ತಿರುವ ಸುಲಿಗೆ, ಶೋಷಣೆಯೆದುರು ಶೋಷಿತ ವರ್ಗಕ್ಕೆ, ಇಡೀ ಮಾನವ ಜನಾಂಗಕ್ಕೆ ಇಂದಿಗೂ ಈ ಮಹಾನ್ ಕ್ರಾಂತಿ ದಾರಿದೀಪ. ಕ್ರಾಂತಿಯ ಮಹತ್ವ ಮತ್ತು ಪ್ರಸ್ತುತ ಸವಾಲಿನೆದುರು ಪ್ರಸ್ತುತತೆ ಬಗ್ಗೆ ವಿಶ್ಲೇಷಣೆಯ ಮೂರು ಲೇಖನಗಳಿಲ್ಲಿ.

85 ವರ್ಷಗಳ ನಂತರವೂ ಮಹತ್ವಪೂರ್ಣ



ಹರಕಿಶನ್ ಸಿಂಗ್ ಸುರ್ಜಿತ್


ಈ ವರ್ಷ ನವೆಂಬರ್ 7 ರಂದು ಮಹಾನ್ ಅಕ್ಟೋಬರ್ ಕ್ರಾಂತಿಯ 85ನೇ ವಾರ್ಷಿಕೋತ್ಸವದ ದಿನ. ಈ ಘಟನೆ ನಿಜಕ್ಕೂ 'ವಿಶ್ವವನ್ನೇ ನಡುಗಿಸಿದ' ಘಟನೆ. ವಿಶ್ವಾದ್ಯಂತ ಕೋಟ್ಯಾಂತರ ಜನಗಳಲ್ಲಿ ಸ್ಫೂರ್ತಿ ತುಂಬಿದ ಘಟನೆ. ಅಂತರ್‌ರಾಷ್ಟ್ರೀಯವಾಗಿ ಕಾರ್ಮಿಕ ವರ್ಗದ ಆಂದೋಲನದಲ್ಲಿ ಮತ್ತು ವಸಾಹತು, ಅರೆ-ವಸಾಹತುಗಳ ಜನ ವಿಮೋಚನಾ ಹೋರಾಟದಲ್ಲಿ. ಸೋವಿಯತ್ ಒಕ್ಕೂಟದ ರಚನೆ ಝಾರ್ ಶಾಹಿಯು 'ಸೆರೆಮನೆ'ಯಲ್ಲಿದ್ದ ಹಲವಾರು ದಮನಿತ ರಾಷ್ಟ್ರೀಯತೆಗಳನ್ನು ವಿಮೋಚನೆಗೊಳಿಸಿತು.

ತನ್ನ ಅಸ್ತಿತ್ವದ ಏಳೂವರೆ ದಶಕಗಳಲ್ಲಿ ಸೋವಿಯತ್ ಒಕ್ಕೂಟ ತನ್ನ ನಾಗರಿಕರಿಗೆ ಹಿಂದೆಂದೂ ಕಂಡು-ಕೇಳರಿಯದ ಹಕ್ಕುಗಳನ್ನು ಒದಗಿಸಿತು. ವಿಶ್ವದ ಈ ಪ್ರಥಮ ಸಮಾಜವಾದಿ ಪ್ರಭುತ್ವ ತನ್ನ ಜನಗಳಿಗೆ ನೀಡಿದ ಕೆಲಸದ, ಶಿಕ್ಷಣದ, ಆರೋಗ್ಯದ, ವಸತಿಯ ಮತ್ತು ಇತರ ಅಸಂಖ್ಯಾತ ಹಕ್ಕುಗಳು ಇಡೀ ವಿಶ್ವದ ಹೋರಾಟನಿರತ ಜನಸಮೂಹಗಳ ಮೇಲೆ ಆಳವಾದ ಪ್ರಭಾವ ಬೀರಿದವು. ಆ ದೇಶಗಳ ಬಂಡವಾಳಶಾಹಿ ಆಳರಸರೂ ಇದರಿಂದಾಗಿ 'ಕಲ್ಯಾಣ ಪ್ರಭುತ್ವ'ದ ಪರಿಕಲ್ಪನೆ ರೂಪಿಸಿ ಹಲವಾರು ರಿಯಾಯ್ತಿಗಳನ್ನು ನೀಡಬೇಕಾಗಿ ಬಂತು. ತನ್ನನ್ನು ವೈಷಮ್ಯಪೂರ್ಣ ಬಂಡವಾಳಶಾಹಿ ದೇಶಗಳು ಸುತ್ತುವರೆದಿದ್ದರೂ ಸೋವಿಯತ್ ಒಕ್ಕೂಟ ಈ ಜನಪರ ಕೆಲಸಗಳನ್ನು ಕೈಗೊಂಡಿತು ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ.

ಸಮಕಾಲೀನ ಇತಿಹಾಸ ರೂಪಿಸುವಲ್ಲಿ ಸೋವಿಯತ್ ಒಕ್ಕೂಟದ ಪಾತ್ರವನ್ನು ಅದರ ಶತ್ರುಗಳೂ ಒಪ್ಪಿಕೊಳ್ಳುತ್ತಾರೆ. ಫ್ಯಾಸಿಸಂ ಮೇಲೆ ವಿಜಯ, ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಬೆಂಬಲ, ನವವಿಮೋಚಿತ ದೇಶಗಳ ಕೈಗಾರಿಕಾ ಬೆಳವಣಿಗೆಗೆ ಸಾಮ್ರಾಜ್ಯಶಾಹಿಯ ಮೇಲೆ ಅವಲಂಬನೆಯಿಂದ ಮುಕ್ತವಾಗಲು ನೆರವು ಇತ್ಯಾದಿಗಳ ಮೂಲಕ ಸೋವಿಯತ್ ಒಕ್ಕೂಟ ಅಂತರ್‌ರಾಷ್ಟ್ರೀಯ ಬೆಳವಣಿಗೆಗಳನ್ನು ರೂಪಿಸಿತು.

ಹಿಟ್ಲರನ ಪಡೆಗಳನ್ನು ಎದುರಿಸಲು ಸಾಮ್ರಾಜ್ಯಶಾಹಿ ದೇಶಗಳು ಸಂಪೂರ್ಣ ವಿಫಲವಾದಾಗ ಆತನ ಮುನ್ನಡೆಯನ್ನು ತಡೆದು ವಿಶ್ವವನ್ನು ಫ್ಯಾಸಿಸ್ಟ್ ಪೀಡೆಯಿಂದ ಉಳಿಸಿದ್ದು ಸೋವಿಯತ್ ಒಕ್ಕೂಟ. ಇದಕ್ಕಾಗಿ ಅದು ತನ್ನ 2 ಕೋಟಿ ಜನಗಳನ್ನು ಬಲಿ ನೀಡಬೇಕಾಯಿತು. ಕೈಗಾರಿಕಾ-ಕೃಷಿ ಸಂಪತ್ತಿನ ಅಪಾರ ಹಾನಿ ಎದುರಿಸಬೇಕಾಯಿತು. ಈ ವಿಜಯ ಅಂತರ್‌ರಾಷ್ಟ್ರೀಯ ರಂಗದಲ್ಲಿ ವರ್ಗಬಲಾಬಲವನ್ನು ಬದಲಿಸಿತು. ಹಲವು ಸಮಾಜವಾದಿ ಪ್ರಭುತ್ವಗಳು ಮೂಡಿಬರುವಂತಾಯಿತು. ಭಾರತವೂ ಸೇರಿದಂತೆ ಏಶ್ಯಾ, ಆಫ್ರಿಕಾದ ಹಲವು ದೇಶಗಳು ಸ್ವಾತಂತ್ರ್ಯ ಪಡೆದವು. ಮಹಾಯುದ್ಧಾನಂತರ ಬಹಳ ಕಾಲ ಶಾಂತಿ ನೆಲೆಸಿದ್ದರೆ ಅದಕ್ಕೆ ಸೋವಿಯತ್ ಒಕ್ಕೂಟದ ಅಸ್ತಿತ್ವವೇ ಕಾರಣ. ಸಾಮ್ರಾಜ್ಯಶಾಹಿ ಕೊಳ್ಳೆಯ ವಿರುದ್ಧ ಭದ್ರಕೋಟೆಯಂತೆ ಅದು ಕೆಲಸ ಮಾಡಿತು. ಸೋವಿಯತ್ ಒಕ್ಕೂಟದ ಕುಸಿತದ ನಂತರ ಈಗ ತಾತ್ಕಾಲಿಕವಾಗಿ ಏಕಧ್ರುವ ಜಗತ್ತು ಅಸ್ತಿತ್ವಕ್ಕೆ ಬಂದಿದೆ, ಅಮೆರಿಕನ್ ಸಾಮ್ರಾಜ್ಯಶಾಹಿ ಈಗ ವಿಶ್ವದ ಮೇಲೆಲ್ಲಾ ಯಜಮಾನಿಕೆ ನಡೆಸಲು ಪ್ರಯತ್ನಿಸುತ್ತಿದೆ. ಸೋವಿಯತ್ ಒಕ್ಕೂಟ ಇದ್ದಿದ್ದರೆ ಅಮೆರಿಕಾ ಈಗ ತೋರಿಸುತ್ತಿರುವ ಭಂಡತನ ಸಾಧ್ಯವಾಗುತ್ತಿರಲಿಲ್ಲ.

ಸೋವಿಯತ್ ಒಕ್ಕೂಟದ ಅಸ್ತಿತ್ವ ಕೊನೆಗೊಂಡರೂ ಅದು ನೀಡಿದ ಕೊಡುಗೆಗಳು ಚಿರಸ್ಮರಣೀಯ.



ಮಹಾನ್ ಕ್ರಾಂತಿಯ ಕಹಳೆ ಮೊಳಗಿಸಿದ ಕಾಮ್ರೇಡ್ ಲೆನಿನ್

ಹಿನ್ನಡೆಗೆ ಕಾರಣಗಳು

ಪೂರ್ವ ಯುರೋಪಿನ ಹಿಂದಿನ ಸಮಾಜವಾದಿ ದೇಶಗಳಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆ ಮತ್ತು ಸೋವಿಯತ್ ಒಕ್ಕೂಟದ ವಿಘಟನೆಗೆ ಮಾರ್ಕ್ಸ್‌ವಾದ-ಲೆನಿನ್ ವಾದವನ್ನು ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನ್ವಯಿಸುವ ಪ್ರಕ್ರಿಯೆಯಲ್ಲಿ ವಿಕೃತಿಗಳು, ಮಾರ್ಗಚ್ಯುತಿಗಳು ಸಂಭವಿಸಿದವು. ಸಮಾಜವಾದೀ ರಚನೆಯ ಪ್ರಕ್ರಿಯೆಯಲ್ಲೂ ತಪ್ಪುಗಳು ಸಂಭವಿಸಿದವು. ತಪ್ಪು ತಿಳುವಳಿಕೆಗಳು ನುಸುಳಿದವು, ನೆಲದ ವಾಸ್ತವತೆಗಳನ್ನು ನಿರ್ಲಕ್ಷಿಸಲಾಯಿತು.

ಯಾವುದೇ ಸಾಮಾಜ್ಯಶಾಹಿ ಸವಾಲನ್ನು ಎದುರಿಸಲು ಶಸ್ತ್ರಾಸ್ತ್ರಗಳಲ್ಲಿ ಸಮಬಲ ಸಾಧಿಸಲು ಗಮನ ನೀಡಬೇಕಾಗಿತ್ತು ನಿಜ. ಆದರೆ ಕೈಗಾರಿಕಾ ಬೆಳವಣಿಗೆಗೂ ಅಷ್ಟೇ ಒತ್ತು ಕಾಣಲಿಲ್ಲ. ವಿಜ್ಞಾನ-ತಂತ್ರಜ್ಞಾನದಲ್ಲಿ ಅಪಾರ ಮುನ್ನಡೆಗಳತ್ತ ಸಾಕಷ್ಟು ಗಮನ ನೀಡಲಿಲ್ಲ.

ಅಧಿಕಾರರಂಗದಲ್ಲಿನ ಪ್ರಶ್ನೆಗಳನ್ನು ನಿರ್ಲಕ್ಷಿಸಿದರೆ, ಅತ್ತ ನಿರ್ಣಯ ಕೈಗೊಳ್ಳುವ ಸಂಸ್ಥೆಗಳನ್ನು ನಿಜಕ್ಕೂ ಪ್ರಾತಿನಿಧಿಕವಾಗಿಸಲು ಅವುಗಳಲ್ಲಿ ಜನಗಳ ಭಾಗವಹಿಸುವಿಕೆಯನ್ನು ವಿಸ್ತರಿಸುವ ವಿಷಯದಲ್ಲಿ ಪ್ರಜಾಪ್ರಭುತ್ವ-ವಿರೋಧಿ ನಿಲುವು ಕಂಡು ಬಂತು. ಪಕ್ಷ ಮತ್ತು ಪ್ರಭುತ್ವದ ನಡುವೆ ವ್ಯತ್ಯಾಸವನ್ನು ಕಾಣಲಿಲ್ಲ. ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿಗಳನ್ನು ಹೆಚ್ಚೆಚ್ಚಾಗಿ ಉಲ್ಲಂಘಿಸಿ ಕೇಂದ್ರವಾದದ ಮೇಲೆ ಹೆಚ್ಚು ಒತ್ತು ನೀಡಲಾಯಿತು. ಪಕ್ಷದ ಸ್ಥಾನದಲ್ಲಿ ಮುಖಂಡತ್ವ, ಮುಖಂಡತ್ವದ ಸ್ಥಾನದಲ್ಲಿ ಒಂದು ಕೂಟ ಬಂತು. ಈ ನ್ಯೂನ್ಯತೆಗಳು, ತಪ್ಪುಗಳು ಹಿನ್ನೆಡೆಗಳಿಗೆ, ಸೋಲುಗಳಿಗೆ ಕಾರಣವಾದವು.

ಇಂದು ಈ ದೇಶಗಳಲ್ಲಿ ಜನ ಯಾವುದೇ ಶೋಷಕ ವ್ಯವಸ್ಥೆಯ ಸಾರಾಂಶದಂತಿರುವ ಹಸಿವು, ಬಡತನ, ದಾರಿದ್ರ್ಯವನ್ನು ಎದುರಿಸಬೇಕಾಗಿ ಬಂದಿದೆ. ಬಂಡವಾಳಶಾಹಿಯ ವಾಸ್ತವತೆ ಅವರೆದುರು ನಿಂತಿದೆ. ತಾವು ಏನನ್ನು ಕಳಕೊಂಡೆವು ಎಂಬ ಅರಿವು ಅವರಿಗಾಗಲಾರಂಭಿಸಿದೆ. ಆದ್ದರಿಂದ ಅವರು ಹೋರಾಡಲಾರಂಭಿಸಿದ್ದಾರೆ - ಪೂರ್ವಯುರೋಪಿನ ದೇಶಗಳಲ್ಲೂ ಹಿಂದಿನ ಸೋವಿಯತ್ ಒಕ್ಕೂಟದ ವಿವಿಧ ಗಣ ರಾಜ್ಯಗಳಲ್ಲೂ, ಸಾಮ್ರಾಜ್ಯಶಾಹಿಯ ಸತತ ಧಾಳಿಯೆದುರು ನೆಲಕಚ್ಚಿದ ಪಕ್ಷಗಳು ಹೊಸ ಸವಾಲುಗಳನ್ನು ಎದುರಿಸಲು ಮತ್ತೆ ಮರು ಸಂಘಟನೆಗೊಳ್ಳುತ್ತಿವೆ. ಜನ ಮತ್ತೆ ಕಮ್ಯುನಿಸ್ಟ್ ಪಕ್ಷಗಳಲ್ಲಿ ವಿಶ್ವಾಸ ತೋರುತ್ತಿದ್ದಾರೆ. ರಶ್ಯನ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಅಲ್ಲಿನ ಅತಿದೊಡ್ಡ ಸಂಘಟಿತ ಶಕ್ತಿ.

ಸಮಾಜವಾದಿ ದೇಶಗಳಲ್ಲಿ

ಈಗಿರುವ ಸಮಾಜವಾದಿ ದೇಶಗಳಾದ ಚೀನಾ, ಕ್ಯೂಬಾ, ವಿಯೆಟ್ನಾಂ, ಲಾವೋಸ್ ಮತ್ತು ಕೊರಿಯಾ ಜನತಾ ಗಣತಂತ್ರಗಳು ಯುರೋಪಿನಲ್ಲಿ ಪತನಗೊಂಡ ಸಮಾಜವಾದಿ ಆಡಳಿತಗಳ ತಪ್ಪುಗಳಿಂದ ಪಾಠ ಕಲಿತುಕೊಂಡಿವೆ. ತಂತಮ್ಮ ದೇಶಗಳ ವಾಸ್ತವಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮಾಡುತ್ತಿವೆ. ಸಮಾಜವಾದವನ್ನು ಕಟ್ಟಲು ಇರುವುದು ಒಂದೇ ಮಾದರಿಯಲ್ಲ. ಪ್ರತಿಯೊಂದು ದೇಶವೂ ತನ್ನಲ್ಲಿನ ಉತ್ಪಾದಕ ಶಕ್ತಿಗಳ ಬೆಳವಣಿಗೆಯ ಮಟ್ಟ ಮತ್ತು ವರ್ಗ ಬಲಾಬಲಗಳಿಗೆ ಅನುಗುಣವಾಗಿ ತಮ್ಮದೇ ದಾರಿಯನ್ನು ಆರಿಸಿಕೊಳ್ಳಬೇಕು ಎಂಬುದು ಈಗ ಎಲ್ಲರ ಅರಿವಿಗೆ ಬಂದಿದೆ.

ಸಮಾಜವಾದಿ ಪಥದಲ್ಲೇ ಮುಂದುವರೆದಿರುವ ದೇಶಗಳು ತಮ್ಮ ಉತ್ಪಾದಕ ಶಕ್ತಿಗಳ ಬೆಳವಣಿಗೆಗೆ ಸುಧಾರಣೆಗಳನ್ನು ನಡೆಸುತ್ತಿದ್ದಾರೆ. ಹಿಂದುಳಿದ ಆರ್ಥಿಕಗಳಲ್ಲಿ ಉತ್ಪಾದಕ ಶಕ್ತಿಗಳನ್ನು ಅಭಿವೃದ್ಧಿ ಪಡಿಸುವುದು ಅವರ ಗುರಿ. ಲೆನಿನ್ ಕೂಡಾ ಶೈಶಾವಸ್ಥೆಯಲ್ಲಿದ್ದ ಸೋವಿಯತ್ ಪ್ರಭುತ್ವ ಸಾಮ್ರಾಜ್ಯಶಾಹಿಯಿಂದ ಸುತ್ತುವರೆದಿದ್ದಾಗ, ಆಂತರಿಕ ಯುದ್ಧವನ್ನು ಎದುರಿಸುತ್ತಿದ್ದಾಗ 'ಹೊಸ ಆರ್ಥಿಕ ನೀತಿ'ಯನ್ನು ಆರಂಭಿಸಿದರು. "ಇದರರ್ಥ ನಾವು ಸ್ವಲ್ಪ ಮಟ್ಟಿಗೆ ಬಂಡವಾಳಶಾಹಿಯ ಪುನರ್‌ಸೃಷ್ಟಿ ಮಾಡುತ್ತಿದ್ದೇವೆ. ಇದನ್ನು ಬಹಿರಂಗವಾಗಿಯೇ ಮಾಡುತ್ತಿದ್ದೇವೆ. ಇದು ಪ್ರಭುತ್ವ ಬಂಡವಾಳಶಾಹಿ. ಆದರೆ ಬಂಡವಾಳದ ಬಳಿ ಅಧಿಕಾರವಿರುವ ಒಂದು ಸಮಾಜದಲ್ಲಿ ಪ್ರಭುತ್ವ ಬಂಡವಾಳಶಾಹಿ, ಒಂದು ಶ್ರಮಿಕ ವರ್ಗದ ಪ್ರಭುತ್ವದಲ್ಲಿನ ಪ್ರಭುತ್ವ ಬಂಡವಾಳಶಾಹಿ ಇವೆರೆಡೂ ಭಿನ್ನ ಪರಿಕಲ್ಪನೆಗಳು. ಬಂಡವಾಳಶಾಹಿ ಪ್ರಭುತ್ವದಲ್ಲಿ ಅದು ಬೂರ್ಜ್ವಾ ವರ್ಗಕ್ಕಾಗಿ, ಶ್ರಮಿಕ ವರ್ಗದ ವಿರುದ್ಧ ಆದರೆ ಸಮಾಜವಾದಿ ಪ್ರಭುತ್ವದಲ್ಲಿ ಅದು ಕಾರ್ಮಿಕವರ್ಗದ ಪ್ರಯೋಜನಕ್ಕಾಗಿ, ಇನ್ನೂ ಬಲಿಷ್ಟವಾಗಿರುವ ಬೂರ್ಜ್ವಾ ವರ್ಗವನ್ನು ಎದುರಿಸಲು ಮತ್ತು ಅದರ ವಿರುದ್ಧ ಹೋರಾಡಲು ವಿದೇಶಿ ಬೂರ್ಜ್ವಾಗಳಿಗೆ, ವಿದೇಶಿ ಬಂಡವಾಳಕ್ಕೆ ರಿಯಾಯ್ತಿಗಳನ್ನು ನೀಡಬೇಕು ಎಂದು ಬೇರೆ ಹೇಳಬೇಕಾಗಿಲ್ಲ. ಸ್ವಲ್ಪವೂ ಅರಾಷ್ಟ್ರೀಕರಣ ಮಾಡದೆ ನಮ್ಮ ಗಣಿಗಳು, ಅರಣ್ಯಗಳು, ತೈಲ ಕ್ಷೇತ್ರಗಳನ್ನು ವಿದೇಶಿ ಬಂಡವಾಳಕ್ಕೆ, ಭೋಗ್ಯಕ್ಕೆ ಕೊಡಬೇಕು. ಪ್ರತಿಯಾಗಿ ಉತ್ಪಾದಿತ ಸರಕುಗಳು, ಯಂತ್ರ ಸಾಮಗ್ರಿಗಳು ಇತ್ಯಾದಿಗಳನ್ನು ಪಡೆಯಬೇಕು. ಹೀಗೆ ನಮ್ಮ ಉದ್ದಿಮೆಗಳನ್ನು ಮರು-ಸ್ಥಾಪಿಸಬೇಕು" ಎಂದು ಲೆನಿನ್ ಒಪ್ಪಿಕೊಂಡಿದ್ದರು. ಈಗ ಸುಧಾರಣೆ ಕೈಗೊಳ್ಳುತ್ತಿರುವ ದೇಶಗಳಿಗೆ ಇದರಲ್ಲಿರುವ ಅಪಾಯಗಳ ಅರಿವಿದೆ, ಅದನ್ನು ಮೀರಿ ನಿಲ್ಲುವ ಆತ್ಮವಿಶ್ವಾಸವೂ ಇದೆ.

ಚೀಣಾ ಉದಾಹರಣೆ ಒಂದು ಹೊಸ ಕೊಡುಗೆ ನೀಡಿದೆ. ಕಡಿಮೆ ಅಭಿವೃದ್ಧಿ ಹೊಂದಿದ ದೇಶವೊಂದರಲ್ಲಿ ಸಮಾಜವಾದಿ ರಚನೆ. ಮೂಲಭೂತ ನೀತಿಗಳಿಗೆ ಬದ್ಧವಾಗಿರುತ್ತಲೇ ಉತ್ಪಾದಕ ಶಕ್ತಿಗಳನ್ನು ಬೆಳೆಸುವ ಬಗ್ಗೆ ಅವರು ಒತ್ತು ನೀಡುತ್ತಿದ್ದಾರೆ. ಸುಧಾರಣೆಗಳು, ತೆರೆದುಕೊಳ್ಳುವುದು ಈ ಪ್ರಕ್ರಿಯೆಯ ಕೇಂದ್ರ ಅಂಶ. ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಚೀಣೀಯರು ಮಾವೋ ಝು ಡೆಂಗ್ ವಿಚಾರ-ಡೆಂಗ್ ಕ್ಸಿಯಾವೋ ಪಿಂಗ್ ಸಿದ್ಧಾಂತವನ್ನು


...ರಿದೀಪ

...ನುಸರಿಸಿದರೆ ಕೊರಿಯನ್ನರು ಜು ಚೆ ...ಚಾರವನ್ನು, ವಿಯೆಟ್ನಾಮಿಯರು ಹೊಚಿಮಿನ್ನ ...ನ್ನು ಅನುಸರಿಸುತ್ತಿವೆ. ಇದೇ ರೀತಿ ಇತರ ...ಮ್ಯುನಿಸ್ಟ್ ಪಕ್ಷಗಳಿಗೆ ತಮ್ಮದ್ದೇ ಮಾದರಿಗಳಿವೆ.

...ಂಡವಾಳಶಾಹಿ ಉತ್ತರವಲ್ಲ

...ಸಮಾಜವಾದ ನಿರ್ಗಮಿಸಿತು, ಕಮ್ಯುನಿಸಂ ...ತ್ತಿತು ಎಂದು 1991 ರ ಪ್ರಳಯಾಂತಕಾರಿ ...ಟನೆಗಳ ಜತೆಗೆ ಬಂದ ಪ್ರಚಾರದ ಅಬ್ಬರವನ್ನು ...ಗ ಯಾರೂ ನಂಬುತ್ತಿಲ್ಲ. ಬಂಡವಾಳಶಾಹಿ ...ಮಾನವಕುಲದ ಮೂಲಭೂತ ಸಮಸ್ಯೆಗಳಿಗೆ ...ಉತ್ತರವಲ್ಲ ಸೋವಿಯತ್ ಒಕ್ಕೂಟದ ...ಣತಂತ್ರಗಳು, ಪೂರ್ವ ಯುರೋಪಿನ ದೇಶಗಳ ...ನಗಳು ಅರಿಯುತ್ತಿದ್ದಾರೆ. ಇತರದೇಶಗಳಲ್ಲಿ ...ಮಾಜವಾದಿ ವ್ಯವಸ್ಥೆಯನ್ನು ಬುಡಮೇಲು ...ಮಾಡುವ ಸಾಮ್ರಾಜ್ಯಶಾಹಿ ಪ್ರಯತ್ನ ...ಫಲವಾಗಲಿಲ್ಲ. ಮಾನವಕುಲದ ಕಾಲು ಭಾಗ ...ಈಗಲೂ ಸಮಾಜವಾದಿ ದೇಶಗಳಲ್ಲಿ ...ಜೀವಿಸುತ್ತಿದೆ. ಒಂದೊಮ್ಮೆ ಅತ್ಯಂತ ಹಿಂದುಳಿದ ...ರ್ಥಿಕಗಳಾಗಿದ್ದವು ಇವು. ಅಮೆರಿಕಾದ ...ರಾವಳಿಯಿಂದ ಕೇವಲ 90 ಮೈಲುಗಳ ...ದೂರದಲ್ಲಿರುವ ಕ್ಯೂಬಾ ಅಸ್ಥಿರಗೊಳಿಸುವ ಎಲ್ಲಾ ...ಪ್ರಯತ್ನಗಳನ್ನು ವೀರಾವೇಶದಿಂದ ಎದುರಿಸಿ ...ಸೋಲಿಸಿದೆ. ನಾಲ್ಕು ದಶಕಗಳಲ್ಲಿ ಕಷ್ಟ-ನಷ್ಟಗಳ ...ಡುವೆಯೂ ವಿವಿಧ ವಿಮೋಚನಾ ...ಆಂದೋಲನಗಳಿಗೆ ನೆರವು ನೀಡಿದ ಈ ದೇಶದ ...ಪ್ರಭಾವ ಲ್ಯಾಟಿನ್ ಅಮೆರಿಕಾ, ಕೆರೆಬಿಯನ್ ...ದೇಶಗಳಿಗೆ ಮಾತ್ರವಲ್ಲ, ಆಫ್ರಿಕಾ ಖಂಡದ ಹಲವು ...ಭಾಗಗಳಿಗೂ ಹರಡಿದೆ.

...ಕಮ್ಯುನಿಸ್ಟ್ ವಿರೋಧಿಗಳ, ಪ್ರತಿಗಾಮಿಗಳ ...ದಾಳಿಗಳು ಎಷ್ಟೇ ತೀವ್ರವಾಗಿರಲಿ, ಈಗಲೂ ...ಮಹಾನ್ ಅಕ್ಟೋಬರ್ ಕ್ರಾಂತಿಯ, ಪ್ರಥಮ ...ಸಮಾಜವಾದಿ ಪ್ರಭುತ್ವದ ಮಹತ್ವವನ್ನು ಅಸಿಂಧು ...ಗೊಳಿಸುವ ಅವರ ಪ್ರಯತ್ನ ಸಫಲವಾಗುವುದಿಲ್ಲ. ...ಅಕ್ಟೋಬರ್ ಕ್ರಾಂತಿ ತೋರಿದ ದಾರಿದೀಪ ...ಮುಂದೆಯೂ ವಿಶ್ವಾದ್ಯಂತ ಕ್ರಾಂತಿಕಾರಿ ಶಕ್ತಿಗಳಿಗೆ ...ಸ್ಫೂರ್ತಿ ನೀಡುತ್ತದೆ. ○



ಫ್ಯಾಸಿಸಂ ಮೇಲೆ ಅಮೋಘ ವಿಜಯ

ಸಮಾಜವಾದವೇ ಭವಿಷ್ಯ



ಸೀತಾರಾಂ ಯೆಚೂರಿ

ಸೋವಿಯತ್ ಒಕ್ಕೂಟವನ್ನು ಅಧಿಕೃತವಾಗಿ ಡಿಸೆಂಬರ್ 21, 1991 ರಂದು ವಿಸರ್ಜಿಸಲಾಯಿತು. ಅದಕ್ಕೆ ಮೊದಲು ಗೋರ್ಬಚೆವ್ ಆಗಸ್ಟ್ 24, 1991 ರಂದು ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷವನ್ನು ವಿಸರ್ಜಿಸಿ ಸಾಮ್ರಾಜ್ಯಶಾಹಿ ವಿರುದ್ಧ ಬೃಹತ್ ಕೊತ್ತಳವಾಗಿದ್ದ ಈ ಸೋವಿಯತ್ ಒಕ್ಕೂಟದ ವಿಸರ್ಜನೆಗೆ ಹಾಗೂ ಸಮಾಜವಾದದ ವಿಘಟನೆಗೆ ಹಾದಿ ಮಾಡಿಕೊಟ್ಟಿದ್ದರು.

ಅದರ ನಂತರ ಸಮಾಜವಾದ, ಕಮ್ಯುನಿಸಂ ಮೇಲೆ ಸೈದ್ಧಾಂತಿಕ ಧಾಳಿಗಳ ಅಬ್ಬರ ತಾರಕಕ್ಕೇರಿತು. 'ಸಿದ್ಧಾಂತದ ಅಂತ್ಯ', 'ಇತಿಹಾಸದ ಅಂತ್ಯ' ಎಂಬೆಲ್ಲಾ ಸಿದ್ಧಾಂತಗಳು ಪ್ರಚಾರಕ್ಕೆ ಬಂದವು. ಬಂಡವಾಳಶಾಹಿ ಶಾಶ್ವತ ಎಂದು ಸಾರಲಾಯಿತು.ಅದಕ್ಕೆ ಕೊಟ್ಟ ಆಧಾರಗಳು ನಾಲ್ಕು -

- ಸಂಘರ್ಷಣೆಯ ಮತ್ತು ಬಹಳ ಖರ್ಚುದಾಯಕವಾದ ಎರಡು ಧ್ರುವಗಳ ಶೀತಲ ಸಮರದ ಸ್ಥಿತಿ ಈಗ ಇಲ್ಲದಿರುವುದರಿಂದ ಜಗತ್ತು ಇಡೀ ಮಾನವಕುಲಕ್ಕೆ ಪ್ರಯೋಜನಕಾರಿಯಾದ ಶಾಂತಿಯುತ ಸಮೃದ್ಧಿಯ ಯುಗದತ್ತ ಚಲಿಸುತ್ತದೆ.
- ವಿಶ್ವ ಬಂಡವಾಳಶಾಹಿ ಸ್ಥಿರತೆ ಮತ್ತು ಬೆಳವಣಿಗೆಯಿಂದ ತ್ವರಿತವಾಗಿ ಮುನ್ನಡೆಯುತ್ತದೆ.
- ಹಿಂದಿನ ಸಮಾಜವಾದಿ ದೇಶಗಳು ಈಗ ತ್ವರಿತ ಆರ್ಥಿಕ ಪುನಶ್ಚೇತನ ಪಡೆಯುತ್ತವೆ.
- ಬಂಡವಾಳಶಾಹಿಗೆ ಪರ್ಯಾಯವಿಲ್ಲದ್ದರಿಂದ ಎಡ ಮತ್ತು ಕಮ್ಯುನಿಸ್ಟ್ ಆಂದೋಲನಕ್ಕೆ ಭವಿಷ್ಯವಿಲ್ಲ.

ಈಗ ಪೂರ್ಣ ಒಂದು ದಶಕ ಕಳೆದ ನಂತರ ಇವನ್ನೆಲ್ಲಾ ಪರೀಕ್ಷಿಸಿದರೆ ಕಾಣುವುದೇನು?

ಭ್ರಮನಿರಸನ


ಸಾಮ್ರಾಜ್ಯಶಾಹಿಗಳ ಪ್ರಚಾರಕರು ಬಡಿದೆಬ್ಬಿಸಿದ ಭ್ರಮೆಗಳಿಗೆ ವ್ಯತಿರಿಕ್ತವಾಗಿ ವಿಶ್ವದ ಬಹುಪಾಲು ಜನಗಳ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. 2001 ರ ಮಾನವ ಅಭಿವೃದ್ಧಿ ವರದಿಯ ಪ್ರಕಾರ ವಿಶ್ವದ ಶೇ 10 ಅತಿ ಬಡವರ ಆದಾಯ ಅತಿ ಶ್ರೀಮಂತರ ಶೇ 10 ವಿಭಾಗದ ಆದಾಯದ ಶೇ. 1.6 ಮಾತ್ರ. ಅಮೆರಿಕಾದ ಶ್ರೀಮಂತ ಶೇ 10 ವಿಭಾಗ (2.5 ಕೋಟಿ ಜನರ) ಒಟ್ಟು ಆದಾಯ ವಿಶ್ವದ ಇತರ 2000 ಕೋಟಿಜನಗಳ ಆದಾಯಕ್ಕಿಂತ ಹೆಚ್ಚು. ವಿಶ್ವದ 20 ದೇಶಗಳ ಮಾನವ ಅಭಿವೃದ್ಧಿ ಸೂಚ್ಯಂಕ ಹೆಚ್ಚುವ ಬದಲು 1995 ರಲ್ಲಿ ಇದ್ದುದಕ್ಕಿಂತ ಕಡಿಮೆಯಾಗಿದೆ. ಅವುಗಳಲ್ಲಿ 10 ದೇಶಗಳ ಸೂಚ್ಯಂಕವಂತೂ 1985 ಕ್ಕಿಂತಲೂ ಕಡಿಮೆಯಾಗಿದೆ. ಶೀತಲ ಸಮರ ಮುಗಿದುದರಿಂದ ಮಿಲಿಟರಿ ಖರ್ಚು ಕಮ್ಮಿಯಾಗಬಹುದೆಂಬ ನಿರೀಕ್ಷೆಯೂ ಹುಸಿಯಾಗಿದೆ. ಸೆಪ್ಟೆಂಬರ್ 11, 2001 ರ ಘಟನೆಯ ನಂತರ ಭಯೋತ್ಪಾದಕತೆಯನ್ನು ಎದುರಿಸುವ ಹೆಸರಲ್ಲಿ ಅದು ಇನ್ನಷ್ಟು ಹೆಚ್ಚಿಸಿದೆ. ಅಮೆರಿಕಾದ 2002 ರ ರಕ್ಷಣಾ ಬಜೆಟ್ ಹಿಂದಿನ ವರ್ಷಕ್ಕಿಂತ 3300 ಕೋಟಿ ಡಾಲರುಗಳಷ್ಟು (ಅಂದರೆ 16,000 ಕೋಟಿ ರೂ.ಗಳಷ್ಟು) ಹೆಚ್ಚು. 2003 ರಲ್ಲಿ ಇನ್ನೂ 4,800 ಕೋಟಿ ಡಾಲರುಗಳಷ್ಟು ಹೆಚ್ಚುತ್ತದಂತೆ. ಇದು ಈ ಎರಡು ದಶಕಗಳಲ್ಲೇ ಅಮೆರಿಕಾದ ಅತಿದೊಡ್ಡ ಮಿಲಿಟರಿ ವೆಚ್ಚ. ಇದೀಗ ಶಾಂತಿಯುತ ಸಮೃದ್ಧಿ!

ವಿಶ್ವ ಬಂಡವಾಳ ಶಾಹಿಯ ತ್ವರಿತ ಅಭಿವೃದ್ಧಿಯ ಬಲೂನು ಕೂಡಾ ಒಡೆದಿದೆ. ಮಾನವಕುಲದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಅದಕ್ಕಿಲ್ಲ, ಬದಲಾಗಿ ತನ್ನ ಲಾಭದ ಕೊಳ್ಳೆಯಿಂದ ಅದು ನಿಷ್ಕರುಣೆಯಿಂದ ನಾಗರಿಕತೆಯನ್ನು ಅಮಾನವೀಯಗೊಳಿಸುವ ವ್ಯವಸ್ಥೆ ಎಂದು ಮತ್ತೊಮ್ಮೆ ತೋರಿಸಿಕೊಟ್ಟಿದೆ. ಅದು ಬಿಕ್ಕಟ್ಟು ರಹಿತವಾಗಿರಲು ಸಾಧ್ಯವಿಲ್ಲ ಎಂಬುದೂ ಮತ್ತೆ ಸಾಬೀತಾಗುತ್ತಿದೆ. ಜಾಗತೀಕರಣದ ಪ್ರಸಕ್ತ ಘಟ್ಟದಲ್ಲಿ ಅದು ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಮರು ವಸಾಹತೀಕರಣದ ಪ್ರಯತ್ನ ನಡೆಸುತ್ತಿದೆ. ಅತ್ತ ವಿಶ್ವದ 30 ಶ್ರೀಮಂತ ದೇಶಗಳ ಆರ್ಥಿಕ ಅಭಿವೃದ್ಧಿ ದರ 2002 ರಲ್ಲಿ ಕೇವಲ 1.2 ಶೇ. ಇರುತ್ತದೆ ಎಂದು ಹೇಳಲಾಗುತ್ತಿದೆ. ಆರ್ಥಿಕ ಹಿಂಜರಿತ, ದಿವಾಳಿಗಳು, ಶೇರು ಮಾರುಕಟ್ಟೆ ಕುಸಿತಗಳು ಅಲ್ಲಿ ಸಾಮಾನ್ಯವಾಗುತ್ತಿವೆ.

ಹಿಂದಿನ ಸಮಾಜವಾದಿ ದೇಶಗಳಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆ ಆರ್ಥಿಕ ಸಮೃದ್ಧಿ ತರುವುದಂತೂ ದೂರ. ಅವು 20ನೇ ಶತಮಾನದಲ್ಲಿ ಹಿಂದೆಂದೂ ಕಂಡು ಕೇಳರಿಯದಷ್ಟು ಬೃಹತ್ ಪ್ರಮಾಣದಲ್ಲಿ ಆರ್ಥಿಕ ಧ್ವಂಸವನ್ನು ಎದುರಿಸಬೇಕಾಗಿ ಬಂದಿದೆ. ಈ ದೇಶಗಳ ಜನಸಂಖ್ಯೆಯೇ ಇಳಿದಿದೆ. ಹಿಂದೆಂದೂ ಹೀಗಾಗಿರಲಿಲ್ಲ. ಸರಾಸರಿ ಬಡತನ ಕಳೆದ ದಶಕದಲ್ಲಿ ಶೇ 2 ರಿಂದ ಶೇ 21 ಕ್ಕೆ ಏರಿದೆ. ರಶ್ಯನ್ ಒಕ್ಕೂಟವೊಂದರಲ್ಲೇ ನಿರುದ್ಯೋಗಿಗಳ

ಪುಟ 10 ಕ್ಕೆ

ಅಮೆರಿಕಾದ ಸಾಮ್ರಾಜ್ಯದ ಕನಸು ಬಹಳ ದಿನ ಉಳಿಯದು



ಪ್ರಕಾಶ್ ಕಾರಟ್

1917 ರ ಅಕ್ಟೋಬರ್ ಕ್ರಾಂತಿ ನಡೆದು 85 ವರ್ಷಗಳು ಕಳೆದರೂ, ಸೋವಿಯತ್ ಪ್ರಭುತ್ವ ಈಗ ಅಸ್ತಿತ್ವದಲ್ಲಿ ಇಲ್ಲವಾದರೂ, ಆ ಚಾರಿತ್ರಿಕ ಘಟನೆಯನ್ನು ಹಳಿಯುವ ಕೆಲಸ ಇನ್ನೂ ನಿಂತಿಲ್ಲ. ನಮ್ಮ ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕವೂ ಆ ಸಾಲಿಗೆ ಸೇರಿದೆ. ಅಕ್ಟೋಬರ್ ಕ್ರಾಂತಿ ಲೆನಿನ್ ನೇತೃತ್ವದ ಒಂದು ಕ್ಷಿಪ್ರಕ್ರಾಂತಿ ಎಂದದು ಹೇಳುತ್ತದೆ. ಮಹಾನ್ ಘಟನೆಯನ್ನು ಬೊಲ್ಶೆವಿಕ್ ಪಿತೂರಿಯಷ್ಟೇ ಎಂಬ ಮಟ್ಟಕ್ಕಿಳಿಸುವ ಹಳೆಯ ಸಿದ್ಧಾಂತವೊಂದರ ಹೊಸ ರೂಪವಷ್ಟೇ. ಇವರೆಲ್ಲಾ ಹೇಳುವ ಹಾಗೆ ಕಮ್ಯುನಿಸಂನ್ನು ಸೋವಿಯತ್ ಒಕ್ಕೂಟದೊಂದಿಗೆ ಹೂತುಬಿಡಲಾಗಿದೆ ಎಂದಾದರೆ ಈಗಲೂ ಅಕ್ಟೋಬರ್ ಕ್ರಾಂತಿಯ ವಿರುದ್ಧ ಇಂತಹ ಪ್ರಯತ್ನಗಳೇಕೆ? ಇದಕ್ಕೆ ಉತ್ತರ ಸರಳ. ಈ ಪ್ರಥಮ ಬಂಡವಾಳಶಾಹಿ-ವಿರೋಧಿ ಕ್ರಾಂತಿ, ಸಮಾಜವಾದಕ್ಕೆ ದಾರಿ ತೆರೆದಿಟ್ಟ ಕ್ರಾಂತಿ ಈಗಲೂ ಅಷ್ಟೇ ಶಕ್ತಿಶಾಲಿಯಾಗಿದೆ. ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ವಿಶ್ವದಲ್ಲಿ ಅಧಿಪತ್ಯ ನಡೆಸುತ್ತಿರುವ ವರೆಗೂ ಅಷ್ಟೇ ಶಕ್ತಿಶಾಲಿಯಾಗಿರುತ್ತದೆ ಎಂಬುದೇ ಇದರ ಅರ್ಥ.

ಸೋವಿಯತ್ ಒಕ್ಕೂಟದ ಅಂತ್ಯ ಮತ್ತು ಸಮಾಜವಾದ ಅನುಭವಿಸಿದ ಕಷ್ಟಗಳು ಸಾಮ್ರಾಜ್ಯಶಾಹಿಯ ಒಂದು ಹೊಸ ಘಟ್ಟಕ್ಕೆ ದಾರಿ ಮಾಡಿಕೊಟ್ಟಿದೆ. ಅದೀಗ ಇನ್ನಷ್ಟು ದುಷ್ಟವಾಗಿದೆ, ಇನ್ನಷ್ಟು ಹೆಚ್ಚು ಅಧಿಪತ್ಯ ನಡೆಸಲು ಮುಂದಾಗಿದೆ. ವಿಶ್ವದ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಮತ್ತು ಹಣಕಾಸು ಬಂಡವಾಳದ ಅಧಿಪತ್ಯ ಇನ್ನಷ್ಟು ನಗ್ನ ಹಾಗೂ ಆಕ್ರಮಣಕಾರಿಯಾಗುತ್ತಿದೆ. ಸಾಮ್ರಾಜ್ಯಶಾಹಿಯ ಈಹೊಸ ಘಟ್ಟದ ಮುಖ್ಯ ಲಕ್ಷಣಗಳೆಂದರೆ -

- ಏಕೈಕ ಅಧಿನಾಯಕನಾದ ಅಮೆರಿಕಾದ ಅಧಿಪತ್ಯಕ್ಕೆ ಅನುಕೂಲ ವಾಗುವಂತೆ ವಿಶ್ವದ ಮರುವ್ಯವಸ್ಥೆ.
- ಅದರೊಂದಿಗ ಹೊಸದೊಂದು ಸಾಮ್ರಾಜ್ಯ ವ್ಯವಸ್ಥೆಯನ್ನು ಸ್ಥಾಪಿಸುವ ಬಗ್ಗೆ ಬಹಿರಂಗ ಹೇಳಿಕೆಗಳು ಮತ್ತು ಅದರ ಗುಣಗಾನ.
- ಅಮೆರಿಕಾ ಮತ್ತು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಗುರಿಗಳ ಸಾಧನೆಗೆ ವಿಶ್ವದ ಎಲ್ಲಾ ಭಾಗಗಳಲ್ಲಿ ಮಿಲಿಟರಿ ಶಕ್ತಿಯ ಅಭೂತಪೂರ್ವ ಬಳಕೆ

ಸೈದ್ಧಾಂತಿಕ ರಂಗದಲ್ಲಿ ಈಗ ಅಮೆರಿಕಾದ ಬಲಪಂಥೀಯ ಸಿದ್ಧಾಂತಿಗಳು ವಿಶೇಷವಾಗಿ ಸೆಪ್ಟೆಂಬರ್ 11,2002 ರ ಘಟನೆಯ ನಂತರ ಅಮೆರಿಕಾದ್ದು ಸಾಮ್ರಾಜ್ಯಶಾಹಿ ಪಾತ್ರ ಎಂದು ಯಾವುದೇ ನಾಚಿಕೆಯಿಲ್ಲದೆ ಹೇಳುತ್ತಿದ್ದಾರೆ. ವಿಶ್ವದ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿ ಕೂಡಾ ಅಮೆರಿಕಾದ ಸಾಮ್ರಾಜ್ಯದಿಂದ ಮಾತ್ರ ಸಾಧ್ಯ ಎಂದು ಬಹಿರಂಗವಾಗಿಯೇ ಅವರು ಹೇಳುತ್ತಿದ್ದಾರೆ. ಬ್ರಿಟನ್ನಿನ ಪ್ರಧಾನಿ ಟೋನಿ ಬ್ಲೇರ್ ಅನುಯಾಯಿಗಳೂ ಅದಕ್ಕೆ ದನಿಗೂಡಿಸುತ್ತಿದ್ದಾರೆ - ವಿಶ್ವದಲ್ಲಿ ಒಂದು ವ್ಯವಸ್ಥೆ ತರಲು ಮಾನವ ಹಕ್ಕುಗಳಿಗೆ, ವಿಶ್ವ ಮಾನವ ಮೌಲ್ಯಗಳಿಗೆ ಸ್ವೀಕಾರ್ಯವಾದ ಒಂದು ಹೊಸ ಸಾಮ್ರಾಜ್ಯಶಾಹಿ ಬೇಕಂತೆ! ಇಂತವರು ಐಎಂಎಫ್, ವಿಶ್ವಬ್ಯಾಂಕುಗಳ ಪಾತ್ರವನ್ನು ಹಾಡಿ ಹೊಗಳುತ್ತಾರೆ! ಇರಾಕಿನಲ್ಲಿ ಆಡಳಿತ ಬದಲಾವಣೆಯಾಗಬೇಕೆಂಬ ಅಧ್ಯಕ್ಷ ಬುಶ್‌ರ ಒತ್ತಾಯ ಭವಿಷ್ಯದಲ್ಲಿ ಈ ಹೊಸ ಸಾಮ್ರಾಜ್ಯ ವ್ಯವಸ್ಥೆಗೆ ಒಗ್ಗಿಕೊಳ್ಳದ ಸಾರ್ವಭೌಮ ದೇಶಗಳಿಗೆ ಏನು ಕಾದಿದೆಯೆಂಬುದರ ಸೂಚನೆ.

ಇನ್ನೂ ಮಿಲಿಟರಿ ಶಕ್ತಿಯ ಬಳಕೆಯ ಬಗ್ಗೆ ಹೇಳಬೇಕಾದರೆ, ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಅಮೆರಿಕಾದ ಮಿಲಿಟರಿ ಶಕ್ತಿಯ ಬಳಕೆ ತ್ವರಿತವಾಗಿ ಹೆಚ್ಚಿರುವುದನ್ನು, ವಿಸ್ತಾರಗೊಂಡಿರುವುದನ್ನು ನಾವು ಕಾಣುತ್ತಿದ್ದೇವೆ. 1991 ರಲ್ಲಿ ಇರಾಕ್, ನಂತರ ಯುಗೋಸ್ಲಾವಿಯಾ, ನಂತರ ಮತ್ತೆ ಇರಾಕ್, ಸೆಪ್ಟೆಂಬರ್ 11 ರ ಘಟನೆಯ ನಂತರ ಅಫಘಾನಿಸ್ತಾನದಿಂದ ಆರಂಭವಾದ 'ಅನಂತ ಯುದ್ಧ' ಮುಂದುವರೆಯುತ್ತಲೇ ಇದೆ.ಇರಾಕ್ ಮುಂದಿನ ಗುರಿ.

ಚಿತ್ರದ ಇನ್ನೊಂದು ಮಗ್ಗಲು

ಹೀಗೆ ಕಳೆದ ಒಂದು ದಶಕದಲ್ಲಿ ಸಣ್ಣ ಪ್ರಭುತ್ವಗಳ ಮೇಲೆ ಮಿಲಿಟರಿ ಪ್ರಹಾರ, ಅಮೆರಿಕಾಕ್ಕೆ ಸರಿಬರದ ಸರಕಾರಗಳ, ವ್ಯವಸ್ಥೆಗಳ ಬದಲಾವಣೆಗೆ ಹಸ್ತಕ್ಷೇಪ, ಎಲ್ಲಾ ಅಂತರ್‍ರಾಷ್ಟ್ರೀಯ ನೀತಿ-ನಿಯಮಗಳು, ವೇದಿಕೆಗಳನ್ನು ಏಕಪಕ್ಷೀಯವಾಗಿ ಬದಿಗೊತ್ತುವುದು ಇವೆಲ್ಲಾ ಕೆಲವ

ಪುಟ 10 ಕ್ಕೆ

"ಭಾರತವನ್ನು ಅದು ಎದುರಿಸುತ್ತಿರುವ ಹಲವು ಅಪಾಯಗಳಿಂದ ಉಳಿಸಬೇಕಾಗಿದೆ. ಉಳಿಸಲು ಸಾಧ್ಯ. ಬೆಳೆಸಬೇಕು ಎಂಬ ಹುಮ್ಮಸ್ಸು, ಆಶಾಭಾವನೆ ಇದೆ ಇಲ್ಲಿ. ಇದೇ ನನ್ನನ್ನು ಈ ವಿಚಾರ ಸಂಕಿರಣಕ್ಕೆ ಬರಲು ಉತ್ಸಾಹ ತುಂಬಿತು" ಎಂದು ಹೇಳಿದರೊಬ್ಬರು. ಇದು ಕೇಳಿಬಂದದ್ದು ನವೆಂಬರ್ 9-10 ರಂದು ಬೆಂಗಳೂರಿನಲ್ಲಿ 'ಭಾರತ ಉಳಿಸಿ ಸಮಿತಿ' ಹಮ್ಮಿಕೊಂಡಿದ್ದ ಕೋಮುವಾದಿ ಕೈಗಾರಿಕಾ ಕೃಷಿ ಬಿಕ್ಕಟ್ಟು ವಿದ್ಯುತ್ ಸುಧಾರಣೆಗಳ ಬಗೆಗಿನ ವಿಚಾರ ಸಂಕಿರಣದಲ್ಲಿ. ಈ ರೀತಿ ಹೇಳಿದ್ದು ಬಂದ ಕೇಳುಗರಲ್ಲಿ ಒಬ್ಬರಲ್ಲ. ಕೋಮುವಾದದ ಮೇಲಿನ ವಿಚಾರ ಸಂಕಿರಣದ ಆಶಯ ಭಾಷಣ ಮಾಡಿದ ಪ್ರಸಿದ್ಧ ಸಮಾಜವಿಜ್ಞಾನಿ ಪ್ರೊ| ಕೆ.ಎಸ್. ಪಣಿಕ್ಕರ್ ಹೇಳಿದ್ದು. ಎರಡು ದಿನವೂ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಸೆನೆಟ್ ಹಾಲ್ ತುಂಬಿ ತುಳುಕುತ್ತಿತ್ತು. ಎಲ್ಲಾ ತಜ್ಞರನ್ನು ಆಸಕ್ತಿಯಿಂದ ಆಲಿಸಿದರು. ಬಿಸಿ ಬಿಸಿ ಚರ್ಚೆ ನಡೆಯಿತು. ಕಾರ್ಮಿಕರು, ರೈತರು, ಉದ್ಯಮವರ್ಗದವರು, ಬುದ್ಧಿಜೀವಿಗಳು, ಪತ್ರಕರ್ತರು, ಸಾಮಾಜಿಕ ರಾಜಕೀಯ ಕಾರ್ಯಕರ್ತರು, ರಾಜಕಾರಣಿಗಳು, ವಿಜ್ಞಾನಿಗಳು ಹೀಗೆ ಸಮಾಜದ ಎಲ್ಲಾ ವಿಭಾಗಗಳ ಪ್ರಜ್ಞಾವಂತರನ್ನು ವಿಚಾರ ಸಂಕಿರಣ ಆಕರ್ಷಿಸಿತ್ತು. ಗಂಭೀರ ವಿಚಾರಸಂಕಿರಣಗಳಲ್ಲಿ ಸಾಮಾನ್ಯವಾಗಿಯೇ ಬೆರಳೆಣಿಕೆಯಷ್ಟು ಜನ ಇರುವ ಪರಿಸ್ಥಿತಿ ಬದಲು, ಪ್ರಜ್ಞಾವಂತರು ಇಷ್ಟು ಸಂಖ್ಯೆಯಲ್ಲಿ ಬಂದಿದ್ದರ ಬಗ್ಗೆ ಮೆಚ್ಚುಗೆ, ಆಶ್ಚರ್ಯ ವ್ಯಕ್ತಪಡಿಸಿದವರು ನ್ಯಾಯಮೂರ್ತಿ ಬಾಲಕೃಷ್ಣ. ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಅವರು. ಈ ಎರಡು ಮಾತುಗಳು ವಿಚಾರ ಸಂಕಿರಣದ ಅದ್ಭುತ ಯಶಸ್ಸಿನ ಬಗ್ಗೆ ಹೇಳುತ್ತವೆ.

ಜಾಗತೀಕರಣದ ತ್ರಿಮೂರ್ತಿ - ತ್ರಿಶೂಲಗಳಿಂದ ಅಪಾಯ

ಯಶಸ್ವಿಯಾಗಿ ಬಿಂಬಿಸಿದ 'ಭಾರತ ಉಳಿಸಿ ಸಮಿತಿ' ರಾಷ್ಟ್ರೀಯ ವಿಚಾರಸಂಕಿರಣ

ಶರತ್‌ಚಂದ್ರ

ಆಳುವವರ ಅನರ್ಥಕಾರಿ ಬೆಳವಣಿಗೆ ಹಾದಿ

ಕೋಮುವಾದ, ಕೈಗಾರಿಕಾ ಕೃಷಿ ಬಿಕ್ಕಟ್ಟು, ವಿದ್ಯುತ್ ಸುಧಾರಣೆಗಳು ಇವುಗಳಿಗೆ ಎತ್ತಣ ಸಂಬಂಧ? ಇವೆಲ್ಲಾ ಒಂದೇ ವಿಚಾರ ಸಂಕಿರಣದಲ್ಲಿ ಹೇಗೆ ಇರಲು ಸಾಧ್ಯ? ಎಂದು ಆಶ್ಚರ್ಯಪಟ್ಟವರಿಗೆ ಉದ್ಘಾಟನಾ ಸಮಾರಂಭದಲ್ಲಿ ಉತ್ತರ ಸಿಕ್ಕತು. ವಿಚಾರ ಸಂಕಿರಣದ 'ಸ್ಟಾರ್ ಆಕರ್ಷಣೆ' ಆಗಿದ್ದ ಸಿಪಿಐ(ಎಂ) ನಾಯಕ ಸೀತಾರಾಮ ಯೆಚೂರಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಇದನ್ನೇ ವಿವರಿಸಿದ್ದು. ಭಾರತ ಸ್ವತಂತ್ರವಾದಾಗ ಆಯ್ಕೆ ಮಾಡಿದ ಬೆಳವಣಿಗೆ ಪಥದ ವೈರುಧ್ಯಗಳೇ ನಮ್ಮ ದೇಶ ಇಂದು ಎದುರಿಸುತ್ತಿರುವ ಎಲ್ಲಾ ಅಪಾಯಗಳ ಮೂಲ. ನಮ್ಮನ್ನು ಆಳುವವರು ಆರಿಸಿದ, ದೇಶದ ಜನತೆಯ ಮೇಲೆ ಹೊರಿಸಿದ ಈ ಬೆಳವಣಿಗೆ ಪಥದ ಬಗ್ಗೆ ಅವರು ವಿವರಿಸಿದರು. ಪಾಳೆಯಗಾರಿ ವ್ಯವಸ್ಥೆ ನಾಶಮಾಡದೆ, ಅದರ ಬದಲು ಜಮೀನುದಾರರಿಗೆ ಕುಮ್ಮಕ್ಕು ಕೊಡುತ್ತಾ ಬಂಡವಾಳಶಾಹಿ ಪದ್ಧತಿಯ ಮೂಲಕ ಬೆಳವಣಿಗೆ ಸಾಧಿಸುವ ಹಾದಿಯನ್ನು ನಮ್ಮ ಆಳುವವರು ಸ್ವಾತಂತ್ರ್ಯ ಬಂದಾಗ ಆರಿಸಿಕೊಂಡರು. ಮೊದಲ ಮೂರು ಮೂರುವರೆ ದಶಕಗಳ ಕಾಲ ಆಂತರಿಕ ಮಾರುಕಟ್ಟೆ ಬೆಳೆಯದಿರುವುದು ಬೆಳವಣಿಗೆಗೆ ದೊಡ್ಡ ತೊಡಕಾಯಿತು. ತೀವ್ರ ಬಿಕ್ಕಟ್ಟಿಗೆ ಹಾದಿ ಮಾಡಿಕೊಟ್ಟಿತು. ಇದನ್ನು ಪರಿಹರಿಸಲು ನಮ್ಮ ಆಳುವವರು ಆಂತರಿಕ ಮಾರುಕಟ್ಟೆ ಬೆಳೆಸುವ ಕ್ರಮದ ಬದಲು, 'ರಫ್ತು-ಆಧಾರಿತ ಆರ್ಥಿಕ'ದ 'ಸುಲಭ' (ಅವರಿಗೆ)ದ ಹಾದಿ ಹಿಡಿದರು. ಈ ಹಾದಿ ಹಿಡಿಯಲು ಬೇಕಾದ ತಂತ್ರಜ್ಞಾನ ಆಮದು ಮತ್ತು ಬಂಡವಾಳಕ್ಕಾಗಿ ವಿದೇಶಿ ಸಾಲಕ್ಕೆ ಐ.ಎಂ.ಎಫ್ ಮೊರೆ ಹೊಕ್ಕಿತು. ಐ.ಎಂ.ಎಫ್ ಸಾಲಕ್ಕೆ ಪದಕ್ಕಾಗಿ ಜಾಗತೀಕರಣ - ಖಾಸಗೀಕರಣ - ಉದಾರೀಕರಣ ನೀತಿಗಳನ್ನು ಹೇರಿತು. ಕಳೆದ ಹತ್ತು ವರ್ಷಗಳು ಉಲ್ಬಣಗೊಂಡಿರುವ ಸಮಸ್ಯೆಗಳು, ಕೈಗಾರಿಕಾ ಕೃಷಿ ಬಿಕ್ಕಟ್ಟು ಈ ನೀತಿಗಳ ನೇರ ಫಲ. ವಿದ್ಯುತ್ ಸುಧಾರಣೆಗಳೂ, ಅದರಿಂದ ಉಂಟಾಗಿರುವ ಬಿಕ್ಕಟ್ಟು ಕೂಡಾ.

ಕೋಮುವಾದಿ ಫ್ಯಾಸಿಸಂ ಅಪಾಯ

ಪಾಳೆಯಗಾರಿ ವ್ಯವಸ್ಥೆ ಆಮೂಲಾಗ್ರವಾಗಿ ನಾಶಮಾಡದೆ, ಬಂಡವಾಳಶಾಹಿ ವ್ಯವಸ್ಥೆ ಬೆಳೆಸುವ ಅದೇ ಅನರ್ಥಕಾರಿ ಹಾದಿ ಜಾತಿ-ಧರ್ಮಗಳ ಮೇಲೆ ಆಧಾರಿತ ಸಂಘರ್ಷ ತೀವ್ರವಾಗಲೂ ಕಾರಣ. ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದ್ದು ಅದರ ಪರಿಣಾಮವಾಗಿ ಸೈದ್ಧಾಂತಿಕ ಬಿಕ್ಕಟ್ಟು ತೀವ್ರವಾಗುತ್ತಿದೆ. ಅನರ್ಥಕಾರಿ ಬೆಳವಣಿಗೆ ಹಾದಿ ಹಿಡಿದ ಆಳುವ ವರ್ಗಗಳಿಗೆ ಅತ್ಯಂತ ಪ್ರತಿಗಾಮೀ ಕೋಮುವಾದಿ ಸಿದ್ಧಾಂತದ ಮೂಲಕ ಜನರನ್ನು ಪೂರ್ಣ ದಾಂಗೆಡಿಸುವುದು ಉಳಿದಿರುವ ಒಂದೇ ಹಾದಿ. ಆರ್ಥಿಕ ಬಿಕ್ಕಟ್ಟಿನಿಂದ ಕಂಗೆಟ್ಟ ಜನತೆ ಸಹ ಈ ಸಿದ್ಧಾಂತಕ್ಕೆ ಬಲಿಬೀಳುವ ಸಾಧ್ಯತೆ ಹಿಂದೆಂದಿಗಿಂತಲೂ ಹೆಚ್ಚಿದೆ. ಸ್ವಾತಂತ್ರ್ಯಪೂರ್ವದಲ್ಲೇ ಗೋಚರಿಸಿದ ಮೂರು ಸಿದ್ಧಾಂತಗಳ ನಡುವಣ ಸಂಘರ್ಷ ತೀವ್ರಗೊಂಡಿದೆ. ಒಂದು ರಾಜಕೀಯ ಸ್ವಾತಂತ್ರ್ಯಕ್ಕೆ ಸೀಮಿತಗೊಳ್ಳುವ ಕಾಂಗ್ರೆಸ್ ಸಿದ್ಧಾಂತ. ಇನ್ನೊಂದು ರಾಜಕೀಯ ಸ್ವಾತಂತ್ರ್ಯದ ಮಿತಿ ಆರ್ಥಿಕ ಸ್ವಾತಂತ್ರ್ಯದತ್ತ ಸಾಗುವ ಎಡ-ಪ್ರಗತಿಪರ ಸಿದ್ಧಾಂತ, ಮೂರನೇಯದು ಹಿಂದೂ ರಾಷ್ಟ್ರ ಸ್ಥಾಪನೆಯ ಸಿದ್ಧಾಂತ. 1930ರ ದಶಕದಿಂದ ಹಿಂದೂ ರಾಷ್ಟ್ರ ಸಿದ್ಧಾಂತ ಬೆಳೆದು ಬಂದ ಬಗೆಯನ್ನು ವಿವರವಾಗಿ ತಿಳಿಸಿದ ಯೆಚೂರಿ, ಈಗ ಅದಕ್ಕೆ ವ್ಯಾಪಕ ಬೆಂಬಲ ಸಿಗಲು ಕಾರಣ ವ್ಯಾಪಕ ಆರ್ಥಿಕ ಬಿಕ್ಕಟ್ಟು ಎಂದರು.

ಈಗ ಪೆಡಂಭೂತವಾಗಿ ದೇಶದ ಮುಂದಿರುವ ಅಪಾಯಗಳಾದ ಕೋಮುವಾದಿ ಫ್ಯಾಸಿಸಂ ಮತ್ತು ಆರ್ಥಿಕ ಬಿಕ್ಕಟ್ಟು ನಿವಾರಿಸಲು, ಆಳುವ ವರ್ಗಗಳು ಅನುಸರಿಸುವ ಬೆಳವಣಿಗೆ ಹಾದಿ ಬದಲಾಯಿಸದೆ ಬೇರೆ ದಾರಿ ಇಲ್ಲ. ಪಾಳೆಯಗಾರಿ ವ್ಯವಸ್ಥೆ ನಾಶಮಾಡುವುದು ಈ ಎರಡೂ ಅಪಾಯ ನಿವಾರಿಸಲು ಅಗತ್ಯ ಕಾರ್ಯಕ್ರಮ ಎಂದರು.


ಡಾ.ಎಸ್.ಚಟರ್ಜಿ, ಸೀತಾರಾಂ ಯೆಚೂರಿ, ಜಸ್ಟೀಸ್ ಬಾಲಕೃಷ್ಣ

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನ್ಯಾಯಮೂರ್ತಿ ಬಾಲಕೃಷ್ಣ ಸಂವಿಧಾನದಲ್ಲಿ ನಮ್ಮ ದೇಶದ ಜನತೆ ಗುರುತಿಸಿಕೊಂಡ ಎಲ್ಲಾ ಆಶಯಗಳನ್ನು ಮೂಲೆಗೆ ತಳ್ಳಿ, ಉಲ್ಲಂಘಿಸಲಾಗುತ್ತಿದೆ. ಕೋಮುವಾದಿ ಶಕ್ತಿಗಳು ಜಾತ್ಯಾತೀತತೆಗೆ ಮಾತ್ರವಲ್ಲ ಪ್ರಜಾಪ್ರಭುತ್ವ ಮತ್ತು ಸಮಾನತೆಯ ಇತರ ಆಶಯಗಳಿಗೂ ತೀವ್ರ ಅಪಾಯ ಒಡ್ಡಿದ್ದಾರೆ ಎಂದರು.


ಸಾಮಾಜಿಕ ಸಾಂಸ್ಕೃತಿಕ ಮಧ್ಯಪ್ರವೇಶ ಕೋಮುವಾದ ವಿರುದ್ಧ ಹೋರಾಟ.

ಮೊದಲ ಅಧಿವೇಶನ ಜಾತ್ಯಾತೀತತೆ ಹಾಗೂ ಕೋಮುವಾದದ ಸ್ವರೂಪದ ಬಗ್ಗೆ ಇತ್ತು. ಡಾ| ಚಟರ್ಜಿ ಅಧ್ಯಕ್ಷತೆ ವಹಿಸಿದ್ದು ವಿಖ್ಯಾತ ಸಮಾಜ ವಿಜ್ಞಾನಿ ಪ್ರೊ| ಕೆ.ಎನ್.ಪಣಿಕ್ಕರ್ ಆಶಯ ಭಾಷಣ ಮಾಡಿದರು. ನಮ್ಮ ದೇಶದಲ್ಲಿ ಕೊನೆಯ ಹಂತವಾದ ಫ್ಯಾಸಿಸಂನ ಹಿಂದಿನ ಹಂತದಲ್ಲಿ ಇರುವ ಕೋಮುವಾದ ಕಳೆದ ಎರಡು ಶತಮಾನಗಳಲ್ಲಿ ಬೆಳೆದು ಬಂದ ರೀತಿಯನ್ನೂ ಕೋಮುವಾದದ ಅರ್ಥೈಸುವಿಕೆಯ ಬಗ್ಗೆ ಇರುವ ವಿವಿಧ ದೃಷ್ಟಿಕೋನಗಳನ್ನು ವಿವರಿಸಿದರು. ಕೋಮುವಾದವನ್ನು ಬರಿಯ ರಾಜಕೀಯ ಪ್ರಕ್ರಿಯೆ ಅಥವಾ ಕೋಮುದಂಗೆಗಳ ರೀತಿ ಅಥವಾ ಹಿಂದೂ ಮುಸ್ಲಿಂ ಸಂಘರ್ಷವಾಗಿ ನೋಡುವುದು ತಪ್ಪು. ಕೋಮುವಾದದ ಬೇರುಗಳು 19ನೇ ಶತಮಾನದ ಪ್ರಾಚೀನ ಭಾರತದ 'ಪುನರುತ್ಥಾನ'ದತ್ತ ನಡೆದ ಹಲವು ಚಳುವಳಿಗಳಲ್ಲಿ ಇರುವುದನ್ನು ಕಾಣಬಹುದು. ಕೋಮುವಾದಿ ರಾಜಕೀಯ ಚಳುವಳಿಯ ಪರಾಕಾಷ್ಠೆ ಕಂಡ ಭಾರತ ವಿಭಜನೆ ನಂತರವೂ, ಕೋಮುವಾದ ಜೀವಂತವಾಗಿತ್ತು. ಆದರೆ 80ರ ದಶಕದವರೆಗೆ ಕೋಮುವಾದಿ ಆಧಾರದ ಮೇಲೆ ರಾಜಕೀಯ ನಡೆಸುವ ಪ್ರಯತ್ನಗಳಿಗೆ ಯಶಸ್ಸು ಸಿಗಲಿಲ್ಲ. ಆದರೆ 80ರ ದಶಕದ ನಂತರ ಇದಕ್ಕೆ ಯಶಸ್ಸು ಸಿಗುತ್ತಿದ್ದು, ಅಯೋಧ್ಯಾ ಚಳುವಳಿಯ ಜತೆ ಬೆಳೆಯಲಾರಂಭಿಸಿತು. 1992ರಲ್ಲಿ ಬಾಬ್ರಿ ಮಸೀದಿಯ ನಾಶದ ಜತೆಗೆ ಕೋಮುವಾದಿ ಫ್ಯಾಸಿಸಂನ ಹಂತದತ್ತ ನಡೆಯಿತು. ಗುಜರಾತಿನಲ್ಲಿ ಪ್ರಭುತ್ವ ನಿರ್ದೇಶಿತ ಅಲ್ಪಸಂಖ್ಯಾತರ ನರಮೇಧದೊಂದಿಗೆ ಫ್ಯಾಸಿಸಂನ ಹಿಂದಿನ ಹಂತ ತಲುಪಿದೆ. ಕೋಮುವಾದ ಸಿದ್ಧಾಂತದ ಹರಡುವಿಕೆ ನಿಧಾನವಾದ ಪ್ರಕ್ರಿಯೆಯಾಗಿದ್ದು, ಅದು ಕೋಮುವಾದಗಳ ಸತತ ಸಾಮಾಜಿಕ ಸಾಂಸ್ಕೃತಿಕ ಮಧ್ಯಪ್ರವೇಶದಿಂದ ಸಾಧ್ಯವಾಗಿತ್ತು. ಇದೇ ರೀತಿ ಜಾತ್ಯಾತೀತ ಸಿದ್ಧಾಂತ ಹರಡಲು ಕೂಡಾ, ಸತತ ಸಮಾಜಿಕ ಸಾಂಸ್ಕೃತಿಕ ಮಧ್ಯಪ್ರವೇಶದ, ಬಹುರೂಪಿ ಸಂಘಟನೆ, ಚಟುವಟಿಕೆಗಳ ಅಗತ್ಯ ಇದೆ. ಎಡ-ಪ್ರಗತಿಪರರು ನಡೆಸುತ್ತಿರುವ ಆರ್ಥಿಕ ರಾಜಕೀಯ ಹೋರಾಟ ಮತಪ್ರದರ್ಶನ ಇತ್ಯಾದಿ ಮಾತ್ರ ಸಾಲದು ಎಂದರು.

ಸಹಿಷ್ಣುತೆಯಿಂದ ಅಸಹನೆಯತ್ತ

ಕರ್ನಾಟಕದಲ್ಲಿ ಕೋಮುವಾದದ ಬೆಳವಣಿಗೆ ಬಗ್ಗೆ ಮಾತನಾಡಿದ ಡಾ| ಚಂದ್ರಶೇಖರ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಆಳ್ವಿಕೆ ಮೊದಲು ಧರ್ಮದ

→



ಮಾತನಾಡುತ್ತಿರುವವರು: ಡಾ. ಎಸ್.ಚಂದ್ರಖರ್, ಡಾ. ಚಟರ್ಜಿ, ಡಾ. ಎಲ್.ಹನುಮಂತಯ್ಯ ಮತ್ತು ಡಾ.ಕೆ.ಎನ್.ಫಣಿಕ್ಕರ್

ತ್ರಿಮೂರ್ತಿ - ತ್ರಿಶೂಲ

ಜಾಗತೀಕರಣದ ತ್ರಿಮೂರ್ತಿಗಳಾದ
ಐ.ಎಂ.ಎಫ್. ಡಬ್ಲ್ಯುಟಿಓ,
ವಿಶ್ವಬ್ಯಾಂಕ್ ಮತ್ತು ದೇಶದೊಳಗೆ
ತ್ರಿಶೂಲ ಎರಡೂ ಅಪಾಯಗಳು
ಜತೆಗೆ ಬಂದಿರುವುದು
ಕಾಕತಾಳೀಯವೇನಲ್ಲ. ತ್ರಿಮೂರ್ತಿ -
ತ್ರಿಶೂಲಗಳ ನಡುವೆ
ಗಳಸ್ಯ ಸಂಬಂಧ ಇದೆ.

- ಸೀತಾರಾಂ ಯೆಚೂರಿ

ಆಧಾರದ ಮೇಲೆ ಹಿಂಸಾಚಾರ ಇರಲಿಲ್ಲ. ಹೋಯ್ಸಳ, ರಾಷ್ಟ್ರಕೂಟ, ಬಹುಮನಿ / ಆದಿಲ್ ಶಾಹಿ, ವಿಜಯನಗರ, ಟಿಪ್ಪು ಇವರ್‍ಯಾರ ಆಳ್ವಿಕೆ ಸಹ ಮತೀಯ ಆಳ್ವಿಕೆಯಾಗಿರಲಿಲ್ಲ. ಧರ್ಮ ಸಹಿಷ್ಣುತೆ, ಸಹನೆ ಸಹಜವಾಗಿಯೇ ಇತ್ತು. ಕರ್ನಾಟಕದ ಚರಿತ್ರೆಯಲ್ಲಿ ಮತೀಯ ಸಾಮರಸ್ಯದ ಹಲವು ಉದಾಹರಣೆಗಳನ್ನು ಅವರು ನೀಡಿದರು. ಇತ್ತೀಚಿನ ದಿನಗಳಲ್ಲಿ ಉರ್ದುವಾರ್ತೆ, ಹುಬ್ಬಳ್ಳಿ ಈದ್ಗಾ ಮೈದಾನ, ಬಾಬಾ ಬುಡನ್‌ಗಿರಿ ಮುಂತಾದ ವಿವಾದಗಳನ್ನು ಸೃಷ್ಟಿಸಿ ಕೋಮುವಾದಿ ಶಕ್ತಿಗಳು ಮುನ್ನಡೆ ಸಾಧಿಸಲು ಪ್ರಯತ್ನಿಸುತ್ತಿವೆ. ಈವರೆಗೆ ಹೆಚ್ಚಿನ ಯಶಸ್ಸು ಸಿಗದಿದ್ದರೂ, ಈ ಅಪಾಯವನ್ನು ಕಡೆಗಣಿಸುವಂತಿಲ್ಲ ಎಂದರು.

ವರ್ಣಾಶ್ರಮ
ಗಟ್ಟಿ ಮಾಡುವ ಹುನ್ನಾರ

ಡಾ। ಹನುಮಂತಯ್ಯ 'ಜಾತಿಪದ್ಧತಿ ಮತ್ತು ಕೋಮುವಾದ' ದ ಬಗ್ಗೆ ಮಾತನಾಡಿದರು. ಕೋಮುವಾದಿ ಜಾತಿಪದ್ಧತಿಯನ್ನು ಅಲ್ಲಗೆಳೆದು, ಒಂದು ಹುಸಿ ಹಿಂದೂ-ಐಕ್ಯತೆ ತರಲು ಪ್ರಯತ್ನಿಸುತ್ತದೆ. ಅದರ ಮುಖ್ಯ ಉದ್ದೇಶ ವರ್ಣಾಶ್ರಮ ಪದ್ದತಿ ಆಧಾರಿತ ಅಸಮಾನ ಶ್ರೇಣೀಕೃತ ವ್ಯವಸ್ಥೆಯನ್ನು ಗಟ್ಟಿಮಾಡುವುದು. ಜಾತಿ ಪದ್ಧತಿ ವಿರುದ್ಧ ಹೋರಾಟವನ್ನು ಮುರಿಯಲು, ಅದು ಬಾಹ್ಯ ಶತ್ರುಗಳನ್ನು ಸೃಷ್ಟಿಸಲು (ಮುಸ್ಲಿಮರು, ಕ್ರಿಶ್ಚಿಯನ್ನರು) ಪ್ರಯತ್ನಿಸುತ್ತದೆ. ಹಿಂದೂ ಧರ್ಮದ ವೈವಿಧ್ಯಮಯ ಧಾರ್ಮಿಕ - ಸಾಮಾಜಿಕ ಆಚರಣೆಗಳನ್ನು ವಿಧಿ-ವಿಧಾನಗಳನ್ನು ಸಾರಾಸಗಟಾಗಿ ಗುಡಿಸಿ ಹಾಕಿ ಪುರೋಹಿತಶಾಹಿ ಆಚರಣೆಗಳನ್ನು ಹೇರಲು ಪ್ರಯತ್ನಿಸುತ್ತದೆ. ಇತ್ತೀಚಿನ ಸಂಘ-ಪರಿವಾರ ಹುಟ್ಟುಹಾಕಿರುವ ಕೋಮುಗಲಭೆಗಳ ಮುಂಚೂಣಿಯಲ್ಲಿ (ಅದರಲ್ಲೂ ಗುಜರಾತಿನಲ್ಲಿ) ಕೆಳಜಾತಿಗಳು ಮತ್ತು ದಲಿತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು, ಕೋಮುವಾದದ ಈ ರಣನೀತಿ ಸಫಲವಾಗುತ್ತಿರುವುದರ ಅಪಾಯ ತೋರಿಸುತ್ತದೆ. ಕೋಮುವಾದದ ಈ ಅಪಾಯವನ್ನು ಅರಿತು ಅದಕ್ಕೆ ತಕ್ಕ ಪ್ರತಿ ಕಾರ್ಯಕ್ರಮ ರೂಪಿಸಬೇಕು ಎಂದರು.

ವಿಜ್ಞಾನಿ ಡಾ। ಚಟರ್ಜಿ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ○

ಕೃಷಿ ಕೈಗಾರಿಕಾ ಬಿಕ್ಕಟ್ಟು

'ಕಣಜ ತುಂಬಿದೆ ಹೊಟ್ಟೆ ಹಸಿದಿದೆ'

'ಕೃಷಿ ಕೈಗಾರಿಕಾ ಬಿಕ್ಕಟ್ಟು' ಅದಿವೇಶನದ ಆಶಯ ಭಾಷಣವನ್ನು ದೆಹಲಿಯ ಜವಾಹರ ಲಾಲ್ ನೆಹರೂ ವಿಶ್ವವಿದ್ಯಾಲಯದ ಖ್ಯಾತ ಅರ್ಥಶಾಸ್ತ್ರ ತಜ್ಞೆ ಜಯತಿ ಘೋಷ್ ಮಾಡಿದರು. ಅವರ `markets that failed' (ಕೈಕೊಟ್ಟ ಮಾರ್ಕೆಟ್) ಎಂಬ ಪ್ರಸಿದ್ದ ಪುಸ್ತಕ ಇತ್ತೀಚೆಗೆ ಪ್ರಕಟವಾಗಿದೆ. ಅದರಲ್ಲಿ ಅವರು ಬರೆದಂತೆ ಆಶಯ ಭಾಷಣದಲ್ಲೂ ಕಳೆದ 10 ವರ್ಷಗಳಲ್ಲಿ ಅನುಸರಿಸಿದ ಜಾಗತೀಕರಣ - ಖಾಸಗೀಕರಣ - ಉದಾರೀಕರಣ ನೀತಿಗಳು ಕೃಷಿ ಮತ್ತು ಕೈಗಾರಿಕಾ ಬಿಕ್ಕಟ್ಟನ್ನು ಪರಿಹರಿಸಿಲ್ಲ. ಬದಲಾಗಿ ಉಲ್ಬಣಿಸಿವೆ. ಈಗಿನ ಬಿಕ್ಕಟ್ಟನ್ನು ಪರಿಹರಿಸಲು ಆ ನೀತಿಗಳನ್ನು ಸಮಗ್ರವಾಗಿ ತಿರಸ್ಕರಿಸಬೇಕು ಎಂದು ಕರೆಯಿತ್ತರು. ಕೃಷಿ ಮತ್ತು ಕೈಗಾರಿಕಾ ಎರಡೂ ಕ್ಷೇತ್ರಗಳಲ್ಲಿ ಇಂದಿನ ಪರಿಸ್ಥಿತಿ, ಬಿಕ್ಕಟ್ಟಿನ ಸ್ವರೂಪ, ಬಿಕ್ಕಟ್ಟಿಗೆ ಪ್ರತಿಕ್ರಿಯೆಯಾಗಿ ಸರ್ಕಾರ ಏನು ಮಾಡುತ್ತಿದೆ, ಏನು ಮಾಡಬಹುದು ಎಂದು ಅವರು ವಿವರಿಸಿದರು.

'ಕಣಜ ತುಂಬಿದೆ ಹೊಟ್ಟೆ ಹಸಿದಿದೆ'

ಕೃಷಿಯಲ್ಲಿ ಬಿಕ್ಕಟ್ಟಿಗೆ ಪ್ರತೀಕವಾಗಿ ಆರು ಕೋಟಿ ಟನ್ (ಅಗತ್ಯ ದಾಸ್ತಾನಿನ ನಾಲ್ಕು ಪಟ್ಟು) ಗೋಡೌನ್‌ನಲ್ಲಿ ಕೊಳೆಯುತ್ತಿ ರುವುದು ಒಂದು ಕಡೆ ಹಸಿವಿನಿಂದ ಸಾವು, ಆಹಾರದ ಕೊರತೆ ಇನ್ನೊಂದು ಕಡೆ- ಅದರತ್ತ ಅದರ ರಾಜಕೀಯ ಆರ್ಥಿಕದತ್ತ ಗಮನ ಸೆಳೆದರು. ಕೃಷಿ ಅಗತ್ಯ ಸಾಮಗ್ರಿಗಳ ಬೆಲೆ ದುಬಾರಿ, ಸಾಲ ದುಬಾರಿ - ದುರ್ಲಭವಾದದ್ದು, ಸಬ್ಸಿಡಿ ರಹಿತ, ಕೃಷಿ ಆಮದು ಸಡಿಲಿಸುವಿಕೆಯಿಂದ ಕೃಷಿ ಆಮದುಗಳ ಪೈಪೋಟಿ, ಕುಸಿಯುತ್ತಿರುವ ಕೃಷಿ ಉತ್ಪನ್ನ ಬೆಲೆಗಳು-ರೈತನನ್ನು ವಿನಾಶ - ಆತ್ಮಹತ್ಯೆಯತ್ತ ಒಯ್ಯುತ್ತಿರುವುದನ್ನು ನಿರರ್ಗಳ ಅಂಕಿಸಂಖ್ಯೆಯ ಮೂಲಕ ವಿವರಿಸಿದರು. ಗ್ರಾಮೀಣ ಪ್ರದೇಶದಲ್ಲಿ ಹಣ ಹೂಡಿಕೆ, ಮೂಲ ಸೌಕರ್ಯಗಳ ಅಭಾವ, ಉದ್ಯೋಗ ಹುಟ್ಟಿಸುವುದರಲ್ಲಿ ವೈಫಲ್ಯ- ಸರ್ಕಾರ ಒಟ್ಟಾರೆ ಆರ್ಥಿಕ ನೀತಿಗಳ ನೇರ ಫಲ ಒಟ್ಟಾರೆ ಕೃಷಿ ಉತ್ಪಾದನೆಯಲ್ಲಿ ಉತ್ಪಾದಕತೆಯಲ್ಲಿ ಇಳಿಕೆ, ರೈತರ ವಿನಾಶ ಆತ್ಮಹತ್ಯೆ-ಕೃಷಿ ಬಿಕ್ಕಟ್ಟಿನ ಸಾರಾಂಶ ಈ ಬಿಕ್ಕಟ್ಟು ಪರಿಹರಿಸುವ ಬದಲು, ಅದನ್ನು ಇನ್ನಷ್ಟು ಉಲ್ಬಣಿಸುವ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದರ ಬದಲು ತತ್‌ಕ್ಷಣ ಮಧ್ಯಗಾಮಿ - ದೂರಗಾಮಿ ಕ್ರಮಗಳನ್ನು ಕೈಗೊಳ್ಳಬಹುದು ಎಂದು ತಿಳಿಸಿದರು.

ಇದೇ ರೀತಿ ಕೈಗಾರಿಕಾ ಬಿಕ್ಕಟ್ಟಿನ ಅಂಶಗಳು, ಅದಕ್ಕೂ ಸರ್ಕಾರದ ನೀತಿಗಳಿಗೆ ಇರುವ ಸಂಬಂಧವನ್ನು ಅವರು ಮಾರ್ಮಿಕವಾಗಿ ತಿಳಿಸಿದರು. ಭಾರತದ ಕೈಗಾರಿಕೆಯ ಬೆನ್ನೆಲುಬಾಗಿದ್ದ ಸಣ್ಣ ಕೈಗಾರಿಕೆಯ ಉತೇತಜನದ ಎಲ್ಲಾ ಕ್ರಮಗಳನ್ನು ಕೈಬಿಟ್ಟಿರುವುದು, ಸಾರ್ವಜನಿಕ ಮೂಲ ಸೌಕರ್ಯ, ಸರ್ಕಾರದ ವೆಚ್ಚದಲ್ಲಿ ಕಂಡ ಕೈಗಾರಿಕಾ ಬಿಕ್ಕಟ್ಟಿಗೆ ಕಾರಣವಾದ ಮುಖ್ಯ ಕಾರಣಗಳು, 'ರಫ್ತು ಆಧಾರಿತ ಕೈಗಾರಿಕಾ ಬೆಳವಣಿಗೆ' ಮಾಹಿತಿ ತಂತ್ರಜ್ಞಾನದ ಅಪವಾದ ಬಿಟ್ಟರೆ ವಿಫಲವಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿನ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸುವ ಈಗಿನ ಸರ್ಕಾರದ ನೀತಿ ಬರಲು ಉತ್ತಮ ಆಹಾರಧಾನ್ಯ ಮತ್ತು ವಿದೇಶಿ ವಿನಿಮಯ ದಾಸ್ತಾನನ್ನು ಮೂಲರಚನೆಗೆ ಖರ್ಚುಮಾಡುವ, ಸರ್ಕಾರಿ ಖರ್ಚಿನ ಮೂಲಕ



ಡಾ. ಜಯತಿ ಘೋಷ್
ಪ್ರೊ. ಬಿಸಿಲಯ್ಯ

ಆರ್ಥಿಕ ವನ್ನು 'ಕಿಕ್ ಸ್ಟಾರ್ಟ್' ಮಾಡುವ ನೀತಿ ಅಂಗೀಕರಿಸಬೇಕು ಎಂದು ಅವರು ಕರೆ ನೀಡಿದರು.

ನಿಜವಾದ ಕೃಷಿ ಸುಧಾರಣೆಗಳಿಗೆ ಈಗಿನ ನೀತಿ ಬದಲಿಸಬೇಕು'

ಕೃಷಿ ಸುಧಾರಣೆಗಳ ಪರಿಣಾಮಗಳು ಎಂಬ ಬಗ್ಗೆ ಮಾತನಾಡಿದ ಡಾ। ಬಿಸಿಲಯ್ಯ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳು ಕೃಷಿ ಬೆಲೆಗಳ ಕಮೀಶನ್‌ನ ಅಧ್ಯಕ್ಷರು. ಆರ್ಥಿಕ ಸುಧಾರಣೆಗಳು ಮತ್ತು ಕೃಷಿಕ್ಷೇತ್ರದಲ್ಲಿ ಪರಿಣಾಮಗಳ ಬಗ್ಗೆ ಮಾತನಾಡುತ್ತಾ ಜಯತಿಘೋಷ್ ಅವರ ವಿಶ್ಲೇಷಣೆಯನ್ನು ಸಮರ್ಥಿಸಿದರು. ಸ್ವಾತಂತ್ರ್ಯಾನಂತರ ನಾಲ್ಕು ದಶಕಗಳಲ್ಲಿ ಕೃಷಿಯಲ್ಲಿ ಮಾಡಿದ ಸಾಧನೆಗಳನ್ನು (ಅವು ಎಷ್ಟು ಸೀಮಿತವಾಗಿದ್ದರೂ) ಕಳೆದ ಒಂದು ವರ್ಷದ ಸುಧಾರಣೆಗಳು ಅಳಿಸಿಹಾಕಿವೆ. ಕೃಷಿ ಉತ್ಪಾದನೆ, ಉತ್ಪಾದಕತೆ, ಭೂಮಿ ಒಡೆತನದ ವಿಕೇಂದ್ರೀಕರಣ, ಇತ್ಯಾದಿ ಎಲ್ಲದರಲ್ಲೂ ಹಿನ್ನಡೆ ಆಗಿದೆ ಎಂದರು. ಕೃಷಿಗೆ ಬೇಕಾದ ಸರಕುಗಳ ಬೆಲೆ ನಿಯಂತ್ರಣ, ಉತ್ಪಾದಕತೆ ಹೆಚ್ಚಿಸುವುದು, ಗುಣಮಟ್ಟ ಹೆಚ್ಚಿಸುವುದು, ಕೃಷಿಉತ್ಪನ್ನಗಳಿಗೆ ಉತ್ತೇಜಕ ಬೆಲೆ, ಗ್ರಾಮೀಣ ಕೈಗಾರೀಕರಣ, ಸ್ಥಳೀಯ ಮಾರುಕಟ್ಟೆ ಬೆಳವಣಿಗೆ ಉತ್ತೇಜನ ನೀಡುವ ಇವೆಲ್ಲ ನಿಜವಾದ ಕೃಷಿ ಸುಧಾರಣೆಗಳಿಗೆ ಬೇಕಾದ ನೀತಿಗಳು ಎಂದರು ಡಾ। ಬಿಸಿಲಯ್ಯ.


ಸಂಘಟಿತ ಕಾರ್ಮಿಕರ ಪಾತ್ರ

ಕರ್ನಾಟಕ ಹಿಂದೆ ಕೈಗಾರಿಕಾ ಚಟುವಟಿಕೆಯ ಕೇಂದ್ರವಾಗಿದ್ದು ಜಾಗತೀಕರಣ ಅದನ್ನು ನಿರ್ನಾಮ ಮಾಡಿದೆ. ರಾಜ್ಯದ ಕೈಗಾರಿಕೆಯ ಬೆನ್ನೆಲುಬಾಗಿದ್ದ ಬಟ್ಟೆ ಮತ್ತು ಇಂಜಿನಿಯರಿಂಗ್ ಕೈಗಾರಿಕೆಗಳು ಕ್ಷೀಣವಾಗಿದೆ. ಜಾಗತೀಕರಣದ ಸವಾಲನ್ನು ಎದುರಿಸಿ ಸೆಡ್ಡುಹೊಡೆದು ನಿಲ್ಲಬಲ್ಲ ಕೈಗಾರಿಕಾ ಕ್ಷೇತ್ರ ಕಟ್ಟುವಲ್ಲಿ ಸಂಘಟಿತ ಕಾರ್ಮಿಕ ಚಳುವಳಿ ದೊಡ್ಡ ಪಾತ್ರ ವಹಿಸಬೇಕು. ಸಂಘಟಿತ ಕಾರ್ಮಿಕರು ತಮ್ಮ ವೇತನಕ್ಕೆ ಸಾಮೂಹಿಕ ಚೌಕಟ್ಟಿಗೆ ಮಾತ್ರ ಸೀಮಿತಗೊಳಿಸದೆ, ಕೈಗಾರೀಕರಣದ ನೀತಿ ನಿರ್ಧಾರದಲ್ಲಿ ತಮ್ಮ ಪಾತ್ರ ವಹಿಸಬೇಕು ಎಂದು ಕರ್ನಾಟಕದ ಸಿಐಟಿಯು ಪ್ರಧಾನ ಕಾರ್ಯದರ್ಶಿ ಮತ್ತು ಪ್ರಸಿದ್ದ ಟ್ರೇಡ್ ಯೂನಿಯನ್ ನಾಯಕ ಕಾ। ವಿ.ಜೆ.ಕೆ. ನಾಯರ್ ಕರೆಇತ್ತರು. ಸಂಘಟಿತ ಅಸಂಘಟಿತ ಕಾರ್ಮಿಕರ ಚಳುವಳಿ ಬೆಸೆದು ಎಲ್ಲಾ ಶೋಷಿತರ ವರ್ಗಗಳ ಆಳ್ವಿಕೆಗೆ ಸವಾಲು ಹಾಕಬೇಕು ಎಂದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಯ್ಯಾರೆಡ್ಡಿ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.

ಈ ಯಶಸ್ವಿ ವಿಚಾರ ಸಂಕಿರಣದ ಸಮಾರೋಪ ಸಮಾರಂಭಕ್ಕೆ ಐದು ರಾಜಕೀಯ ಪಕ್ಷಗಳ ನಾಯಕರನ್ನು ಕರೆಯ ಲಾಗಿತ್ತು. 'ಭಾರತ ಉಳಿಸಿ' ವಿಚಾರ ಸಂಕಿರಣ ಗುರುತಿಸಿದ ಅಪಾಯಗಳು, ಅವುಗಳನ್ನು ಎದುರಿಸುವ ಬಗ್ಗೆ, ಬಿಕ್ಕಟ್ಟಿನಿಂದ ಪರಿಹಾರ ಗಳು ಈ ಬಗ್ಗೆ ವಿವಿಧ ರಾಜಕೀಯ ಪಕ್ಷಗಳ ಧೋರಣೆ ತಿಳಿದುಕೊಳ್ಳುವುದು ಸಮಾರೋಪದ ಗುರಿಯಾಗಿತ್ತು. ಸಿಪಿಐ(ಎಂ) ಸಿಪಿಐ ಮತ್ತು ಜನತಾದಳ(ಎಸ್) ರಾಜ್ಯ ಕಾರ್ಯದರ್ಶಿಗಳು ಆಹ್ವಾನ ಮನ್ನಿಸಿ ಬಂದಿದ್ದು, ಕಾಂಗ್ರೆಸ್ ಮತ್ತು ಜನತಾದಳ(ಯು) ಪ್ರತಿನಿಧಿಗಳು ಬಂದಿರಲಿಲ್ಲ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಮಾತನಾಡಿ ವಿಚಾರ ಸಂಕಿರಣ ಬಿಂಬಿಸಿದ ಬಿಕ್ಕಟ್ಟಿನ ವಿಶ್ಲೇಷಣೆ ಪರಿಹಾರ ಕ್ರಮಗಳನ್ನು ಜಾರಿ ಮಾಡಲು ಕಾಂಗ್ರೆಸ್ ಬಿಜೆಪಿಯೇತರ ಮೂರನೇ ರಾಜಕೀಯ ರಂಗದ ನಿರ್ಮಾಣದತ್ತ ತಮ್ಮ ಪಕ್ಷ ಕೆಲಸ ಮಾಡುತ್ತಿದೆ. ಈ ನಿಟ್ಟಿನಲ್ಲಿ ಕೋಮುವಾದ ಪ್ರಸ್ತುತ ಆರ್ಥಿಕ ನೀತಿ ಇವೆರಡರ ವಿರುದ್ಧ ಹೋರಾಡುವ ಕಾರ್ಯಕ್ರಮ ಇರುವ 'ಜನತಾ ರಂಗ' ಕಟ್ಟಲು ಮುಂದಾಗಿದೆ. ಪ್ರತಿಯೊಂದು ರಾಜಕೀಯ ಪಕ್ಷ ಈ ಬಗ್ಗೆ ತಮ್ಮ ನೀತಿ ಸ್ಪಷ್ಟಪಡಿಸಬೇಕು ಎಂದರು. ಸಿಪಿಐ ರಾಜ್ಯ ಕಾರ್ಯದರ್ಶಿ ಡಾ। ಸಿದ್ದನಗೌಡ ಪಾಟೀಲ ಮಾತನಾಡಿ, ವಿಚಾರ ಸಂಕಿರಣದ ಆಶಯಗಳನ್ನು ಸಾಮಾನ್ಯ ಜನರತ್ತ ಒಯ್ಯುವಲ್ಲಿ ಮುತುವರ್ಜಿ ವಹಿಸಬೇಕು ಎಂದರು. ಜನತಾದಳ(ಎಸ್) ನಾಯಕ ನಾರಾಯಣಸ್ವಾಮಿ ಮಾತನಾಡಿ ಈ ಮೂರನೇ ಬದಲಿ ನಿರ್ಮಿಸುವಲ್ಲಿ ತಮ್ಮ ಪಕ್ಷ ಎಡಪಕ್ಷಗಳೊಂದಿಗೆ ಸಹಕರಿಸುವುದು ಎಂದರು.

'ಕೇಸರಿ ಬಿಳಿ ಹಸಿರು' - ನಾಟಕ

ಕೋಮುವಾದ ಹಿಮ್ಮೆಟ್ಟಿಸಲು ಸತತ ಸಾಂಸ್ಕೃತಿಕ ಸಾಮಾಜಿಕ ಮಧ್ಯಪ್ರವೇಶ ಮಾಡುವ ಸಣ್ಣ ಗುಂಪುಗಳು ದೇಶದಾದ್ಯಂತ ಸತತವಾಗಿ ಕೆಲಸ ಮಾಡಬೇಕು. ಅದಕ್ಕೆ ಉತ್ತಮ ಉದಾಹರಣೆ. ಮೊದಲನೆಯ ದಿನದ ಸಂಜೆ ಸಮುದಾಯ ಆಡಿದ 'ಕೇಸರಿ -ಬಿಳಿ-ಹಸಿರು' ಎಂಬ ಬೋಳುವಾರು ಮಹಮ್ಮದ್ ಕುಂಞ ಅವರ ನಾಟಕ. ಈ ನಾಟಕವನ್ನು ಕಳೆದ ಐದು ವರ್ಷಗಳಿಂದ ರಾಜ್ಯದ ನೂರಾರು ಕಡೆ ಬೀದಿಗಳಲ್ಲಿ ಆಡಲಾಗಿದೆ. ಕೋಮುವಾದದ ಅಪಾಯದ ಬಗ್ಗೆ ಉತ್ತಮ ನಾಟಕ ಎಂದು ಹೆಸರಾದ ಈ ನಾಟಕ ವಿಚಾರ ಸಂಕಿರಣಕ್ಕೆ ಬಂದವರಿಗೆ ಸ್ಫೂರ್ತಿ ತುಂಬಿತ್ತು. ಈಗಾಗಲೇ ಈ ಬಗ್ಗೆ ನಡೆಯುತ್ತಿರುವ ಕಾರ್ಯಾಚರಣೆ ಬಗ್ಗೆ ಅರಿವು, ಮುಂದೇನು ಎನ್ನುವವರಿಗೆ ಉತ್ತರ ಕೊಟ್ಟಿತ್ತು. ವಿಚಾರ ಸಂಕಿರಣ ಮುಂದಿಟ್ಟ ಪರಿಹಾರಗಳನ್ನು ಜನಸಮೂಹದತ್ತ ಒಯ್ಯಲು ಪ್ರೇರೇಪಿಸಿತ್ತು.



ಸಮಾಜವಾದವೇ ಭವಿಷ್ಯ

ಪುಟ 7 ರಿಂದ

ಪ್ರಮಾಣ ಶೇ 30 ಎಂದು ಅಂದಾಜು ಮಾಡಲಾಗಿದೆ. ನಿಜ ಆದಾಯ 1999 ರಲ್ಲಿ 1989 ರಮೂರನೇ ಒಂದರಷ್ಟಕ್ಕೆ ಇಳಿದಿದೆ.

ಹೋರಾಟಗಳ ಮಹಾಪೂರ

ಇಂತಹ ಕಹಿ ಅನುಭವದ ನಂತರ ಅಲ್ಲಿ ಜನಗಳು ಮತ್ತೆ ಕಮ್ಯುನಿಸ್ಟ್ ಪಕ್ಷಗಳಲ್ಲಿ ವಿಶ್ವಾಸ ತೋರಿಸುತ್ತಿವೆ. ಪೋಲೆಂಡ್, ಮಂಗೋಲಿಯಾ, ಮಾಲ್ಡಿವಿಯಾಗಳಲ್ಲಿ ಮಾಜಿ ಕಮ್ಯುನಿಸ್ಟರು ಮತ್ತೆ ಅಧಿಕಾರಕ್ಕೆ ಬಂದಿದ್ದಾರೆ. ರಶ್ಯಾದಲ್ಲಿ ಕಮ್ಯುನಿಸ್ಟರೇ ಅತಿದೊಡ್ಡ ಚುನಾಯಿತ ಶಕ್ತಿ. ಇತರ ಮಾಜಿ ಸೋವಿಯತ್ ಗಣತಂತ್ರಗಳಲ್ಲಿ ಅವರು ಮುನ್ನಡೆ ಸಾಧಿಸುತ್ತಿದ್ದಾರೆ.

ಲ್ಯಾಟಿನ್ ಅಮೆರಿಕಾದ ದೇಶಗಳಾದ ಬ್ರೆಜಿಲ್, ವೆನೆಜುವೆಲಾ, ಚಿಲಿ, ಉರುಗ್ವೆ, ಪರಾಗ್ವೆ ಇತ್ಯಾದಿಗಳಲ್ಲಿನ ಬೃಹತ್ ಜಾಗತೀಕರಣ ವಿರೋಧಿ ಹೋರಾಟಗಳು ಅಂತರ್ರಾಷ್ಟ್ರೀಯ ಹಣಕಾಸುಬಂಡವಾಳ ತನ್ನ ಕೊಳ್ಳೆಗಳನ್ನು ಕನಿಷ್ಟ ಇಳಿಸುವಂತೆಯಂತೂ ಮಾಡಿವೆ. ವೆನಿಜುವೆಲಾದ ಅಧ್ಯಕ್ಷ ಹ್ಯೂಗೋ ಚವೇಜ್‌ರನ್ನು ಪದಚ್ಯುತಗೊಳಿಸುವ ಸಾಮ್ರಾಜ್ಯಶಾಹಿ-ಪ್ರೇರಿತ ಪ್ರಯತ್ನ ವಿಫಲವಾಗಿ ಅವರು ಮತ್ತೆ ಅಧ್ಯಕ್ಷನಾಗಿ ಮರಳಿದ್ದು ಅಮೆರಿಕಾದ ಈಗಿನ ಆಕ್ರಾಮಕ ಪ್ರಯತ್ನಗಳ ಸಂದರ್ಭದಲ್ಲಿ ಗಮನಾರ್ಹ. ಇತ್ತೀಚೆಗೆ ಬ್ರೆಜಿಲ್‌ನಲ್ಲಿ ಲೂಲಾ ಅಧ್ಯಕ್ಷರಾಗಿ ಚುನಾಯಿತರಾದದ್ದು ಇನ್ನೊಂದು ಮಹತ್ವದ ಸಾಧನೆ.

ಪರ್ಯಾಯವಿದೆ

ಯುರೋಪಿನ ಹಲವು ದೇಶಗಳಲ್ಲೂ ನವ - ಉದಾರವಾದಿ ನೀತಿಗಳ ವಿರುದ್ಧ ಬೃಹತ್ ಕಾರ್ಮಿಕವರ್ಗ ಕಾರ್ಯಾಚರಣೆಗಳನ್ನು ನಡೆಸುತ್ತಿದೆ. ಇಟಲಿ ಎರಡನೇ ಮಹಾಯುದ್ಧದ ನಂತರದ ಅತಿದೊಡ್ಡ ಮುಷ್ಕರವನ್ನು ಕಂಡಿತು. ಭಾರತವೂ ಸೇರಿದಂತೆ ಮೂರನೇ ಜಗತ್ತಿನ ದೇಶಗಳಲ್ಲೂ ದುಡಿಯುವ ಜನ ಬೀದಿಗಿಳಿದಿದ್ದಾರೆ. ವಿಶ್ವ ಸಮಾಜ ವೇದಿಕೆ (World Social Forum) ಈಗ ಒಂದು ಪ್ರಮುಖ ಜಾಗತೀಕರಣ-ವಿರೋಧಿ ಆಂದೋಲನವಾಗಿ ಮೂಡಿ ಬರುತ್ತಿದೆ. ಲ್ಯಾಟಿನ್ ಅಮೆರಿಕಾದ ಎಡ ಮತ್ತು ಪ್ರಗತಿಪರ ಶಕ್ತಿಗಳನ್ನು ಪ್ರತಿವರ್ಷ ಒಟ್ಟು ತರುತ್ತಿರುವ ಸಾವ್ ಪಾವ್ಲೋ ವೇದಿಕೆಯನ್ನು ಈಗ ಇತರ ಖಂಡಗಳಿಗೂ ವಿಸ್ತರಿಸುವ ಪ್ರಯತ್ನ ನಡೆದಿದೆ.

ಇತ್ತೀಚೆಗೆ ಕೆಲವು ವರ್ಷಗಳಿಂದ ಗ್ರೀಸ್‌ನ ಅಥೆನ್ಸ್‌ನಲ್ಲಿ ಕಮ್ಯುನಿಸ್ಟ್ ಪಕ್ಷಗಳು ಮತ್ತು ಅವುಗಳ ನೇತೃತ್ವ ಸಾಮೂಹಿಕ ಆಂದೋಲನಗಳ ವಾರ್ಷಿಕ ಸಭೆಗಳು ನಿಯಮಿತವಾಗಿ ನಡೆಯುತ್ತಿದ್ದು ಇವುಗಳಲ್ಲಿ ಹೆಚ್ಚೆಚ್ಚು ಪಕ್ಷಗಳು ಭಾಗವಹಿಸುತ್ತಿವೆ. ಬೈಜಿಂಗ್‌ನಲ್ಲಿ ಇತ್ತೀಚೆಗೆ ನಡೆದ '21ನೇ ಶತಮಾನದಲ್ಲಿ ಸಮಾಜವಾದ' ಕುರಿತ ಅಂತರ್ರಾಷ್ಟ್ರೀಯ ವಿಚಾರಸಂಕಿರಣ ಈ ದಿಕ್ಕಿನಲ್ಲಿ ಇನ್ನೊಂದು ಪ್ರಯತ್ನ.



ನಿಜ ಈ ಎಲ್ಲಾ ಆಂದೋಲನಗಳು ಸದ್ಯ ರಕ್ಷಣಾತ್ಮಕವಾಗಿವೆ ಅಂದರೆ ಈಗಿರುವ ಹಕ್ಕುಗಳನ್ನು ರಕ್ಷಿಸಿಕೊಳ್ಳಲು. ಆದರೆ ಇವು ಬಂಡವಾಳದ ಆಳ್ವಿಕೆಯ ವಿರುದ್ಧ ಹೋರಾಟಗಳ ಬೀಜಸ್ವರೂಪಗಳೂ ಕೂಡಾ. ಈ ಕೋಟಿ-ಕೋಟಿ ಹೋರಾಟ ನಿರತ ಜನಗಳು ನೀಡುತ್ತಿರುವ ಸ್ಪಷ್ಟ ಸಂದೇಶವೆಂದರೆ ಸ್ವಾತಂತ್ರ್ಯ ಮತ್ತು ಘನತೆ ಸಾಧಿಸುವ ಏಕೈಕ ದಾರಿಯೆಂದರೆ ಈ ಶೋಷಕ ವ್ಯವಸ್ಥೆಯನ್ನು ಕಿತ್ತೆಸೆದು ಮಾನವನಿಂದ ಮಾನವನ ಶೋಷಣೆಯಿಲ್ಲದ ವ್ಯವಸ್ಥೆಯನ್ನು ಅಂದರೆ ಸಮಾಜವಾದವನ್ನು ಸ್ಥಾಪಿಸುವುದು ಮಾತ್ರವೇ. ಅಕ್ಟೋಬರ್ ಕ್ರಾಂತಿ ತೋರಿದ ದಾರಿಯೇ ಈಗಲೂ ಮಾನವ ಕುಲದ ಮುನ್ನಡೆಯ ಏಕೈಕ ದಾರಿಯಾಗಿ ಕಾಣುತ್ತಿದೆ.

'ಬೇರೆ ಪರ್ಯಾಯವಿಲ್ಲ' ಎಂಬ ಬೂರ್ಜ್ವಾ ಸಿದ್ಧಾಂತಿಗಳ ಘೋಷಣೆಗೆ ಪರ್ಯಾಯವಾಗಿ ಈ ಹೋರಾಟಗಳಲ್ಲಿ 'ಸಮಾಜವಾದವೇ ಪರ್ಯಾಯ' ಎಂಬ ದನಿ ಪ್ರತಿಧ್ವನಿಸುತ್ತಿದೆ. ○


ಅಮೆರಿಕಾದ ಸಾಮ್ರಾಜ್ಯದ ಕನಸು ....

ಪುಟ 7 ರಿಂದ

ಪ್ರಗತಿಪರ ವಲಯಗಳಲ್ಲಿ ಹತಾಶಭಾವನೆಗೆ ಎಡಮಾಡಿಕೊಟ್ಟಿದೆ. ಬಡ ದೇಶಗಳ ಮೇಲೆ ಅತ್ಯಂತ ಅನ್ಯಾಯದ ಆರ್ಥಿಕ ವ್ಯವಸ್ಥೆಯ ಹೇರಿಕೆ, ನಿರ್ಬಂಧಗಳು, ನಿಷೇಧಗಳ ಬಳಕೆ ಹಾಗೂ ಬಹಿರಂಗ ಮಿಲಿಟರಿ ಹಸ್ತಕ್ಷೇಪಗಳು ನಿರಾಶಾವಾದ, ಅಂತಕಕ್ಕೆ ಆಧಾರಗಳನ್ನು ಕಲ್ಪಿಸಿದೆ.

ಆದರೆ ಈ ಚಿತ್ರದ ಒಂದೇ ಮುಖವನ್ನು ನೋಡುವುದು ತಪ್ಪಾಗುತ್ತದೆ. ಎಲ್ಲಾ 'ಸಾಮ್ರಾಜ್ಯ'ಗಳಂತೆ ಈ ಏಕೈಕ ಅಧಿನಾಯಕನ ಅಧಿಕಾರಗಳಿಗೂ ಮಿತಿಗಳಿವೆ. ಇವು ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಮಿಲಿಟರಿ ರಂಗಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ಮೊದಲನೆಯದಾಗಿ, ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣ ಒಂದಾದ ಮೇಲೊಂದರಂತೆ ಎಲ್ಲಾ ದೇಶಗಳಲ್ಲಿ ಅಸಮಾನತೆಯನ್ನು ಹೆಚ್ಚಿಸಿದೆ. ಶ್ರೀಮಂತ ದೇಶ-ಬಡ ದೇಶಗಳ ನಡುವೆ ದೇಶಗಳ ಒಳಗೆ ಬಡವ-ಶ್ರೀಮಂತರ ನಡುವೆ ತೀವ್ರ ಒಡಕುಗಳು ಉಂಟಾಗಿವೆ. ಇದು ಉಂಟು ಮಾಡಿರುವ ಅಸಂತೃಪ್ತಿ, ಪ್ರತಿಕ್ರಿಯೆಗಳನ್ನು ಹತೋಟಿಯಲ್ಲಿಡಲು ಅಮೆರಿಕಾದ ಸಾಮ್ರಾಜ್ಯ ವ್ಯವಸ್ಥೆಗೆ ಸಾಧ್ಯವಿಲ್ಲ. ದಕ್ಷಿಣ ಅಮೆರಿಕಾದಲ್ಲಿ ಇದು ಸ್ಪಷ್ಟವಾಗಿ ಕಂಡುಬಂದಿದೆ. ಇದರ ಆರ್ಥಿಕ ಅಭಿವ್ಯಕ್ತಿ ಅರ್ಜೆಂಟೀನಾದಲ್ಲಿ ಕಂಡುಬಂದಿದ್ದರೆ, ರಾಜಕೀಯ ಅಭಿವ್ಯಕ್ತಿ ಬ್ರೆಜಿಲ್‌ನಲ್ಲಿ ಕಂಡು ಬಂದಿದೆ. ವೆನಿಜುವೆಲಾದಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿಯ ಮೂಲಕ ಅಧ್ಯಕ್ಷ ಚವೇಜ್‌ರನ್ನು ಉರುಳಿಸುವ ಪ್ರಯತ್ನ ವಿಫಲವಾಗಿದೆ.



ಆರ್ಥಿಕ ಪ್ರಕ್ರಿಯೆಗಳ ಪ್ರಭಾವ ಮತ್ತು ಖಾಸಗೀಕರಣಕ್ಕೆ ಜನತೆಯ ಪ್ರತಿರೋಧ ಇವೆರಡೂ ಸೇರಿ ಅಮೆರಿಕಾದ ಹಿತ್ತಿಲು ಎಂದೆನಿಸಿದ ಲ್ಯಾಟಿನ್ ಅಮೆರಿಕಾದ ರಾಜಕೀಯ ಸ್ವರೂಪದಲ್ಲೇ ಬದಲಾವಣೆಗಳನ್ನು ತರುತ್ತಿದೆ. ನವ ಉದಾರವಾದಿ ಸಿದ್ಧಾಂತದ ಪರವಾಗಿ ಜನಗಳ ಮನಗೆಲ್ಲುವ ಸಮರ ಈಗಾಗಲೇ ಅಮೆರಿಕಾ ಕಳಕೊಂಡಿದೆ. 2001 ರಲ್ಲಿ 'ಇಂಟರ್-ಅಮೆರಿಕನ್ ಡೆವಲಪ್‌ಮೆಂಟ್ ಬ್ಯಾಂಕ್' 17 ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ನಡೆಸಿದ ಒಂದು ಸಮೀಕ್ಷೆಯಲ್ಲಿ ಶೇ 63 ಮಂದಿ ಖಾಸಗೀಕರಣ ಪ್ರಯೋಜನಕಾರಿಯಾಗಿಲ್ಲ ಎಂದಿದ್ದಾರೆ.

ಅಮೆರಿಕಾ ಮತ್ತು ಮತ್ತಿತರ ಮುಂದುವರೆದ ಬಂಡವಾಳಶಾಹಿ ದೇಶಗಳ ಆಳುವ ವಲಯಗಳಲ್ಲೂ ಐಎಂಎಫ್-ವಿಶ್ವಬ್ಯಾಂಕ್ ಪಥ್ಯಗಳು ಖಾಯಿಲೆಯನ್ನು ಇನ್ನಷ್ಟು ಹದಗೆಡಿಸಿವೆ ಎಂಬ ಟೀಕೆಗಳು ಬರುತ್ತಿವೆ. ಎನ್ರೋನ್‌ನಿಂದ ಆರಂಭಿಸಿ ಒಂದಾದ ಮೇಲೆ ಒಂದು ಅಮೆರಿಕನ್ ಕಂಪನಿಗಳ ಕುಸಿತಗಳು ಈ ವ್ಯವಸ್ಥೆಯ ದುರಾಸೆಯನ್ನು ಎತ್ತಿ ತೋರಿವೆ. 2001 ರ ಹಿಂಜರಿತದ ನಂತರ ಜಾಗತಿಕ ಆರ್ಥಿಕದಲ್ಲಿ ಮೋಡ ಕವಿದ ವಾತಾವರಣದ ಭಯ ಬಲಪಂಥೀಯ ಆರ್ಥಿಕದ ವಿಜಯದ ಕೇಕೆಯನ್ನು ಅಡಗಿಸಿ ಬಿಟ್ಟಿದೆ.

ಮಿಲಿಟರಿ ಶಕ್ತಿಗೂ ಮಿತಿಗಳಿವೆ

ಎರಡನೆಯದಾಗಿ, ಮಿಲಿಟರಿ ಶಕ್ತಿಯ ಅವಲಂಬನೆಗೂ ಮಿತಿಗಳಿವೆಯಷ್ಟೇ ಅಲ್ಲ, ಅದರಲ್ಲಿ ವಿಪರೀತಕ್ಕೆ ಹೋಗುವ ಅಪಾಯಗಳೂ ಇವೆ. ಇತ್ತೀಚೆಗೆ ಅಮೆರಿಕನ್ ಸಂಸತ್ತಿಗೆ ಸಲ್ಲಿಸಿದ 'ಅಮೆರಿಕಾ ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರ' ಎಂಬ ದಸ್ತಾವೇಜಿನಲ್ಲಿ ವ್ಯಕ್ತವಾಗಿರುವ ಬುಶ್ ಸಿದ್ಧಾಂತ ಯಾವುದೇ ವಿದೇಶಿ ಶಕ್ತಿ ಅಮೆರಿಕಾಕ್ಕೆ ಮಿಲಿಟರಿ ಸಾಟಿಯಾಗಲು ಬಿಡುವುದಿಲ್ಲ ಎಂದು ಸಾರಿವೆ. ಅಮೆರಿಕಾ ಅಧಿನಾಯಕನ ಪಾತ್ರ ವಹಿಸುವುದರೊಂದಿಗೆ 'ದೊಡ್ಡ ಶಕ್ತಿಗಳ ಸಂಘರ್ಷ' ಕೊನೆಗೊಳ್ಳಲಿದೆ ಎಂದು ಈ ದಸ್ತಾವೇಜು ಹೇಳುತ್ತದೆ. ಆದರೆ ಈ ಆತ್ಮತೃಪ್ತ ದೃಷ್ಟಿಕೋನವನ್ನು ಕದಡಿಸುವ ಅಂಶಗಳು ಹಲವು ಇವೆ.

ನಿಜ ಅಮೆರಿಕಾದ ಮಿಲಿಟರಿ ತಂತ್ರಜ್ಞಾನದ ಪ್ರದರ್ಶನ ವಿಶ್ವಾದ್ಯಂತ ಎಲ್ಲಾ ದೇಶಗಳ ಜನಗಳ ಭದ್ರತೆಗೆ ಗಂಭೀರ ಬೆದರಿಕೆ. ಆದರೆ ಅಫಘಾನಿಸ್ತಾನದಲ್ಲಿ ಈ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪ್ರದರ್ಶನ ನಂತರ ಕೂಡಾ ಅಲ್ಲಿ ಅಮೆರಿಕಾಕ್ಕೆ ಬೇಕಾದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ತರಲು ಅದಕ್ಕಾಗಿಲ್ಲ. ಅಲ್ಲೀಗ ಅಮೆರಿಕಾದ ಬಾಲಬಡುಕ ಆಳರಸ ಹಮೀದ್ ಕರ್ಝಾಯಿಯನ್ನು ಈಗಲೂ ಅಮೆರಿಕನ್ ಪಡೆಗಳೇ ಕಾಯಬೇಕಾಗಿದೆ, ರಾಜಧಾನಿ ಕಾಬೂಲಿನ ಹೊರಗೆ ಆತನ ಮಾತು ನಡೆಯುತ್ತಿಲ್ಲ. ತಾಲಿಬಾನ್ ಮುಖಂಡತ್ವ ಮತ್ತು ಅಲ್ ಖೈದಾ ಜಾಲವನ್ನು ನಿರ್ಮೂಲ ಮಾಡುವ ಗುರಿಯೂ ಈಡೇರಿಲ್ಲ. ಇದೊಂದು ಉದಾಹರಣೆ. ಅಲ್ಲದೆ ಇರಾಕಿನಲ್ಲಿ ಇಂತಹ ಪ್ರಯತ್ನ ಸಂಪೂರ್ಣ ಭಿನ್ನವಾಗಿರುತ್ತದೆ. ಅದು ಅಫಘಾನಿಸ್ತಾನದಂತೆ ಹಿಂದುಳಿದ ದೇಶವಲ್ಲ. ಬಹಳಷ್ಟು ಮುಂದುವರೆದ, ಸಂಘಟಿತ ಸಮಾಜ ಅಲ್ಲಿದೆ. ಅಲ್ಲೇನಾದರೂ ರಾಜಕೀಯ, ಸಾಮಾಜಿಕ ಮಾನ್ಯತೆಯಿಲ್ಲದೆ ಮಿಲಿಟರಿ ಆಕ್ರಮಣದ ಪ್ರಯತ್ನ ನಡೆದರೆ ಅದಕ್ಕೆ ಇನ್ನಷ್ಟು ಪ್ರತಿರೋಧ ಮತ್ತು ಕ್ಷೋಭೆ ಇರಾಕಿನಲ್ಲಿ ಮಾತ್ರವಲ್ಲ, ಆ ಇಡೀ ಪ್ರದೇಶದಲ್ಲಿ ಏಳಬಹುದಷ್ಟೇ.

ಟೊಳ್ಳು ಮಾತುಗಳು

ಭಯೋತ್ಪಾದನೆಯಿಂದ ಮುಕ್ತವಾದ, ಪ್ರಜಾಪ್ರಭುತ್ವಕ್ಕೆ, ಮಾನವ ಹಕ್ಕುಗಳಿಗೆ ಸಂರಕ್ಷಿತವಾದ ಒಂದು ವಿಶ್ವವನ್ನು ನೀಡುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಟೊಳ್ಳು ಮಾತುಗಳ ಬಗ್ಗೆ ವಿಶ್ವದ ವಿವಿಧ ಭಾಗಗಳ ಜನಗಳಲ್ಲಿ ಅಪನಂಬಿಕೆ ಹೆಚ್ಚುತ್ತಿದೆ. ಅವರು 'ಹೆಚ್ಚೆಚ್ಚಾಗಿ ಈ ಸಾಮ್ರಾಜ್ಯಶಾಹಿ ಶಕ್ತಿಯನ್ನು ಸೂಪರ್ ಲಾಭಗಳ ದುರಾಸೆಯಿಂದ, ತೈಲ ಇತ್ಯಾದಿ ನೈಸರ್ಗಿಕ ಸಂಪನ್ಮೂಲಗಳನ್ನು ದೋಚಿಕೊಳ್ಳಲು ಉತ್ಸುಕವಾಗಿರುವ, ತನ್ನ ಅಧಿಪತ್ಯಕ್ಕಾಗಿ ರಾಷ್ಟ್ರೀಯ ಸಾರ್ವಭೌಮತೆಯನ್ನು ತುಳಿದುಹಾಕುವ ಶಕ್ತಿಯಾಗಿ ಕಾಣುತ್ತಿದ್ದಾರೆ.

ಹೀಗೆ **ಅಮೆರಿಕಾ ತನ್ನ ಅಧಿಪತ್ಯವನ್ನು ಹೆಚ್ಚೆಚ್ಚು ತೋರಿಸಿದಷ್ಟು ಅದರ ವಿರುದ್ಧ ಶಕ್ತಿಗಳು ಹೆಚ್ಚೆಚ್ಚು ತಲೆಯೆತ್ತುತ್ತವೆ.** ಈಗಾಗಲೇ ಜಾಗತೀಕರಣದ ಸಂದರ್ಭದಲ್ಲಿ ಇದರ ಪರಿಣಾಮವನ್ನು ನೋಡುತ್ತಿದ್ದೇವೆ. ಇಂತಹ ಜಾಗತೀಕರಣದಡಿ ವಿಜ್ಞಾನ-ತಂತ್ರಜ್ಞಾನದ ಬಂಡವಾಳಶಾಹಿ ಉಪಯೋಗ ಪರಿಸರಕ್ಕೆ ಮಾರಕವಾಗಿರುವುದರಿಂದ ಅದರ ವಿರುದ್ಧವೂ ಹೋರಾಟಗಳು ಬರಲಿವೆ. **ರಾಷ್ಟ್ರೀಯ ಸಾರ್ವಭೌಮತೆಯನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ಜಾಗತೀಕರಣದ ಅಲೆಯಿಂದ ದಮನ ಮಾಡಲು ಸಾಧ್ಯವಿಲ್ಲ.**

ಆದ್ದರಿಂದ ಬುಶ್‌ರ ಭದ್ರತಾ ಸಿದ್ಧಾಂತದ ಆತ್ಮತೃಪ್ತ ದೃಷ್ಟಿಕೋನ ಬಹಳ ಕಾಲ ನಿಲ್ಲುವುದಿಲ್ಲ. ಚೀನಾದ ತ್ವರಿತವಾಗಿ ಹೆಚ್ಚುತ್ತಿರುವ ಶಕ್ತಿಯೆದುರು ಅಮೆರಿಕಾ ಹೇಗೆ ತನ್ನ ಇಚ್ಛೆಯನ್ನು ಜಾರಿಗೆ ತರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ, ಅದಕ್ಕೆ ಇರಾಕ್ ಪ್ರಶ್ನೆಯಲ್ಲಿ ಫ್ರಾನ್ಸ್ ಮತ್ತು ರಶ್ಯಾವನ್ನು ತನ್ನ ಪರ ಒಲಿಸಿಕೊಳ್ಳಲೂ ಕೂಡಾ ಕಷ್ಟವಾಗಿದೆ.

ದೂರದೃಷ್ಟಿಯಿಂದ ಸಾಮ್ರಾಜ್ಯಶಾಹಿ ಸಿದ್ಧಾಂತಗಳಿಗೆ ಈಗಾಗಲೇ ಈ ಕಷ್ಟಗಳ ಅರಿವಾಗುತ್ತದೆ. ಆದ್ದರಿಂದಲೇ ಅಕ್ಟೋಬರ್ ಕ್ರಾಂತಿಯ ಮೇಲೆ ಅವರ ಧಾಳಿಗಳು ಕೇವಲ ಒಂದು ಔಪಚಾರಿಕ ಮಾತಲ್ಲ, ಅದು ಭವಿಷ್ಯದ ಬಂಡಾಯಗಳಿಂದ ತಮ್ಮನ್ನುಳಿಸಿಕೊಳ್ಳಲು ಒಂದು ವಿಮೆಯೇ ಆಗಿದೆ.

ಇರಾಕ್ ಮೇಲಿನ ಅಮೇರಿಕಾ ಯುದ್ಧ ಯೋಜನೆ ವಿರೋಧಿಸಿ ವ್ಯಾಪಕ ಜನಾಂದೋಲನ

ಅಂತರಾಷ್ಟ್ರೀಯ ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿ ಅಮೇರಿಕಾ ಸರ್ಕಾರ, ಇರಾಕ್‌ನ ಮೇಲೆ ಯುದ್ಧ ಸಾರಿ ಆಕ್ರಮಿಸಲು ಗಂಭೀರ ತಯಾರಿ ನಡೆಸಿದೆ. ಇರಾಕ್‌ನ್ನು ಯಾರು ಆಳಬೇಕು ಎಂಬುದನ್ನು ತಾವೇ ನಿರ್ಧರಿಸುವ ಹಕ್ಕಿದೆಯೆಂದು ದುರಹಂಕಾರ ಪ್ರದರ್ಶಿಸುತ್ತಿದೆ. ಸದ್ದಾಂ ಹುಸೇನ್‌ರನ್ನು ಬದಲಾಯಿಸಲೇಬೇಕೆಂಬ ಅದರ ಮಾತು ಜಗತ್ತಿನ ಎಲ್ಲಾ ರಾಷ್ಟ್ರಗಳ ಜನರ ಸಾರ್ವಭೌಮತ್ವದ ಮೇಲಿನ ನಗ್ನ ಆಕ್ರಮಣ.

ಯುದ್ಧಸಾರುವ ಅಮೇರಿಕಾದ ಕ್ರಮ ವ್ಯಾಪಕ ವಿನಾಶವನ್ನು ತರುವಂತಹ ವಿಧ್ವಂಸಕ ಕೃತ್ಯ. ಹೇಗೆ ಅಪಾರ ಜೀವಗಳನ್ನು ಬಲಿತೆಗೆದುಕೊಳ್ಳಲಿದೆ. ಇದು ಆಗಕೂಡದು ಈ ಸಂದರ್ಭದಲ್ಲಿ ವಾಜಪೇಯಿ ಸರ್ಕಾರ ಅಮೇರಿಕಾದ ಯುದ್ಧ ಕ್ರಮವನ್ನು ದೃಢವಾಗಿ ವಿರೋಧಿಸುತ್ತಿಲ್ಲ.

ಈ ಯುದ್ಧ ಕೇವಲ ಇರಾಕ್‌ನ ಮೇಲೆ ಮಾತ್ರವಲ್ಲ, ಜಗತ್ತಿನ ಮೇಲೆ ಏಕಾಧಿಪತ್ಯ ಸಾಧಿಸುವ ಅಮೇರಿಕಾದ ಕ್ರಮಗಳನ್ನು ವಿರೋಧಿಸುವ ಸ್ವಾತಂತ್ರ್ಯ ಸಮಾನತೆ ಬಯಸುವ ಎಲ್ಲರ ಮೇಲಿನ ದಾಳಿ. ಈಗಾಗಲೇ ಅಮೇರಿಕಾದ ಮುಂದಿನ ಗುರಿ ಸಮಾಜವಾದಿ ಉತ್ತರಕೊರಿಯಾ, ಕ್ಯೂಬಾದತ್ತ ತಿರುಗುತ್ತಿದೆ. ಇರಾಕ್ ಮೇಲೆ ಈಗ ಯುದ್ಧ ಸಾರಿದರೆ ಅದು ಜಗತ್ತಿನ ಜನರೆದುರು ಭಾರಿ ದುರಂತದ ಅಧ್ಯಾಯಗಳನ್ನು ತೆರೆಯುತ್ತದೆ.

ಆದ್ದರಿಂದ ಇರಾಕ್‌ನ ಮೇಲೆ ನಿಯೋಜಿತ ಅಮೇರಿಕಾದ ಯುದ್ಧ ನಡೆಯಕೂಡದು, ಅದನ್ನು ತಡೆಯಲೇಬೇಕು ಅದಕ್ಕಾಗಿ ಜನತೆಯ ಜಾಗೃತ ಆಂದೋಲನ ಬೆಳೆಯಬೇಕು. ಈ ಹಿನ್ನೆಲೆಯಲ್ಲಿ 'ಇರಾಕ್ ವಿರುದ್ಧದ ಯುದ್ಧ ವಿರೋಧಿ' ಸಮಿತಿ ಅಖಿಲ ಭಾರತ ಮಟ್ಟದಲ್ಲಿ ಅಸ್ತಿತ್ವಕ್ಕೆ ಬಂದಿದೆ.

ಯುದ್ಧ ವಿರೋಧಿ ಸಮಿತಿ ಅಸ್ತಿತ್ವಕ್ಕೆ

ಇದರಲ್ಲಿ ಸಿಪಿಐ(ಎಂ), ಸಿಪಿಐ, ಎಡಪಕ್ಷಗಳಲ್ಲದೇ ಕಾಂಗ್ರೆಸ್ ಜನತಾದಳ(ಎಸ್), ರಾಷ್ಟ್ರೀಯ ಜನತಾದಳ ಮತ್ತು ಮಾಜಿ ಪ್ರಧಾನಿಗಳಾದ ವಿ.ಪಿ. ಸಿಂಗ್, ದೇವೇಗೌಡ, ಐ.ಕೆ. ಗುಜ್ರಾಲ್, ಇದ್ದಾರೆ. ಅಲ್ಲದೆ ಖ್ಯಾತ ಪತ್ರಕರ್ತರು, ಸಮಾಜವಿಜ್ಞಾನಿಗಳು, ಮುಂತಾದ ಗಣ್ಯರನ್ನು ಒಳಗೊಂಡಿದೆ.

ಹಾಗೆಯೇ ಈ ಸಮಿತಿಯು ಪ್ರತಿಯೊಂದು ರಾಜ್ಯಗಳಲ್ಲಿ ರಚಿತವಾಗಲಿದೆ. ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳು ರಾಜ್ಯಮಟ್ಟದ ಸಭೆಗೆ ಪ್ರಯತ್ನ ನಡೆದಿಸಿವೆ. ಮತ್ತು ಬುದ್ಧಿ ಜೀವಿಗಳುಳ್ಳ ವೇದಿಕೆಯೂ ಕ್ರಿಯಾಶೀಲಗೊಳ್ಳಲಿದೆ.



14 ರಂದು ದೆಹಲಿಯಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ

ಈ ವಾರ...

ಗಡಿವಿವಾದ : ಈಗ ಕೆದಕಿದ್ದು ಯಾಕೆ?

ಕಾವೇರಿ ವಿವಾದದಲ್ಲಿ ಸುಪ್ರಿಂಕೋರ್ಟ್‌ನ ತೀರ್ಪಿನಿಂದ ಕಂಗಾಲಾದ ಮುಖ್ಯಮಂತ್ರಿ ಕೃಷ್ಣರ ಮೇಲೆ ಇನ್ನೊಂದು ಪ್ರಹಾರ. ಅದು ಬಂದಿದ್ದು ಮಹಾರಾಷ್ಟ್ರದ ಮುಖ್ಯಮಂತ್ರಿಯಿಂದ. ಮಹಾರಾಷ್ಟ್ರ-ಕರ್ನಾಟಕದ ನಡುವಿನ ಗಡಿ ವಿವಾದವನ್ನು ಸುಪ್ರೀಂಕೋರ್ಟ್‌ಗೆ ಒಯ್ಯಲಾಗುವುದು ಎಂಬುದು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಘೋಷಣೆ. ಇವರೂ ಬೇರೆ ಪಕ್ಷದವರೇನಲ್ಲ. ಕಾಂಗ್ರೆಸ್ಸಿನವರೇ. ಅದರಲ್ಲೂ ಮಹಾರಾಷ್ಟ್ರದಲ್ಲಿ ತೀವ್ರತರದ ರಾಜಕೀಯ ಬಿಕ್ಕಟ್ಟು ಬಂದಿದ್ದಾಗ ಶಾಸಕರನ್ನು ಬೆಂಗಳೂರಿಗೆ ಆಹ್ವಾನಿಸಿ ಎಲ್ಲಾ ಯೋಗಕ್ಷೇಮದ 'ಆತಿಥ್ಯ' ನೀಡಿದ್ದ ಕೃಷ್ಣರವರ ಮೇಲೆಯೇ ಈಗ ಅವರದ್ದು ಒಂದು ಕಲ್ಲು.


ಗಡಿವಿವಾದ ಎಂದೋ ಮುಗಿದ ಅಧ್ಯಾಯವೆಂದೇನೋ ಕೃಷ್ಣರವರು ಸಾರಿದ್ದಾರೆ. ಆದರೆ ಆಳುವವರಿಗೆ ಬಿಕ್ಕಟ್ಟು ಬಂದಾಗಲೆಲ್ಲಾ ಜನರ ಗಮನ ಬೇರೆಡೆಗೆ ತಿರುಗಿಸಲು, ಭಾವೋದ್ರೇಕ ಬಡಿದೆಬ್ಬಿಸಲು ಗಡಿವಿವಾದ ಕೆದಕುವುದು ಹಲವಾರು ಬಾರಿ ಆಳುವವರು ಅನುಸರಿಸುತ್ತಾ ಬಂದ ತಂತ್ರ.

ಇಂತಹ ಗಡಿವಿವಾದ ಬಗೆಹರಿಸಿಕೊಳ್ಳಲು ಹಳ್ಳಿಯನ್ನೇ ಒಂದು ಘಟಕವಾಗಿ ಪರಿಗಣಿಸಬೇಕೆಂಬುದು ಹಿಂದಿನಿಂದಲೂ ಕಮ್ಯುನಿಸ್ಟ್ ಪಕ್ಷ ಪ್ರತಿಪಾದಿಸುತ್ತಾ ಬಂದ ಸೂತ್ರ. ಈ ನವೆಂಬರ್‌ನಲ್ಲಿ ಗಡಿವಿವಾದ ಪ್ರಶ್ನೆ ವಿಕೋಪಕ್ಕೆ ಹೋಗಿಲ್ಲ ಎಂಬುದೇ ಸದ್ಯದ ಬೆಳವಣಿಗೆ. ಆಳುವವರು ಇದನ್ನು ಮತ್ತೆ ಬಳಸಲಾರರು ಎಂದೇನೂ ಭಾವಿಸಬೇಕಿಲ್ಲ.

ಅಪಹರಣವಾಗಿ 80 ದಿನಗಳು ದಾಟಿದವು. ಆದರೆ ಮಾಜಿ ಸಚಿವ ನಾಗಪ್ಪನವರ ಸುಳಿವಿಲ್ಲ. ವೀರಪ್ಪನ್‌ನಿಂದ ಬಿಡುಗಡೆಯಾಗಿ ಕಾಡಿನಿಂದ ನಾಡಿಗೆ ಬರುವುದು ಕಗ್ಗಂಟಿನ ಪ್ರಶ್ನೆಯಾಗಿಯೇ ಉಳಿದಿದೆ. ನರಹಂತಕ ಈಗಾಗಲೇ ನಾಲ್ಕು ಕ್ಯಾಸೆಟ್‌ಗಳ ಮೂಲಕ ತನ್ನ ಬೇಡಿಕೆಗಳ ಪಟ್ಟಿಯನ್ನು ಕಳಿಸಿದ್ದಾನೆ. ಬೇಕಾದ 'ಉತ್ತರ'ವಿಲ್ಲದೇ ವ್ಯಗ್ರನಾಗಿದ್ದಾನಂತೆ.

ಇತ್ತ ಕೃಷ್ಣರವರು ನಾಗಪ್ಪನವರನ್ನು ಬಿಡಿಸುವ ದಿಸೆಯಲ್ಲಿ ನಿಖರವಾದ ಯಾವ ಮಾರ್ಗವನ್ನೂ ಆಯ್ಕೆ ಮಾಡದೇ ನೆನೆಗುದಿಗೆ ಬಿಟ್ಟಿದ್ದಾರೆ. ಅತ್ತ ಸಂಧಾನದ ಮಾರ್ಗವನ್ನು ಅನುಸರಿಸದೇ ಅಥವಾ ಸಶಸ್ತ್ರ ಪಡೆಗಳ ಕಾರ್ಯಾಚರಣೆಗೂ ಇಳಿಸದೆ ಗೊಂದಲ ಸೃಷ್ಟಿಸಿದ್ದಾರೆ. ಕಾವೇರಿ ವಿವಾದದಲ್ಲಾಗಲೀ, ನಾಗಪ್ಪನವರ ಅಪಹರಣದಲ್ಲಾಗಲೀ ಕೃಷ್ಣರವರು ಒಂದು ದೃಢವಾದ ತೀರ್ಮಾನಕ್ಕೆ ಬದ್ಧರಾಗದೇ ಒತ್ತಡ ಬಂದತ್ತ ವಾಲುವ ಪ್ರವೃತ್ತಿ ತೋರಿದ್ದಾರೆ.

ರಶೀದ್ : ಆತ್ಮಹತ್ಯೆ ಎಂಬ ಕಗ್ಗೊಲೆ



ನವೆಂಬರ್ 1 ರಂದು ಇನ್ನಿಲ್ಲವಾದ ಕವಿ, ಪತ್ರಕರ್ತ ಬಿ.ಎಂ.ರಶೀದ್ ಸಾವು ಹಲವಾರು ನಿಗೂಢಗಳ ಕಂತೆ. ಆತ್ಮಹತ್ಯೆಯಂತೇ ಕಾಣುವ ಕಗ್ಗೊಲೆ.

ಎಳೆಯ ವಯಸ್ಸಿನಿಂದಲೇ ಕವಿತೆ, ಬರಹಗಳ ಮೂಲಕ ಎಲ್ಲರ ಗಮನ ಸೆಳೆದ ರಶೀದ್ ಅತ್ಯಂತ ಪ್ರತಿಭಾನ್ವಿತ. ಧೈರ್ಯಶಾಲಿ. ಜನಪರ ಕಾಳಜಿಯುಳ್ಳವ. ಲಂಕೇಶ್ ಪತ್ರಿಕೆಯ ವರದಿಗಾರನಾಗಿ ಹೋರಾಟ ನಡೆಸಿದ್ದು ಕೋಮುವಾದಿಗಳ ವಿರುದ್ಧ, ಭೂಗತ ಮಾಫಿಯಾ ದೊರೆಗಳ ಭಯಾನಕ ದಂಧೆಗಳ ವಿರುದ್ಧ, ಅಧಿಕಾರಶಾಹಿಗಳ ಶಾಮೀಲು, ಭ್ರಷ್ಟತೆ ವಿರುದ್ಧ.

ಭೂಗತ ಮಾಫಿಯಾಗಳ ಕ್ರಿಮಿನಲ್ ಕೃತ್ಯಗಳಿಂದ ಇಡೀ ಕರಾವಳಿ ತೀರವೇ ನರಳುತ್ತಿದೆ. ಇಂತಹವರ ವಿರುದ್ಧ ಒಂದು ಸಣ್ಣ ಪ್ರತಿಭಟನೆಯ ಧ್ವನಿ ಎದ್ದರೂ ಈ ಗ್ಯಾಂಗ್‌ಗಳು ಅದನ್ನು ಮಟ್ಟಹಾಕಲು ಹೊಂಚುಹಾಕುತ್ತವೆ. ರಕ್ತ ಹರಿಸಲು ಎರಗುತ್ತವೆ. ಇದಕ್ಕೆ ರಾಜಕಾರಣಿಗಳ,ಅಧಿಕಾರಿಗಳ ಶಾಮೀಲು ಇದೆಯೆಂದು ಬೇರೆ ಹೇಳಬೇಕಿಲ್ಲ. ಸಂಗಾತಿ ಶ್ರೀನಿವಾಸ ಬಜಾಲ್‌ರ ಹತ್ಯೆ, ನಂತರ ಈಗ ರಶೀದ್ ಇತ್ತೀಚಿನ ಉದಾಹರಣೆಗಳು.

ಇಂತಹ ಕ್ರಿಮಿನಲ್ ಗ್ಯಾಂಗುಗಳು ನಾಗರೀಕ ವೇಷದ ಅಥವಾ ಸಮಾಜಸೇವೆ - ಉದ್ಧಾರದ ಮುಖವಾಡ ಹಾಕಿಯೇ ಕೆಲಸ ಮಾಡುತ್ತಿವೆ. ಹಿಂದೂ ಯುವಸೇನೆ.. ಇತ್ಯಾದಿ. ಹಾಗೆಯೇ ರಶೀದ್‌ನನ್ನು ಬೆನ್ನಟ್ಟಿದ ಭೂಗತ ಲೋಕದ ಪಾತಕಿ ಪ್ರಕಾಶ್ ಪಾಂಡೇಶ್ವರ್ ಎಂಬಾತ ಕ್ರೈಂ ವಾರ್ತೆ ಎಂಬ ಪತ್ರಿಕೆಯ ಸಂಪಾದಕ, ಹೇಗಿದೆ ವೇಷ?! ದಂಧೆಯೇ ಅಕ್ರಮ-ನಕಲಿ ಲಾಟರಿ ವ್ಯವಹಾರ. ಈತನದ್ದೇ ರೌಡಿಪಡೆ. ಇತ್ತೀಚಿನ ಬೋಳಾರದ ಮೂವರ ಕೊಲೆ ಪ್ರಕರಣದಲ್ಲಿ ಸದ್ಯ ಕಂಬಿ ಎಣಿಸುತ್ತಿದ್ದಾನೆ.

ನವೆಂಬರ್ 1 ರಂದು ಸಂಜೆ ಬೈಕಂಪಾಡಿಯ ಲಾಡ್ಜ್‌ನಲ್ಲಿ ಲುಂಗಿಯಿಂದ ರಶೀದ್ ನೇಣುಹಾಕಿಕೊಂಡ ಎನ್ನಲಾಗುತ್ತಿದೆ. ಬೋಳಾರದ ಕೊಲೆಗಳ ವರದಿ ಮಾಡಿದ್ದ ರಶೀದ್‌ಗೂ ಬೆದರಿಕೆ ಇತ್ತು. ಆತನಿಗೆ ಮಾತ್ರವಲ್ಲ ಅಲ್ಲಿನ ಸುಮಾರು ಬಹುತೇಕ ವರದಿಗಾರರಿಗೆ ಬೆದರಿಕೆ ಒಡ್ಡಿ ಬಾಯಿ ಮುಚ್ಚಿಸಲು ಯತ್ನಿಸಲಾಗಿತ್ತು. ರಶೀದ್‌ನನ್ನು ಮುಖ್ಯವಾಗಿ ಗುರಿಯಾಗಿಸಿ, ಆತನ ಬಗ್ಗೆ ಇಲ್ಲಸಲ್ಲದ ಕೀಳುಮಟ್ಟದ ವರದಿಯನ್ನು ಕ್ರೈಂ ವಾರ್ತೆಯಲ್ಲಿ ಪ್ರಕಟಿಸಿ ರಶೀದ್‌ನ ಸಹೋದರಿಯ ವಿವಾಹ ಸಮಾರಂಭದ ಸಂದರ್ಭಕ್ಕೆ ಊರಿನ ಗೋಡೆಗಳಿಗೆಲ್ಲಾ ಅಂಟಿಸಿ, ಪತ್ರಿಕೆ ಹಂಚಿಸಿ ಯಾತನೆ ನೀಡಿದ್ದರು.

ರಶೀದ್‌ನ ಬಲಿ ಎಚ್ಚರಿಕೆಯ ಗಂಟೆ. ಇದರ ಹಿಂದಿರುವ ಶಕ್ತಿಗಳನ್ನು ಎದುರಿಸಿ, ಹೋರಾಟ ಮುಂದುವರಿಯಬೇಕಿದೆ. ಅನ್ಯಾಯ ಅಕ್ರಮ, ದಬ್ಬಾಳಿಕೆಗಳ ವಿರುದ್ಧದ ಹೋರಾಟ ಇಮ್ಮಡಿಗೊಳ್ಳಬೇಕಿದೆ.

ಒತ್ತಾಯದನಂತರ ಕರ್ನಾಟಕದ ಗೃಹಸಚಿವ ಖರ್ಗೆಯವರು 'ಸಿಓಡಿ' ತನಿಖೆಗೆ ಒಪ್ಪಿಸಿದ್ದಾರೆ. ಈ ತನಿಖೆ ಆಳವಾಗಿ ನಡೆಯಬೇಕು. ಅಪರಾಧಿಗಳನ್ನು ಬಯಲಿಗೆಳೆಯಬೇಕು. ಮುಖ್ಯವಾದ ನ್ಯಾಯಕ್ಕಾಗಿ ನಡೆವ ಹೋರಾಟ ನಿಲ್ಲದೇ ಸಾಗಬೇಕು.



ಗಾಂಧಿಪ್ರತಿಮೆ ಬಳಿ ಸಂತಾಪ ಸಭೆಯಲ್ಲಿ ಮಾತನಾಡುತ್ತಿರುವ ಪ್ರೊ. ರಾಮದಾಸ್


ಗಡಿನಾಡ ಗಾಂಧಿ ಈಗೇಕೆ ನಮ್ಮ ಪುಸ್ತಕಗಳಲ್ಲಿಲ್ಲ?

"ಶಾಲಾ ಕೊಠಡಿಗಳಲ್ಲಿ, ಮಕ್ಕಳ ಪುಸ್ತಗಳಲ್ಲಿ ದ್ವೇಷದ ಪಾಠಗಳು ತಲೆಹಾಕುತ್ತಿವೆ. ಆದ್ದರಿಂದ ನಾನು ಶಿಕ್ಷಣದಲ್ಲಿ 'ಸಹನಶೀಲತೆ'ಯ ಬಗ್ಗೆ ಮಾತನಾಡಲು ಆರಂಭಿಸಿದ್ದೇನೆ"

ಪತ್ರಕರ್ತೆ, ಬಹುಮುಖಿ ಸಂಸ್ಕೃತಿಯ ಪ್ರತಿಪಾದಕಿ, ಮಾನವ ಹಕ್ಕುಗಳ ಹೋರಾಟ ಗಾರ್ತಿ, ಮುಂಬೈನ ತೀಸ್ತಾ ಸೆತಾಲ್ವಾಡ್ ಮೊನ್ನೆ ಮಂಗಳೂರಿನಲ್ಲಿ 'ಶಿಕ್ಷಣದಲ್ಲಿ ಸಹನಶೀಲನತೆಯ ಬೋಧನೆ' ಕುರಿತು ತಮ್ಮ ಮಾತು ಆರಂಭಿಸಿದ್ದು ಹೀಗೆ.

ಕೋಮುವಾದದ ವಿರುದ್ಧ ಒಂದು ದಶಕದಿಂದಲೂ ಹೋರಾಟ ನಡೆಸುತ್ತಿರುವ 'ಕಮ್ಯುನಲಿಸಂ ಕಾಂಬ್ಯಾಟ್' ಎಂಬ ಮಾಸಿಕದ ಸಂಪಾದಕಿಯಾಗಿ ಹೆಚ್ಚಿನವರಿಗೆ ಪರಿಚಿತರಾದ ತೀಸ್ತಾ ಸೆತಾಲ್ವಾಡ್ ಉತ್ತಮ ಭವಿಷ್ಯಕ್ಕಾಗಿ ಇಂದಿನ ಮಕ್ಕಳನ್ನು ಚೆನ್ನಾಗಿ ರೂಪಿಸಬೇಕೆಂದು ಕೆಲಸ ಮಾಡುತ್ತಿರುವವರು.

ಮಂಗಳೂರಿನ ಸೆಂಟ್ ಆನ್ಸ್ ಶಿಕ್ಷಕರ ತರಬೇತಿ ಕಾಲೇಜಿನಲ್ಲಿ 'ಶಿಕ್ಷಣದಲ್ಲಿ ಸಹನಶೀಲತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಬೋಧನೆ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ತೀಸ್ತಾ ಒಂದು ದಶಕದಿಂದ ವಿವಿಧ ರಾಜ್ಯಗಳ ಶಾಲಾ ಪಠ್ಯಗಳನ್ನು ಅಧ್ಯಯನ ಮಾಡಿರುವ ಅನುಭವದ ಹಿನ್ನೆಲೆಯಲ್ಲಿ ಇಂದಿನ ಪಠ್ಯಕ್ರಮ ಕುರಿತು ಹಾಗೂ ಶಿಕ್ಷಣಸಂಸ್ಥೆಗಳು ಸಾರ್ವಜನಿಕರಿಂದ ದೂರವಾಗುತ್ತಿರುವುದರ ಕುರಿತು ಮಾತನಾಡಿದರು. ಬಹುಸಂಖ್ಯಾತರ ಕೋಮುವಾದವು ಅಲ್ಪಸಂಖ್ಯಾತರನ್ನು ಅತಂತ್ರಗೊಳಿಸಲು ಬಳಸುತ್ತಿರುವ ಹಲವುತಂತ್ರಗಾರಿಕೆಗಳಲ್ಲಿ ಶಿಕ್ಷಣದ ಕೋಮುವಾದೀಕರಣವೂ ಒಂದು ಎಂದು ಅಭಿಪ್ರಾಯಪಟ್ಟ ತೀಸ್ತಾ ಗುಜರಾತ್‌ನ ಪಠ್ಯಪುಸ್ತಕಗಳಲ್ಲಿರುವ ಇಂತಹ ಹಲವು ಸುಳ್ಳುಗಳನ್ನು ಪಟ್ಟಿ ಮಾಡಿದರು. 5ನೇ ತರಗತಿಯಿಂದ 10ನೇ ತರಗತಿಯವರೆಗಿನ ಪಠ್ಯ ಪುಸ್ತಕಗಳಲ್ಲಿ, "ಹಿಂದೂ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿಯ ಪ್ರಮುಖ ಆಧಾರ', 'ವರ್ಣಬೇಧ ಪದ್ಧತಿಯು ಮಾನವ ಜನಾಂಗಕ್ಕೆ ನೀಡಿದ ಅತ್ಯುತ್ತಮ ಕೊಡುಗೆ', 'ಮುಸ್ಲಿಮರು, ಕ್ರೈಸ್ತರು ಹಾಗೂ ಪಾರ್ಸಿಗಳು ಈ ದೇಶಕ್ಕೆ ಹೊರಗಿನವರು' 'ಸತಿಪದ್ಧತಿ ಮತ್ತು ಜೋಹರ್ ಆಚರಣೆಗಳು ಭಾರತೀಯ ಸಂಸ್ಕೃತಿಯ ಮೌಲ್ಯಗಳು' ಹಾಗೂ 'ಫ್ಯಾಸಿಸಂ ಮತ್ತು ನಾಝಿ ಪಂಥಗಳು ಇಟಲಿ ಮತ್ತು ಜರ್ಮನಿಯನ್ನು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಶಾಲಿ ಯನ್ನಾಗಿ ಮಾಡಿದವು' ಎನ್ನುವ ಸಾಲುಗಳಿವೆ. ಇಂತಹ ಪಾಠಗಳು ಸ್ನೇಹಿತರನ್ನೂ ಶತ್ರುಗಳನ್ನಾಗಿಸುತ್ತವೆ ಎಂದರು.



ಜೈಟ್ಲಿಯಂಥವರು.....

ಮಕ್ಕಳು 10 ವರ್ಷಗಳ ಶಾಲಾ ಅಭ್ಯಾಸದ ನಂತರ ಪ್ರಜಾಸತ್ತಾತ್ಮಕ ವ್ಯಕ್ತಿಯಾಗಿ ರೂಪುಗೊಳ್ಳುತ್ತಾರೆ ಎಂದು ನಾವೆಲ್ಲ ನಂಬಿದ್ದೇವೆ. ಆದರೆ ಇಂದಿನ ಪಠ್ಯಕ್ರಮವನ್ನು, ಶಿಕ್ಷಕರ ದೃಷ್ಟಿಕೋನವನ್ನು, ಶಾಲೆಗಳ ವಾತಾವರಣವನ್ನು ಗಮನಿಸಿದರೆ ಅಲ್ಲಿರುವುದೆಲ್ಲ ಪ್ರಜಾಪ್ರಭುತ್ವದ ವಿರೋಧಿ ಮೌಲ್ಯಗಳೇ ಆಗಿವೆ. ಪರಸ್ಪರ ಅಸಹನೆ ಅಲ್ಲಿಯ ಪ್ರಧಾನ ಮೌಲ್ಯವಾಗಿರುತ್ತದೆ. ಮಕ್ಕಳು ನಿತ್ಯ ಎದುರಿಸುವ ಯಾವ ಸಂಘರ್ಷಣೆಗಳಿಗೂ ಶಾಲೆಗಳಲ್ಲಿ ಉತ್ತರವೇ ದೊರಕುವುದಿಲ್ಲ. ಶಿಕ್ಷಕರು ಸಂಘರ್ಷಗಳನ್ನು ತಿಳಿಸಿ ಹೇಳುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಶಾಲೆಗಳು ಮಕ್ಕಳು, ಶಿಕ್ಷಕರು, ಪೋಷಕರು ಹಾಗೂ ಇತರೆ ಸಾರ್ವಜನಿಕರು ಸೇರಿ ಕಲಿಯುವ ಸಾರ್ವಜನಿಕ ಸ್ಥಳವಾಗದೆ 'ಖಾಸಗಿ ಆಸ್ತಿಗಳಾಗುತ್ತಿವೆ' ಎಂದರು. ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಹೊಣೆಗಾರಿಕೆಯ ಕುರಿತೂ ಮಾತನಾಡಿದ ಅವರು ದುರಾದೃಷ್ಟವಶಾತ್ ಸಾಹುಕಾರರ ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಡುವ ಚರ್ಚಿಗೆ ಸಂಸ್ಥೆಗಳು ಅರುಣ್ ಜೈಟ್ಲಿಗಳಂತಹ ಕೋಮುವಾದಿಗಳನ್ನು ಹುಟ್ಟಿ ಹಾಕುತ್ತಿವೆ. ಇನ್ನಾದರೂ ಚರ್ಚ್ ಸಂಸ್ಥೆಗಳು ಮಾನವ ಹಕ್ಕುಗಳ ರಕ್ಷಣೆ ಮಾಡುವ, ಇತರೆ ಧರ್ಮೀಯರೊಂದಿಗೆ ಸಹಬಾಳ್ವೆ ಬೋಧಿಸುವ ಶಿಕ್ಷಣಕ್ಕೆ ಆದ್ಯತೆ ಕೊಡಬೇಕು' ಎಂದರು.

ಕೋಮುವಾದದ ವಿರುದ್ಧ ಒಂದು ದಶಕದಿಂದಲೂ ನಿರಂತರ ಹೋರಾಟ ನಡೆಸುತ್ತಿರುವ 'ಕಮ್ಯುನಲಿಸಂ ಕಾಂಬ್ಯಾಟ್' ಮಾಸಿಕದ ಸಂಪಾದಕಿ ತೀಸ್ತಾ ಸೆತಾಲ್ವಾಡ್ ಮಂಗಳೂರಿನ ಶಿಕ್ಷಣ ಸಂಸ್ಥೆಯೊಂದರ ಕಾರ್ಯಕ್ರಮಕ್ಕೆ ಬಂದಿದ್ದರು. ಗುಜರಾತ್‌ನ ಹತ್ಯಾಕಾಂಡದ ಬೆಚ್ಚಿ ಬೀಳುವ ವಿವರಗಳನ್ನು ಎಳೆಎಳೆಯಾಗಿ ಹೊರ ಜಗತ್ತಿಗೆ ಬಿಡಿಸಿಟ್ಟ ದಿಟ್ಟ ಪತ್ರಕರ್ತೆ, ಬಹುಮುಖಿ ಸಂಸ್ಕೃತಿಯ ಪ್ರತಿಪಾದಕಿ, ಮಾನವಹಕ್ಕುಗಳ ಹೋರಾಟಗಾರ್ತಿ, ಅಲ್ಲಿ ಹಂಚಿಕೊಂಡ ವಿಚಾರಗಳು ಇಲ್ಲಿವೆ.

ಇದೆಂತಹ ಇತಿಹಾಸ ಕಲಿಕೆ

ಎರಡು ದಶಕದ ಹಿಂದಿನ ಇತಿಹಾಸ ಬೋಧನೆಗೂ ಇಂದಿನ ಪುಸ್ತಕಕ್ಕೂ ಇರುವ ವ್ಯತ್ಯಾಸಗಳನ್ನು ಪ್ರಸ್ತಾಪಿಸುತ್ತಾ 'ಗಡಿನಾಡ ಗಾಂಧಿ' ಎಂದೇ ಹೆಸರಾದ ಖಾನ್ ಅಬ್ದುಲ್ ಗಫಾರ್ ಖಾನ್ ಅವರು ಈಗಿನ ಪಠ್ಯಪುಸ್ತಕಗಳಿಂದ ಮರೆಯಾಗಿದ್ದು ಯಾಕೆ? ಎಂಬ ಪ್ರಶ್ನೆ ಮುಂದಿಟ್ಟರು. 'ಗಾಂಧೀಜಿಯ ಹತ್ಯೆಯಾಯಿತು' ಎಂಬ ಒಂದು ವಾಕ್ಯದಲ್ಲಿ ಭಾರತದ ಇತಿಹಾಸದ ಒಂದು ಅಧ್ಯಾಯಕ್ಕೇ ತೆರೆ ಎಳೆಯುವ ಪಠ್ಯಗಳು ಗಾಂಧೀಜಿಯ ಹತ್ಯೆಯ ಹಿಂದಿನ ಹುನ್ನಾರಗಳೇನು?, ಅಂಹಿಸೆಯನ್ನು ಬೋಧಿಸಿದ ವ್ಯಕ್ತಿಯಿಂದ ಯಾರಿಗೆ ತೊಂದರೆ ಇತ್ತು? ಅವರನ್ನು ಕೊಲೆ ಮಾಡುವಂತಹ ತೊಂದರೆ ಅದಾವುದಾಗಿತ್ತು ಎಂಬುದನ್ನು ಇದುವರೆಗೂ ಯಾವ ಪುಸ್ತಕದಲ್ಲೂ ಹೇಳಿಕೊಡಲಿಲ್ಲ ಎಂದರು. ಇತಿಹಾಸ ಮತ್ತು ಸಮಾಜ ಶಾಸ್ತ್ರದ ಬೋಧನೆ ಸದಾ ಹಣ ಮತ್ತು ಅಧಿಕಾರ ಇರುವವರ ಪರವಾಗಿ ವಾಲುತ್ತದೆ' ಎಂದು ಪ್ರತಿಪಾದಿಸಿದ ಅವರು ಶ್ರೀಲಂಕಾದಲ್ಲಿ ಸಿಂಹಳಿಯರಿಗೊಂದು ಇತಿಹಾಸದಪಠ್ಯ, ತಮಿಳು ಮಕ್ಕಳಿಗೊಂದು ಇತಿಹಾಸದ ಪಠ್ಯವಿದೆ ಎಂದರು.

ಕದಲು

ಸಂಸ್ಕೃತದ ಭಾಷೆಯನ್ನು ಪುನರುಜ್ಜೀವನ ಗೊಳಿಸಲು ಹೊರಟ ಸಂಘ ಪರಿವಾರದವರು 'ಪಾಲಿ' ಭಾಷೆಯನ್ನೇಕೆ ನಿರ್ಲಕ್ಷಿಸಿದ ರೆಂದರೆ, ಅದು ಜನ ಸಾಮಾನ್ಯರ ಭಾಷೆಯಾಗಿತ್ತು. ಪಾಲಿ ಜನತೆಯ ಭಾಷೆಯಾಗಿತ್ತೆಂದೇ ಅಶೋಕ ಚಕ್ರವರ್ತಿ ತನ್ನ ಶಾಸನಗಳನ್ನು ಪಾಲಿ ಭಾಷೆಯಲ್ಲಿ ಬರೆಸಿದ. ಆದರೆ ಇಂದಿನ ಚಕ್ರವರ್ತಿಗಳು ಜನರಿಂದ ದೂರವಾಗುವ ಆಸ್ಥಾನ ಭಾಷೆಯಲ್ಲಿ ಮಾತನಾಡುತ್ತಾರೆಂದು ಟೀಕಿಸಿದರು.

ಮಂಗಳೂರಿಗೆ ನೀಡಿದ ಈ ಭೇಟಿಯ ಸಂದರ್ಭದಲ್ಲಿ 'ಕೋಮುವಾದದ ವಿರುದ್ಧ ಹೋರಾಟ' ಕುರಿತು ಸಮಾನ ಮನಸ್ಕರೊಂದಿಗೆ ತೀಸ್ತಾ ಮಾತುಕತೆ ನಡೆಸಿದರು.

ಹೋರಾಟದ ಅಸ್ತ್ರಗಳು...

ಸಮಾಜ ವಿರೋಧಿ ಶಕ್ತಿಗಳ ವಿರುದ್ಧದ ಹೋರಾಟಕ್ಕೆ ಇರುವ ಹಲವು ನೆಲೆಗಳನ್ನು ಬಿಡಿಸಿಡುತ್ತಾ ಹೋದ ತೀಸ್ತಾ ಅತ್ಯಂತ ಸರಳವಾಗಿ ಹಾಗೂ ಅತ್ಯಂತ ಪ್ರಭಾವಶಾಲಿಯಾದ ನೆಲೆಯಾಗಿ ಪ್ರತಿಪಾದಿಸಿದ್ದು 'ಸಹಭೋಜನ'ವನ್ನು. ಒಂದು ಪ್ರದೇಶದಲ್ಲಿ ವಾಸಿಸುವ ಬೇರೆ ಬೇರೆ ಜನಾಂಗದ ಕುಟುಂಬಗಳು ಆಗಾಗ ತಮ್ಮ ಸಂಸ್ಕೃತಿಯ ವಿಶೇಷ ಅಡುಗೆಗಳೊಂದಿಗೆ ಸಹ ಭೋಜನಕೂಟ ನಡೆಸುವುದರಿಂದ ಸಂಬಂಧಗಳು ಬೆಸೆದುಕೊಳ್ಳುವ ಪರಿ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ ಎಂದರು.

ಇದರೊಂದಿಗೆ ಮೊಹಲ್ಲಾ ಸಮಿತಿಗಳ ರಚನೆ, ಶಾಲೆ-ಸಮುದಾಯ ಭವನ ಮುಂತಾದ ಸಾರ್ವಜನಿಕ ಸ್ಥಳಗಳ ಕ್ರಿಯಾಶೀಲ ಬಳಸುವಿಕೆ, ಮಾಧ್ಯಮಗಳ ಮೂಲಕ ಸಹಬಾಳ್ವೆಯ ಪ್ರತಿಪಾದನೆ, ಮನೆ ಮತ್ತು ಶಾಲೆಗಳಲ್ಲಿ ಸಹಬಾಳ್ವೆಯ ಬೋಧನೆಗಳನ್ನು ಕೋಮುವಾದ ವಿರೋಧಿ ಹೋರಾಟದ ಅಸ್ತ್ರವಾಗಿ ಪರಿಗಣಿಸಬಹುದೆಂದರು. ಇಂತಹ ಯಾವುದೇ ಅಸ್ತ್ರ ಸಮಾಜ ಘಾತುಕ ಶಕ್ತಿಗಳ ಕೈವಶವಾಗುವ ಮೊದಲು ನಾವು ಅದನ್ನು ಸಮಾಜದ ಒಳಿತಿಗೆ ಬಳಸಬೇಕೆಂದರು.

ಶಿಕ್ಷಕರು, ವೈದ್ಯರು, ವಕೀಲರು, ವ್ಯಾಪಾರಸ್ಥರು, ಕಲಾವಿದರು, ಬರಹಗಾರರು, ಪತ್ರಕರ್ತರು, ವಿದ್ಯಾರ್ಥಿಗಳು, ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳ ಪದಾಧಿಕಾರಿಗಳು, ಕಾರ್ಮಿಕರ ಸಂಘಟನೆಗಳ ಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಇಂಜಿನಿಯರುಗಳು ಮುಂತಾದ ಎಲ್ಲಾ ಕ್ಷೇತ್ರಗಳ ಪ್ರತಿನಿಧಿಗಳನ್ನೊಳಗೊಂಡಿದ್ದ ಸಂವಾದವು ಕೋಮುವಾದ ವಿರೋಧಿ ಹೋರಾಟದಲ್ಲಿ ಅಳವಡಿಸಿಕೊಳ್ಳಬಹುದಾದ ಹೊಸಹೊಸ ಅಸ್ತ್ರಗಳ ಬಗ್ಗೆ ಬೆಳಕು ಚೆಲ್ಲಿತು. ಬಹುಸಂಖ್ಯಾತರ ಹಾಗೂ ಅಲ್ಪಸಂಖ್ಯಾತರ ಕೋಮುವಾದಗಳೆರಡನ್ನೂ ಎದುರಿಸುವ ಬಗ್ಗೆ ಮಾತುಕತೆ ನಡೆಯಿತು.

'ಸಬ್‌ರಂಗ್' ನ ಗೆಳತಿ ತೀಸ್ತಾ ಸೆತಾಲ್ವಾಡ್

ಪತ್ರಕರ್ತೆ, ಮಾನವ ಹಕ್ಕುಗಳ ಹೋರಾಟ ಗಾರ್ತಿ, ಮುಂಬೈನ ತೀಸ್ತಾ ಸೆತಾಲ್ವಾಡ್‌ಗೆ ಈ ವರ್ಷದ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಸಂದಿದೆ.

ಮೂರು ತಿಂಗಳು ಜನಾಂಗೀಯ ಹತ್ಯೆಯೆಂಬ ಬೆಂಕಿಯಲ್ಲಿ ಹೊತ್ತಿ ಉರಿದ ಗುಜರಾತ್‌ನಲ್ಲಿ ನೊಂದವರಿಗೆ ಸಾಂತ್ವನದ ದನಿಯಾಗಿ, ಆಕ್ರಮಣಕಾರರಿಗೆ ಪ್ರತಿರೋಧದ ಶಕ್ತಿಯಾಗಿ, ಅಧಿಕಾರಸ್ಥರ ಹುನ್ನಾರ ಬಯಲಿಗೆಳೆವ ಪತ್ರಕರ್ತೆಯಾಗಿ, ಮಾನವಹಕ್ಕುಗಳ ಸಂರಕ್ಷಕಿಯಾಗಿ, ಸತ್ಯಶೋಧನಾ ಸಮಿತಿಯ ಸದಸ್ಯೆಯಾಗಿ, ಹಲ್ಲೆಗೊಳಗಾದವರಿಗೆ ನ್ಯಾಯ ಒದಗಿಸಲು ಮಾಡಿದ ಕೆಲಸಗಳಿಗಾಗಿ ಈ ಪ್ರಶಸ್ತಿ ಸಂದಿದೆ.

ಈಗ ತೀಸ್ತಾ 'ಭಾರತವೆಂದರೆ ಗುಜರಾತ್ ಮಾತ್ರವಲ್ಲ ಹಾಗೂ ಭಾರತ ಗುಜರಾತ್ ಆಗಬಾರದು' ಎಂಬ ಸಂದೇಶ ಹರಡುತ್ತಿದ್ದಾರೆ.

ತೀಸ್ತಾ ಅವರ ಪ್ರಮುಖ ಕಾರ್ಯಕ್ಷೇತ್ರ ಪತ್ರಿಕೋದ್ಯಮ. ಪ್ರಧಾನ ವಾಹಿನಿಯ ಪತ್ರಿಕೋದ್ಯಮದಲ್ಲಿ ಅತೃಪ್ತರಾದ ಅವರು ಸಂಗಾತಿ ಜಾವೇದ್ ಆನಂದ್ ಅವರೊಂದಿಗೆ ಸೇರಿ 1993 ರಲ್ಲಿ ಆರಂಭಿಸಿದ್ದು 'ಕಮ್ಯುನಸಲಿಸಂ ಕಾಂಬ್ಯಾಟ್' ಎಂಬ ಮಾಸಿಕವನ್ನು. ಎಲ್ಲ ಬಗೆಯ ಕೋಮುವಾದವನ್ನು ಒರಗೆ ಹಚ್ಚುತ್ತಾ ಬಂದಿರುವ ಈ ಪತ್ರಿಕೆ ಕೋಮುವಾದ ತಳೆಯುವ ಎಲ್ಲಾ ಮುಖಗಳನ್ನು ಬಯಲಿಗೆಳೆಯುತ್ತಾ ಬಂದಿದೆ.

1993 ರ ಮುಂಬೈನ ಸರಣಿ ಬಾಂಬ್ ಸ್ಫೋಟದ ಘಟನೆ ಇವರ ವೃತ್ತಿ ಮತ್ತು ಪ್ರವೃತ್ತಿ ಜೀವನದಲ್ಲಿ ಮೈಲಿಗಲ್ಲು. ಈ ಗಲಭೆಯ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳ ನಡುವೆ ನಡೆಯುತ್ತಿದ್ದ ವೈರ್‌ಲೆಸ್ ಮಾತುಕತೆಗಳನ್ನು ಟ್ಯಾಪ್ ಮಾಡಿ, ಆ ಮಾತುಕತೆಯಲ್ಲಿದ್ದ 'ಅಲ್ಪಸಂಖ್ಯಾತರ ವಿರೋಧಿ' ಅಂಶಗಳನ್ನು ತೀಸ್ತಾ ಬಹಿರಂಗ ಪಡಿಸಿದ್ದರು. ಆ ಮೂಲಕ ಪೋಲೀಸ್ ಇಲಾಖೆಯಲ್ಲಿದ್ದ ಅಲ್ಪಸಂಖ್ಯಾತ ವಿರೋಧಿ ಭಾವನೆಯನ್ನು, ಹಾಗೂ ಈ ಭಾವನೆ ಗಲಭೆಯ ಸಂದರ್ಭದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಕೆಲಸ ಮಾಡಿದ್ದನ್ನು ಗುರುತಿಸಲು ತಮ್ಮ ಕಾಣಿಕೆ ಸಲ್ಲಿಸಿದ್ದರು. ಈ ದಿಟ್ಟ ವರದಿಗಾಗಿ ಪತ್ರಕರ್ತೆಯರಿಗೆ ಮೀಸಲಾದ 'ಚಮೇಲಿ ದೇವಿ' ಪ್ರಶಸ್ತಿಯನ್ನು ತೀಸ್ತಾ ಪಡೆದರು.

ಇವರ ಆಸಕ್ತಿಯ ಮತ್ತೊಂದು ಕ್ಷೇತ್ರ ಶಿಕ್ಷಣ. ಮಕ್ಕಳಿಗೆ ಚಿಕ್ಕಂದಿನಿಂದಲೇ ಸಹಬಾಳ್ವೆಯ, ಸಹನಶೀಲತೆಯ, ಬಹುಮುಖಿ ಸಂಸ್ಕೃತಿಯ ಅರಿವು ಮೂಡಿಸಬೇಕೆನ್ನುವ ತೀಸ್ತಾ, ನಮ್ಮ ಶಾಲಾ ಪಠ್ಯ ಪುಸ್ತಕಗಳಲ್ಲಿರುವ ಸಮಾಜವಿರೋಧಿ ಅಂಶಗಳನ್ನು ತೆಗೆದುಹಾಕಲು, ಸುಂದರ ಸಮಾಜ ನಿರ್ಮಾಣಕ್ಕೆ ಪೂರಕವಾದ ಪಠ್ಯ ರಚಿಸಲು ಶ್ರಮಿಸುತ್ತಾ ಬಂದಿದ್ದಾರೆ. ಹಲವು ರಾಜ್ಯಗಳ ಇತಿಹಾಸ ಮತ್ತು ಸಮಾಜ ಶಾಸ್ತ್ರಗಳ ಪಠ್ಯಕ್ರಮಗಳನ್ನು ಅಭ್ಯಸಿಸಿ, ಪರ್ಯಾಯ ಪಠ್ಯಕ್ರಮ ರೂಪಿಸಿದ್ದಾರೆ. ಈ ಪರ್ಯಾಯ ಪಠ್ಯಕ್ರಮಗಳನ್ನು ಹಲವು ಶಾಲೆಗಳಲ್ಲಿ ಜಾರಿಗೆ ತಂದಿದ್ದಾರೆ. ಇತಿಹಾಸ ಬೋಧನೆ ಕುರಿತು ಶಿಕ್ಷಕರಿಗೆ ಅಸಂಖ್ಯಾತ ತರಬೇತಿ ಶಿಬಿರಗಳನ್ನು ನಡೆಸಿದ್ದಾರೆ.

ತೀಸ್ತಾ ಹಾಗೂ ಅವರ ಗೆಳೆಯರು 'ಸಬ್‌ರಂಗ್' (ಎಲ್ಲಾ ಬಣ್ಣಗಳು) ಎಂಬ ಅರ್ಥಪೂರ್ಣ ಹೆಸರಿನ ಸಂಸ್ಥೆಯ ವ್ಯಾಪ್ತಿಯಲ್ಲಿ ಮಕ್ಕಳಿಗಾಗಿ 'ಕೋಜ್'(ಹುಡುಕಾಟ) ಮತ್ತು 'ಅಮನ್' ಎಂಬ ಯೋಜನೆಗಳ ಮೂಲಕ ಸಹಬಾಳ್ವೆ, ಪ್ರೀತಿ, ವಿಶ್ವಾದ ಮೌಲ್ಯಗಲನ್ನು ಬಿತ್ತುತ್ತಿದ್ದಾರೆ. 'ಪೀಸ್ ಪ್ಯಾಲ್ಸ್' (ಶಾಂತಿಯ ಗೆಳೆಯರು) ಎಂಬ ಮತ್ತೊಂದು ಯೋಜನೆ ದೊಡ್ಡವರಿಂದಾಗಿ ಸಂಘರ್ಷದಲ್ಲಿರುವ ಭಾರತ ಮತ್ತು ಪಾಕಿಸ್ತಾನದ ಚಿಕ್ಕಮಕ್ಕಳ ನಡುವೆ ಸ್ನೇಹದ ಸೇತುವೆ ಕಟ್ಟುತ್ತಿದೆ.

'ಇತಿಹಾಸದ ಪುಸ್ತಕಗಳು ನಮ್ಮ ನಿಮ್ಮಂತಹ ಜನರ ಕಥೆ ಹೇಳಬೇಕು. ಜನತೆಯ ಇತಿಹಾಸ ರಚನೆಯಾಗಬೇಕು" ಎಂಬುದು ಇವರ ಮತ್ತೊಂದು ಕನಸು. ಇಂತಹ ಕನಸನ್ನು ಹಂಚಿಕೊಳ್ಳುವ ಇತಿಹಾಸ ತಜ್ಞರಾದ ಇರ್ಫಾನ್ ಹಬೀಬ್, ಕೆ.ಎನ್.ಪಣಿಕ್ಕರ್, ರೊಮಿಲಾ ಥಾಪರ್ ಮುಂತಾದವರ ಜೊತೆಯಲ್ಲೂ ಸಕ್ರಿಯರಾಗಿದ್ದಾರೆ.

ಏಕಕಾಲಕ್ಕೆ, ಇಷ್ಟೆಲ್ಲ ಕೆಲಸ ಮಾಡುವ ತೀಸ್ತಾ ಅವರ ಮುಖ್ಯ ಗುಣ 'ಅಧ್ಯಯನ ಶೀಲತೆ'. ಮಾಹಿತಿಗಳನ್ನು ಶೋಧಿಸಿ, ತೆಗೆದು ಅಧ್ಯಯನ ಮಾಡಿ, ವಿಮರ್ಶೆಯ ಒರೆಗಲ್ಲಿಗೆ ಹಚ್ಚುವ ಅವರ ಪ್ರವೃತ್ತಿ ಅವರನ್ನು ವಿಶಿಷ್ಟ ವ್ಯಕ್ತಿಯನ್ನಾಗಿಸಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH